ದೆಹಲಿ ವಾರ್ತೆ
ಸೆಪ್ಟಂಬರ್ 22 , 2026, ಮಂಗಳವಾರ



ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು



ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

## ಕರಾವಳಿಗೆ ಪ್ರಗತಿಯ ಅಲೆ

# ಸುಗಮ ಸಂಪರ್ಕಕ್ಕೆ ರಸ್ತೆಗಳ ಅಭಿವೃದ್ಧಿ

### ₹10,000 ಕೋಟಿ

"ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆ" ಯಡಿ 10,000 ಕೋಟಿ ರೂ. ವೆಚ್ಚದಲ್ಲಿ 15,000 ಕಿ.ಮೀ. ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃದ್ಧಿ

ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ₹700 ಕೋಟಿ ಮೀಸಲು

ಈ ಯೋಜನೆ ಮೂಲಕ ಗ್ರಾಮ, ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಕೇಂದ್ರಗಳ ನಡುವೆ ಸುಗಮ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶ

### ₹6,000 ಕೋಟಿ

ಮುಖ್ಯಮಂತ್ರಿಗಳ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ₹6000 ಕೋಟಿ ವೆಚ್ಚದಲ್ಲಿ ಗ್ರಾಮಗಳಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ

ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿಯ 606 ಗ್ರಾಮ ಪಂಚಾಯಿತಿಗಳ ರಸ್ತೆ ಅಭಿವೃದ್ಧಿಗೆ ₹606 ಕೋಟಿ ಅನುದಾನ

ಈ ಯೋಜನೆಯಡಿ ರಾಜ್ಯದ ಗ್ರಾಮೀಣ ರಸ್ತೆಗಳ ಗುಣಮಟ್ಟ ಹೆಚ್ಚಿಸುವ ಉದ್ದೇಶ



### ₹400 ಕೋಟಿ

ಮಂಗಳೂರು ಪಾಲಿಕೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಅನುದಾನ

### ₹20 ಕೋಟಿ

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮೀನುಗಾರಿಕಾ ಕೊಂಡಿ ರಸ್ತೆಗಳ ನಿರ್ವಹಣೆಗೆ ಅನುದಾನ

ದೃಢ ಕರ್ನಾಟಕದ ಸಂಕಲ್ಪ
ಶತಕದ ಪಥ ಪ್ರಗತಿಯ ರಥ


**ದಿಟ್ಟ ನುಡಿ, ಖಚಿತ ನಡೆ, ಸ್ಪಷ್ಟ ಗುರಿ**

ಗೃಹಲಕ್ಷ್ಮಿ | ಅನ್ನಭಾಗ್ಯ | ಗೃಹ ಜ್ಯೋತಿ | ಯುವನಿಧಿ | ಶಕ್ತಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka | https://dipr.karnataka.gov.in/ | Karnatakavarthe | ಕರ್ನಾಟಕ ವಾರ್ತೆ

**ನಿತ್ಯ ಪಂಚಾಂಗ 22.09.2026 ಮಂಗಳವಾರ**



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ-ಭಾದ್ರಪದ ಮಾಸ**

ಭಾದ್ರಪದ ಶುದ್ಧ, ಏಕಾದಶಿ, ಉತ್ತರಾಷಾಢ ನಕ್ಷತ್ರ, ಸರ್ವತ್ರ ಏಕಾದಶಿ/ಝುಲಝೂಲನೀ ಏಕಾದಶಿ, ಮೇಲುಕೋಟೆ ಪವಿತ್ರೋತ್ಸವಾರಂಭ, ರೋಸ್ ಡೇ(ಕ್ಯಾನ್ಸರ್ ರೋಗಿಗಳ ಯೋಗಕ್ಷೇಮ)

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಕೇಂದ್ರದ ಮಾನದಂಡವೇ ಹಲವು ತಾಲ್ಲೂಕುಗಳ ಬರ ಘೋಷಣೆಗೆ ಅಡ್ಡಿ

**ಬೆಂಗಳೂರು, ಸೆ.21:** ರಾಜ್ಯದಲ್ಲಿ ಬರ ಘೋಷಣೆ ವಿಚಾರ ಆಡಳಿತಾರೂಢ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ. ಕೇಂದ್ರ ಸರ್ಕಾರದ ಮಾನದಂಡಗಳನ್ನು ಆಧರಿಸಿ ಬರಪೀಡಿತ ತಾಲ್ಲೂಕುಗಳನ್ನು ಗುರುತಿಸಲಾಗುತ್ತಿದ್ದು, ಹಲವು ತಾಲ್ಲೂಕುಗಳಲ್ಲಿ ನಿಗದಿತ ಮಾನದಂಡಗಳು ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಬರ ಘೋಷಣೆ ಸಾಧ್ಯವಾಗಿಲ್ಲ. ಕೇಂದ್ರದ ಮಾನದಂಡವೇ ಅಭಾವ ಪರಿಸ್ಥಿತಿ ಇರುವ ತಾಲ್ಲೂಕುಗಳ ಘೋಷಣೆಗೆ ಅಡ್ಡಿಯಾಗಿದೆ.

ಕೇಂದ್ರದ ಬರ ಮಾನದಂಡಗಳ ಪ್ರಕಾರ ನಿರ್ದಿಷ್ಟ ಅವಧಿಯಲ್ಲಿ ನಿರಂತರ ಒಣಹವೆ, ಮಳೆಯ ಕೊರತೆ, ತೇವಾಂಶದ ಪ್ರಮಾಣ ಸೇರಿದಂತೆ ಹಲವು ಅಂಶಗಳನ್ನು ಪರಿಗಣಿಸಲಾಗುತ್ತದೆ. ಕೆಲವು ತಾಲ್ಲೂಕುಗಳಲ್ಲಿ ಈ ಮಾನದಂಡಗಳು ಪೂರ್ಣ ಪ್ರಮಾಣದಲ್ಲಿ ಈಡೇರದ ಹಿನ್ನೆಲೆಯಲ್ಲಿ ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸಲು ಸಾಧ್ಯವಾಗಿಲ್ಲ.

**ಕೇಂದ್ರದ ನೆರವಿನ ಮೇಲೂ ಪರಿಣಾಮದ ಆತಂಕ:**

ನಿಗದಿತ ಮಾನದಂಡ ಮೀರಿ ರಾಜಕೀಯ ಒತ್ತಡಕ್ಕೆ ಮಣಿದು ಬರ ಘೋಷಣೆ ಮಾಡಿದರೆ, ಮುಂದಿನ ಹಂತದಲ್ಲಿ ಕೇಂದ್ರದ ಅಧ್ಯಯನ ತಂಡ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪರಿಶೀಲನೆ ನಡೆಯಲಿದೆ. ತಪ್ಪು ಮಾಹಿತಿ ಆಧರಿಸಿ ಬರ ಘೋಷಣೆ ಮಾಡಲಾಗಿದೆ ಎಂಬ ಅನುಮಾನ ಮೂಡಿದರೆ ಕೇಂದ್ರದಿಂದ ದೊರೆಯಬೇಕಾದ ಆರ್ಥಿಕ ನೆರವು ವಿಳಂಬವಾಗುವ ಆತಂಕ ರಾಜ್ಯ ಸರ್ಕಾರಕ್ಕಿದೆ. ಪ್ರತಿಯೊಂದು ಬರಪೀಡಿತ ತಾಲ್ಲೂಕಿನ ಘೋಷಣೆಯನ್ನೂ ಕೇಂದ್ರ ಸರ್ಕಾರ ಪರಿಶೀಲನೆಗೆ ಒಳಪಡಿಸುವ ಸಾಧ್ಯತೆ ಇರುವುದರಿಂದ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಮಾನದಂಡ ಪಾಲಿಸುತ್ತಿದೆ. ಯಾವುದೇ ಹಂತದಲ್ಲಿ ಲೋಪ ಕಂಡುಬಂದು ಕೇಂದ್ರದ ನೆರವು ವಿಳಂಬವಾದರೆ ಬರ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

**ಆಡಳಿತ ಪಕ್ಷದ ಶಾಸಕರಿಂದಲೇ ಒತ್ತಡ**

ಮತ್ತೊಂದೆಡೆ ಮಾಜಿ ಸಚಿವ ಎಚ್.ಕೆ. ಪಾಟೀಲ್ ಅವರು ಗದಗ ತಾಲೂಕನ್ನು ಅಕ್ಟೋಬರ್ 10ರೊಳಗೆ ಬರಪೀಡಿತ ಎಂದು ಘೋಷಿಸದಿದ್ದರೆ ರಾಜೀನಾಮೆ ನೀಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಮತ್ತೊಂದೆಡೆ, ಜಗಳೂರು ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸದಿರುವುದನ್ನು ಖಂಡಿಸಿ ಪ್ರತಿಭಟನೆಗಳು ನಡೆದಿವೆ. ಈ ಹಿಂದೆ ಮೊಳಕಾಲ್ಮೂರು ಸೇರಿದಂತೆ ಹಲವು ತಾಲ್ಲೂಕುಗಳ ಶಾಸಕರೂ ಬರ ಘೋಷಣೆ ವಿಚಾರದಲ್ಲಿ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ವಿಶೇಷವಾಗಿ ಸಚಿವ ಸಂಪುಟ ವಿಸ್ತರಣೆಯಲ್ಲಿ ಅವಕಾಶ ವಂಚಿತರಾದ ಶಾಸಕರು ಬರ ಘೋಷಣೆ ವಿಚಾರದಲ್ಲಿ ಬಿಗಿಪಟ್ಟು ಹಿಡಿದಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ. ಇಂದಿನಿಂದ ಆರಂಭವಾಗಿರುವ ವಿಧಾನಮಂಡಲದ ವಿಶೇಷ ಅಧಿವೇಶನದಲ್ಲೂ ಬರ ಘೋಷಣೆ ವಿಚಾರ ಪ್ರಮುಖ ಚರ್ಚೆಯ ವಿಷಯವಾಗುವ ಸಾಧ್ಯತೆ ಇದೆ. ವಿರೋಧ ಪಕ್ಷದ ಶಾಸಕರಿಗಿಂತ ಆಡಳಿತ ಪಕ್ಷದ ಶಾಸಕರಿಂದಲೇ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ವ್ಯಕ್ತವಾಗುವ ಸಾಧ್ಯತೆ ಇದೆ.

# ಸಮಗ್ರ ಕೇಂದ್ರವಾಗಿ ಪಿಲಿಕುಳ ಧಾಮ ಅಭಿವೃದ್ಧಿಗೆ ಮಾಸ್ಟರ್‌ಪ್ಲಾನ್ ಪಿಪಿಪಿ ಮಾದರಿ: ಅಜಯ್ ಸಿಂಗ್



**ಆರ್ಥಿಕ ಸ್ವಾವಲಂಬನೆ ಮತ್ತು ವಿಜ್ಞಾನ ಪ್ರವಾಸೋದ್ಯಮಕ್ಕೂ ಒತ್ತು: ಸಚಿವ ಅಜಯ್ ಧರ್ಮಸಿಂಗ್**

ಬೆಂಗಳೂರು, ಸೆ.21: ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ವಿಜ್ಞಾನ, ಪರಿಸರ, ಶಿಕ್ಷಣ ಮತ್ತು ಪ್ರವಾಸೋದ್ಯಮ ವನ್ನು ಒಳಗೊಂಡ ಸಮಗ್ರ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಮಾಸ್ಟರ್ ಪ್ಲಾನ್ ರೂಪಿಸಲಾಗುತ್ತಿದ್ದು, ಇದಕ್ಕಾಗಿ ಶೀಘ್ರದಲ್ಲೇ ಟೆಂಡರ್ ಕರೆಯುವಂತೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರಿನಲ್ಲಿ ಸೋಮವಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳು, ವಿಜ್ಞಾನಿಗಳು ಹಾಗೂ ವಿವಿಧ ಅಧೀನ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಇಲಾಖೆಯ ಪ್ರಮುಖ ಯೋಜನೆಗಳು ಹಾಗೂ ಮುಂದಿನ ಕಾರ್ಯಕ್ರಮಗಳ ಕುರಿತು ಸಮಗ್ರ ಮಾಹಿತಿ ಪಡೆದರು.

ಪಿಲಿಕುಳದ ಅಭಿವೃದ್ಧಿ ಕುರಿತು ವಿಶೇಷವಾಗಿ ಚರ್ಚಿಸಿದ ಅವರು, ಲಭ್ಯವಿರುವ ಜಮೀನಿನ ಸಮರ್ಪಕ ಬಳಕೆ, ಈಗಿರುವ ಸೌಲಭ್ಯಗಳ ಉನ್ನತೀಕರಣ, ಹೊಸ ಆಕರ್ಷಣೆಗಳ ಅಭಿವೃದ್ಧಿ, ವಿಜ್ಞಾನ ಶಿಕ್ಷಣ, ಪರಿಸರ ಮತ್ತು ಜೈವವೈವಿಧ್ಯ ಸಂರಕ್ಷಣೆ ಹಾಗೂ ಪ್ರವಾಸಿಗರಿಗೆ ಉತ್ತಮ ಅನುಭವ ನೀಡುವ ಅಂಶಗಳು ಮಾಸ್ಟರ್ ಪ್ಲಾನ್‌ನಲ್ಲಿ ಒಳಗೊಳ್ಳಬೇಕು ಎಂದು ಸೂಚಿಸಿದರು.

ಪಿಲಿಕುಳದ ಅಭಿವೃದ್ಧಿಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು, ಯಾವ ಸೌಲಭ್ಯಗಳನ್ನು ವಾಣಿಜ್ಯವಾಗಿ ಮತ್ತು ಸುಸ್ಥಿರವಾಗಿ ನಿರ್ವಹಿಸಬಹುದು ಹಾಗೂ ನಿಸರ್ಗಧಾಮವನ್ನು ಆರ್ಥಿಕವಾಗಿ ಸದೃಢಗೊಳಿಸಲು ಯಾವ ರೀತಿಯ ಆದಾಯ ಮಾದರಿಗಳನ್ನು ರೂಪಿಸಬಹುದು ಎಂಬುದನ್ನು ಮಾಸ್ಟರ್ ಪ್ಲಾನ್‌ನಲ್ಲಿ ಸಮಗ್ರವಾಗಿ ಅಧ್ಯಯನ ಮಾಡಬೇಕು ಎಂದು ಸಚಿವರು ಸೂಚಿಸಿದರು.

ಸಭೆಯಲ್ಲಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳ, ಐಎಎಸ್, ಮಾಜಿ ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಕರ್ನಾಟಕ ಕ್ವಾಂಟಮ್ ಟಾಸ್ಕ್ ಫೋರ್ಸ್ ಅಧ್ಯಕ್ಷ ಹಾಗೂ ಐಐಎಸ್‌ಸಿ ಪ್ರಾಧ್ಯಾಪಕ ಪ್ರೊ. ಅರಿಂದಮ್ ಘೋಷ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ವಿವಿಧ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

**ಕಲ್ಯಾಣ ಕರ್ನಾಟಕದಲ್ಲಿ ಸೈನ್ಸ್ ಗ್ಯಾಲರಿ**

ವಿಜ್ಞಾನವನ್ನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಹೆಚ್ಚು ಆಕರ್ಷಕ ಹಾಗೂ ಅನುಭವಾಧಾರಿತವಾಗಿ ತಲುಪಿಸುವ ನಿಟ್ಟಿನಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲೂ ಸೈನ್ಸ್ ಗ್ಯಾಲರಿ ಸ್ಥಾಪಿಸುವ ಕುರಿತ ಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರಿನ ಸೈನ್ಸ್ ಗ್ಯಾಲರಿ ಏಷ್ಯಾದ ಮೊದಲ ಗ್ಯಾಲರಿ ಆಗಿದ್ದು, ವಿಜ್ಞಾನ, ಕಲೆ ಮತ್ತು ಸಾರ್ವಜನಿಕ ಸಂವಾದವನ್ನು ಒಂದೇ ವೇದಿಕೆಯಲ್ಲಿ ತರುವ ವಿಶಿಷ್ಟ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇದೇ ಮಾದರಿಯ ಅನುಭವವನ್ನು ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳು ಮತ್ತು ಯುವಜನರಿಗೂ ತಲುಪಿಸುವ ಸಾಧ್ಯತೆ ಪರಿಶೀಲಿಸುವಂತೆ ಸಚಿವ ಅಜಯ್ ಸಿಂಗ್ ಸೂಚಿಸಿದರು.

# ಮಾಜಿ ಶಾಸಕ ಆರ್.ಬಿ.ಶಿರಿಯಣ್ಣನವರ್‌ಗೆ ವಿಧಾನಸಭೆಯಲ್ಲಿ ಶ್ರದ್ಧಾಂಜಲಿ



ಬೆಂಗಳೂರು, ಸೆ.21: ಇತ್ತೀಚಿಗೆ ಅಗಲಿದ ಮಾಜಿ ಶಾಸಕ ಡಾ. ಆರ್.ಬಿ. ಶಿರಿಯಣ್ಣನವರ್ ಅವರಿಗೆ ವಿಧಾನಸಭೆಯಲ್ಲಿಂದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಲಾಪ ಆರಂಭದಲ್ಲಿ ವಿಧಾನಸಭೆಯಲ್ಲಿ ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು ಸಂತಾಪ ಸೂಚನಾ ನಿರ್ಣಯವನ್ನು ಕೈಗೆತ್ತಿಕೊಂಡರು. 1944ರ ಸೆಪ್ಟೆಂಬರ್ 15ರಂದು ಬಾಗಲಕೋಟೆ ಜಿಲ್ಲೆಯ ಶಿರೂರು ಗ್ರಾಮದಲ್ಲಿ ಜನಸಿದ್ದ ಡಾ. ಆರ್.ಬಿ.ಶಿರಿಯಣ್ಣನವರ್ ವೃತ್ತಿಯಲ್ಲಿ ವೈದ್ಯರಾಗಿದ್ದರು. ತಾಲ್ಲೂಕು ಆರೋಗ್ಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. 2004ರಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದಿಂದ 12ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸರಳತೆಗೆ ಹೆಸರುವಾಸಿಯಾಗಿದ್ದರು, ಆಗಸ್ಟ್ 27ರಂದು ನಿಧನರಾಗಿದ್ದಾರೆ ಎಂದು ಸದನಕ್ಕೆ ತಿಳಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ, 2004ರಲ್ಲಿ ಶಿರಿಯಣ್ಣನವರ್ ತಮೊಂದಿಗೆ ಶಾಸಕರಾಗಿದ್ದರು. ಸಜ್ಜನ, ಸರಳ ರಾಜಕಾರಣಿ. ಅಪಾರ ಪ್ರಮಾಣದ ಜನರ ವಿಶ್ವಾಸ ಗಳಿಸಿದ್ದರು ಎಂದು ಹೇಳಿದರು. ಒಮ್ಮೆ ಬಾಯಿ ತಪ್ಪಿ ಶಿರಿಯಣ್ಣನವರ್ ಬದಲಾಗಿ ತಿಮ್ಮಾಪುರ್ ಎಂದು ಹೇಳಿದ ಮುಖ್ಯಮಂತ್ರಿಯವರು, ತಕ್ಷಣವೇ ತಮ ತಪ್ಪನ್ನು ತಿದ್ದಿಕೊಂಡರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಆರ್.ಬಿ. ಶಿರಿಯಣ್ಣನವರ್ ಜನಾನುರಾಗಿಯಾಗಿ ಕೆಲಸ ಮಾಡಿದ್ದರು. ವೈದ್ಯರಾಗಿ ಜನಪ್ರಿಯತೆ ಗಳಿಸಿ ದ್ದರು, ಶಾಸಕರಾಗಿಯೂ ಒಳ್ಳೆಯ ಕೆಲಸ ಮಾಡಿದ್ದರು ಎಂದು ಕೊಂಡಾಡಿದರು.

ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ್, ಸಚಿವ ಲಕ್ಷ್ಮಣ ಸವದಿ ಮತ್ತಿತರರೂ ಶ್ರದ್ಧಾಂಜಲಿ ಸಲ್ಲಿಸಿದರು.

# ನಕಲಿ ಔಷಧ ಸರಬರಾಜಿನ ಮಾಹಿತಿ ಕಲೆಹಾಕಲು ಕ್ರಮ: ಸಚಿವ ಯು.ಟಿ. ಖಾದರ್

**ಬೆಂಗಳೂರು, ಸೆ.21:** ಈಗಾಗಲೇ 16 ಫಾರ್ಮಸಿಗಳ ಲೈಸೆನ್ಸ್‌ಗಳನ್ನು ರದ್ದುಗೊಳಿಸಲಾಗಿದೆ. ನಕಲಿ ಔಷಧಗಳು ಎಲ್ಲಿಗೆ ಪೂರೈಕೆಯಾಗಿವೆ, ಯಾವ ಆಸ್ಪತ್ರೆಗಳಿಗೆ ಹೋಗಿವೆ ಎಂಬ ಮಾಹಿತಿಯನ್ನು ಕಲೆಹಾಕಲು ಎಫ್‌ಡಿಎ ಮುಂದಾಗಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಔಷಧ ನಿಯಂತ್ರಣ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ನಕಲಿ ಔಷಧ ಪಡೆದಿರುವ ರೋಗಿಗಳ ಮಾಹಿತಿಯನ್ನೂ ಸಂಗ್ರಹಿಸಿ ವಿಚಾರಣೆ ನಡೆಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ನಕಲಿ ಔಷಧ ಸೇವನೆಯಿಂದ ರೋಗಿಗಳಿಗೆ ಏನಾದರೂ ತೊಂದರೆ ಉಂಟಾಗಿದೆಯೇ, ಯಾವುದೇ ದುಷ್ಪರಿಣಾಮ ಕಂಡುಬಂದಿದೆಯೇ ಎಂಬ ಬಗ್ಗೆ ರೋಗಿಗಳಿಗೆ ಕರೆ ಮಾಡಿ ಮಾಹಿತಿ ಸಂಗ್ರಹಿಸಲಾಗುವುದು. ಆದರೆ, ಕೆಲವು ದೊಡ್ಡ ಕಂಪನಿಗಳು ತನಿಖೆಗೆ ಸಹಕರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಫೈಝರ್‌ನಂತಹ ಕಂಪನಿಗಳು ನಕಲಿ ಔಷಧಗಳಿಗೆ ಸಂಬಂಧಿಸಿದ ಎಸ್‌ಐಟಿ ತನಿಖೆಗೆ ಸಹಕರಿಸದ ಹಿನ್ನೆಲೆಯಲ್ಲಿ ಅಧಿಕಾರಿಗಳು ಅವುಗಳ ಕಾರ್ಯಚಟುವಟಿಕೆಗಳನ್ನು ತಡೆಹಿಡಿದಿದ್ದಾರೆ. 12 ಫಾರ್ಮಾ ಕಂಪನಿಗಳಿಗೆ ನೋಟಿಸ್ ನೀಡಿ, ಲೈಸೆನ್ಸ್ ರದ್ದುಪಡಿಸಲು ಮುಂದಾಗಿರುವುದಾಗಿ ತಿಳಿಸಿದ್ದಾರೆ.

**ನಕಲಿ ಔಷಧ ದಂಧೆ: ಸಹಾಯಕ ಔಷಧ ನಿಯಂತ್ರಕ ಅಮಾನತು**



ಕರ್ನಾಟಕದದಲ್ಲಿ ನಕಲಿ ಔಷಧ ದಂಧೆ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ. ಚಾಮರಾಜಪೇಟೆಯ ಕೃಪಾ ಹೆಲ್ತ್ ಕೇರ್ ಪ್ರಕರಣದಲ್ಲಿ ಸೂಕ್ತ ಕ್ರಮ ಕೈಗೊಳ್ಳದ ಆರೋಪದ ಮೇಲೆ ಸರ್ಕಲ್-1 ಸಹಾಯಕ ಔಷಧ ನಿಯಂತ್ರಕ ಓಂಕಾರೇಶ್ವರ್ ಅವರನ್ನು ಅಮಾನತುಗೊಳಿಸಲಾಗಿದೆ. ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಓಂಕಾರೇಶ್ವರ್ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ. ಇದರ ಬೆನ್ನಲ್ಲೇ ನಕಲಿ ಔಷಧಗಳ ಮಾರಾಟಕ್ಕೆ ಕಡಿವಾಣ ಹಾಕಲು ಕಠಿಣ ಕಾನೂನು ರೂಪಿಸುವ ಬಗ್ಗೆಯೂ ಸರ್ಕಾರ ಚಿಂತನೆ ನಡೆಸಿದೆ. ಔಷಧ ಗುಣಮಟ್ಟದಲ್ಲಿ ವಿಫಲವಾದ, ನಕಲಿ ಔಷಧ ಅಥವಾ ತಪ್ಪು ಲೇಬಲಿಂಗ್ ಕಂಡುಬಂದ ತಯಾರಿಕಾ ಕಂಪನಿಗಳನ್ನು ಶಾಶ್ವತವಾಗಿ ಕಪ್ಪುಪಟ್ಟಿಗೆ ಸೇರಿಸುವ ಬಗ್ಗೆ ರಾಜ್ಯ ಎಫ್‌ಡಿಎ ಮುಂದಾಗಿದೆ. ಕಪ್ಪುಪಟ್ಟಿಗೆ ಸೇರಿಸುವುದರ ಜತೆಗೆ ಸಿಆರ್‌ಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸುವ ಬಗ್ಗೆಯೂ ಚಿಂತನೆ ನಡೆಸಲಾಗಿದ್ದು, ಕಾನೂನು ಬದಲಾವಣೆಗೆ ಕೇಂದ್ರಕ್ಕೆ ಎಫ್‌ಡಿಎ ಮನವಿ ಸಲ್ಲಿಸಿದೆ.

**ಔಷಧಗಳ ಗುಣಮಟ್ಟ ಪರಿಶೀಲನೆ ಪ್ರಯೋಗಾಲಯಗಳ ಅಗತ್ಯವಿದೆ**

ಆಸ್ಪತ್ರೆಗಳಲ್ಲಿ ಬಳಸುವ ಔಷಧಗಳ ಗುಣಮಟ್ಟದ ಬಗ್ಗೆಯೂ ಸಚಿವರು ಕಳವಳ ವ್ಯಕ್ತಪಡಿಸಿದ್ದಾರೆ. ಗುಣಮಟ್ಟ ಪರಿಶೀಲನೆಗೆ ವ್ಯವಸ್ಥೆಯಿದ್ದರೂ ಉತ್ತಮ ಪ್ರಯೋಗಾಲಯದ ಅಗತ್ಯವಿದೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗಿದ್ದು, ಉತ್ತಮ ಖಾಸಗಿ ಪ್ರಯೋಗಾಲಯಗಳೊಂದಿಗೆ ಒಪ್ಪಂದ ಮಾಡಿಕೊಂಡು ಆಸ್ಪತ್ರೆಗಳು ಹಾಗೂ ಫಾರ್ಮಾ ಕಂಪನಿಗಳಿಂದ ನೇರವಾಗಿ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಒಮ್ಮೆ ನಕಲಿ ಔಷಧ ಪ್ರಕರಣದಲ್ಲಿ ಸಿಕ್ಕಿಬಿದ್ದರೆ ಕಂಪನಿಯ ಲೈಸೆನ್ಸ್ ಶಾಶ್ವತವಾಗಿ ರದ್ದುಗೊಳಿಸುವುದು ಹಾಗೂ ಸಿಆರ್‌ಪಿಸಿ ಅಡಿಯಲ್ಲಿ ಕ್ರಮ ಕೈಗೊಳ್ಳುವ ಅಗತ್ಯವಿದೆ. ಒಂದು ರಾಜ್ಯದಲ್ಲಿ ಸಿಕ್ಕಿಬಿದ್ದು ಮತ್ತೊಂದು ರಾಜ್ಯದಲ್ಲಿ ಇದೇ ದಂಧೆ ಮುಂದುವರಿಸುವುದನ್ನು ತಡೆಯಲು ಕೇಂದ್ರದ ಮಟ್ಟದಲ್ಲಿ ನಿಯಮ ರೂಪಿಸಬೇಕು ಎಂದು ಯುಟಿ ಖಾದರ್ ತಿಳಿಸಿದ್ದಾರೆ.

# ಕಾಂಗ್ರೆಸ್ ಪಕ್ಷಕ್ಕೆ ತುರ್ತಾಗಿ ಕೊಳಚೆ ನೀರು ಸಂಸ್ಕರಣಾ ಘಟಕದ ಅಗತ್ಯವಿದೆ: ಸುರೇಶ್‌ಕುಮಾರ್



**ಆತ 'ಸಜ್ಜನ' ಎಂಬ ಮುಖವಾಡ ಧರಿಸಿರುವ ದುರ್ಜನ: ಬಿ.ಕೆ. ಹರಿಪ್ರಸಾದ್ ತಿರುಗೇಟು**

ಬೆಂಗಳೂರು, ಸೆ.21: ಕಾಂಗ್ರೆಸ್ ರಾಜ್ಯಾಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಅತ್ಯಂತ ಕೀಳುಮಟ್ಟದ ಮಾತುಗಳನ್ನು ನೋಡಿದಾಗ ಮನಸ್ಸಿಗೆ ಸ್ಪಷ್ಟವಾಗಿ ಅನಿಸುವುದು ಆ ಪಕ್ಷಕ್ಕೆ ಅತಿ ತುರ್ತಾಗಿ ಕಾಂಗ್ರೆಸ್ ಕೊಳಚೆ ನೀರು ಸಂಸ್ಕರಣಾ ಘಟಕ ಅಳವಡಿಸಬೇಕಿದೆ ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ಈ ಕುರಿತು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿರುವ ಅವರು, ಈ ಹೊಲಸು ಬಾಯಿ ಹೊರಸೂಸುವ ದುರ್ವಾಸನೆ ರಾಜ್ಯದಲ್ಲೆಲ್ಲಾ ಹರಡಿ ಇತರ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಲೇವಡಿ ಮಾಡಿದ್ದರು.

ಇದಕ್ಕೆ ಎಕ್ಸ್ ಖಾತೆ ಮೂಲಕವೇ ತಿರುಗೇಟು ನೀಡಿರುವ ಹರಿಪ್ರಸಾದ್, ಶ್ಯಾಡೋ ಪಿಎಂ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿಯ ಮೇಲಿನ ವೈಯಕ್ತಿಕ ದಾಳಿ, ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ, ಎಐಸಿಸಿ ಅಧ್ಯಕ್ಷ ಖರ್ಗೆ ಮೇಲಿನ ಅಸ್ಪೃಶ್ಯತೆಯ ಪ್ರಯೋಗಗಳು ದುರ್ಜನ ಶಾಸಕ ಸುರೇಶ್ ಕುಮಾರ್‌ಗೆ ಕಣ್ಣಿಗೆ ಬಿದ್ದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಮೋದಿಯ ವಿರುದ್ಧ ಮಾತಾಡಿದ ತಕ್ಷಣ ಬಿ.ಕೆ. ಹರಿಪ್ರಸಾದ್ ಅವರದ್ದು ಹೊಲಸು ಬಾಯಿ ಎಂದು ಸುರೇಶ್ ಕುಮಾರ್ ಟೀಕಿಸುತ್ತಾರೆ. ನಾನು ನನ್ನ ರಾಜಕೀಯ ಜೀವನದಲ್ಲಿ ಕೈ ಬಾಯಿ ಹೊಲಸು ಮಾಡಿಕೊಂಡಿಲ್ಲ. ಆದರೆ ಸುರೇಶ್ ಕುಮಾರ್ ಮಾತ್ರ ಹೊಲಸಲ್ಲೇ ಹೊರಳಾಡಿ ಸಜ್ಜನ ಎಂದು ಬೋರ್ಡ್ ಹಾಕಿಕೊಂಡಿದ್ದಾರೆ. ಸುರೇಶ್ ಕುಮಾರ್ ಮೈಗೆ ಮೆತ್ತಿಕೊಂಡಿರುವ ಹೊಲಸು ತೊಳೆಯಲು ವಿಶ್ವದ ಅತಿದೊಡ್ಡ ಕೊಳಚೆ ಸಂಸ್ಕರಣಾ ಘಟಕವಾದ ಈಜಿಪ್ಟ್‌ನಲ್ಲಿರುವ ನ್ಯೂ ಡೆಲ್ಟಾ ನೀರು ಸಂಸ್ಕರಣಾ ಘಟಕಕ್ಕೂ ಸಾಧ್ಯವಾಗಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಸುರೇಶ್ ಕುಮಾರನ ಹೊಲಸು ತೊಳೆಯಲು ಕೊಳಚೆ ನೀರು ಸಂಸ್ಕರಣಾ ಘಟಕ ಸಾಲುವುದಿಲ್ಲ. ಈ ಹೊಲಸು ಬಿಜೆಪಿಯ ಪರಂಪರಾಗತ ಹೊಲಸು. ಪ್ರಧಾನಿ ಮೋದಿ ಪಿಎಂ ಕೇರ್‌ನ ಹಣ ನುಂಗಿದರೆ, ಅವರ ಅನುಯಾಯಿ ದುರ್ಜನ ಸುರೇಶ್ ಕುಮಾರ್ ಸಿಎಂ ನಿಧಿಯ ಹಣ ನುಂಗಿದ್ದಾನೆ. ಸಜ್ಜನ ಎಂಬ ಬೋರ್ಡ್ ಹಾಕಿಕೊಂಡ ಮಾತ್ರಕ್ಕೆ ಯಾವ ದುರ್ಜನರೂ ಸಜ್ಜನರಾಗುವುದಿಲ್ಲ. ಜನರ ಹಣ, ಜನರ ಹಕ್ಕು ಮತ್ತು ಪ್ರಜಾಪ್ರಭುತ್ವದ ಪ್ರಶ್ನೆ ಬಂದಾಗ ಮುಖವಾಡ ಕಳಚುತ್ತದೆ.

# ರಾಜೀನಾಮೆ ಬೇಡ: ಎಚ್.ಕೆ. ಪಾಟೀಲ್‌ಗೆ ಶಾಸಕ ದಿನೇಶ್ ಗೂಳಿಗೌಡ ಮನವಿ

**ಸರ್ಕಾರದ ಮಾರ್ಗದರ್ಶಕರಾಗಿ, ಬರಘೋಷಣೆ ವಿಚಾರದಲ್ಲಿ ಸರ್ಕಾರ ರಾಜಕೀಯ, ಪಕ್ಷಪಾತ ಮಾಡಲ್ಲ**



ಬೆಂಗಳೂರು, ಸೆ.21: ಗದಗ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಂತಹ ಹೇಳಿಕೆ ನೀಡಿರುವುದು ಬೇಸರ ಉಂಟುಮಾಡಿದೆ. ಗದಗ ರೈತರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ. ರೈತರ ಹಿತವೇ ಸರ್ಕಾರದ ಮೊದಲ ಆದ್ಯತೆ. ಗದಗ ತಾಲೂಕಿನಲ್ಲಿ ಬರ ಪರಿಸ್ಥಿತಿ ಕುರಿತು ಈಗಾಗಲೇ ಅಧಿಕಾರಿಗಳು ವರದಿ ನೀಡಿದ್ದಾರೆ. ಕೇಂದ್ರ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರ ಕ್ರಮಕೈಗೊಳ್ಳಲಿದೆ. ತಾವು ಸರ್ಕಾರದ ಮಾರ್ಗದರ್ಶಕರಾಗಬೇಕೇ ಹೊರತು ರಾಜೀನಾಮೆ ನಿರ್ಧಾರ ಮಾಡಬಾರದು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಸರ್ಕಾರದ ನೀತಿ ನಿಯಮಗಳ ಬಗ್ಗೆ ಅಪಾರ ಅನುಭವ ಹೊಂದಿರುವ ತಾವು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಂತಹ ಹೇಳಿಕೆ ನೀಡಿರುವುದು ತೀವ್ರ ಬೇಸರ ತರಿಸಿದೆ. ರೈತರ ಕಾಳಜಿ ಮತ್ತು ಗದಗ ಜಿಲ್ಲೆಯ ಜನರ ಪರವಾಗಿ ತಮಗೆ ಆತಂಕ ಇರುವಂತೆ ರಾಜ್ಯದ ರೈತರ ಬಗ್ಗೆ ಸರ್ಕಾರ ಕೂಡ ಕಾಳಜಿ ಹೊಂದಿದೆ. ಬರ ಘೋಷಣೆ ವಿಚಾರದಲ್ಲಿ ಸರ್ಕಾರ ಯಾವುದೇ ರಾಜಕೀಯ ಒತ್ತಡ ಅಥವಾ ಪಕ್ಷಪಾತ ಮಾಡುವುದಿಲ್ಲ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ನಿಯಮಗಳನ್ನು ರಾಜ್ಯ ಸರ್ಕಾರ ಪಾಲಿಸಬೇಕು. ಕೇಂದ್ರ ಸರ್ಕಾರದ ನಿಗದಿತ ಬರ ನಿರ್ವಹಣಾ ಮಾರ್ಗಸೂಚಿ, ವೈಜ್ಞಾನಿಕ ಮಾನದಂಡಗಳು ಹಾಗೂ ನೆಲದ ವಾಸ್ತವ ಪರಿಸ್ಥಿತಿಯ ಆಧಾರದ ಮೇಲೆ ಘೋಷಣೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರದ 'ಬರ ನಿರ್ವಹಣಾ ಕೈಪಿಡಿ-2020' ಹಾಗೂ ವಿಪತ್ತು ನಿರ್ವಹಣಾ ಮಾರ್ಗಸೂಚಿಗಳ ಪ್ರಕಾರ ಬರಗಾಲವನ್ನು ಘೋಷಿಸಲಾಗುತ್ತದೆ ಎಂದಿದ್ದಾರೆ.

ರಾಜ್ಯ ಈಗ ಸಂಕಷ್ಟಕಾಲದಲ್ಲಿದೆ. ಈ ಸಮಯದಲ್ಲಿ ಎಚ್.ಕೆ. ಪಾಟೀಲ್‌ರಂತಹ ನಾಯಕರು ಸೇರಿ ನಾವೆಲ್ಲರೂ ರೈತರ ಜೊತೆ ನಿಲ್ಲಬೇಕು. ಅದಕ್ಕಿಂತ ಮೊದಲು ಸರ್ಕಾರದ ಬೆನ್ನೆಲುಬಾಗಬೇಕು. ಆಗ ಮಾತ್ರ ರೈತರಿಗೆ ಪರಿಹಾರ ಸಿಗಲು ಸಾಧ್ಯ. ಸರ್ಕಾರಕ್ಕೆ ನಿಮ್ಮ ಸಲಹೆ ಅಗತ್ಯವಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿಯಲ್ಲಿ ಸರ್ಕಾರಕ್ಕೆ ಮಾರ್ಗದರ್ಶನ ನೀಡಬೇಕು. ಗದಗ ರೈತರು ಮಾತ್ರವಲ್ಲ ರಾಜ್ಯದ ರೈತರ ಹಿತಕಾಯಲು ಮುಂದಾಗಬೇಕು. ಸರ್ಕಾರದ ಕಾರ್ಯವೈಖರಿಗೆ ನೀವು ಕೈಜೋಡಿಸಬೇಕು ಎಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ.

# ಪ್ರತಾಪ್‌ಸಿಂಹ ವಿರುದ್ಧ ಹರಿಹಾಯ್ದ ಪ್ರದೀಪ್ ಈಶ್ವರ್

**ಅವಾಚ್ಯ ಶಬ್ದಗಳಿಂದ ನಿಂದನೆ**



**ಬೆಂಗಳೂರು, ಸೆ.21:** ಮಾಜಿ ಸಂಸದ ಪ್ರತಾಪ್‌ಸಿಂಹ ಮುಠ್ಠಾಳ, ನಾಲಾಯಕ್ ಎಂದು ಶಾಸಕ ಪ್ರದೀಪ್ ಈಶ್ವರ್ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀನು ಯಾವನೋ ದಲಿತರ ನೀಲಿಶಾಲಿನ ಬಗ್ಗೆ ಮಾತಾಡೋಕೆ. ನೀನು ಕೇಸರಿ ಶಾಲಿನ ಬಗ್ಗೆ ಮಾತಾಡಿಕೋ. ನೀನು ಒಂದು ಕೇಸರಿ ಸಾಲು ಹಾಕಿಕೊಂಡು ಬಾ, ನಾವು ಸಾವಿರ ನೀಲಿ ಶಾಲು ಹಾಕಿಕೊಂಡು ಬರುತ್ತೇವೆ ಎಂದು ಹೇಳಿದ್ದಾರೆ. ಒಬ್ಬ ಸರ್ಕಲ್ ಇನ್ಸ್ ಪೆಕ್ಟರ್ ಬಗ್ಗೆ ಕೆಟ್ಟದಾಗಿ ಮಾತಾಡುತ್ತಾರೆ. ಮಸೀದಿ ಮುಂದೆ ನಿಂತು ನಿನ್ನ ಬಾಯಿ ತೆವಲಿಗೆ ಮಾತನಾಡ್ತಿಯಾ, ಇಸ್ಲಾಂ ಧರ್ಮದವರು ನಮ್ಮ ದೇಶ ಎಂದು ಸಹಕರಿಸಿಕೊಂಡು ಹೋಗಿದ್ದಾರೆ. ನೀನು ಯಾವನೋ ನಮ್ಮ ದಲಿತರ ಬಗ್ಗೆ ಮಾತನಾಡೋಕೆ, ನೀಲಿ ಶಾಲು ಬಗ್ಗೆ ನೀನು ಯಾರೋ ಮಾತಾನಾಡೋಕೆ ಮಗನೇ ಎಂದು ಪ್ರಶ್ನಿಸಿದ್ದಾರೆ. ಡಿಎಸ್‌ಎಸ್ ಬಗ್ಗೆ ಮಾತನಾಡುವಾಗ ಬಾಯಿಕಂಟ್ರೋಲ್‌ನಲ್ಲಿ ಇಟ್ಟಿಕೋ. ಒಂದು ಕೇಸ್ ಹಾಕಿದ್ದೀಯಾ, ಇನ್ನೂ ನೂರು ಕೇಸ್ ಹಾಕಿಕೋ ಬೇಕಿದ್ದರೆ ಎಂದು ಸವಾಲು ಹಾಕಿದ್ದಾರೆ.

# ಇಂದಿನ ಆತಂಕದ ಸ್ಥಿತಿಗೆ ಹಿಂದೆ ಮಾಧವ ಗಾಡ್ಗಿಳ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದೇ ಕಾರಣ



**ಬೆಂಗಳೂರು, ಸೆ.21:** ಯಾವುದೇ ನ್ಯಾಯಾಲಯದ ಆದೇಶಗಳಿಲ್ಲದೆ ಇದ್ದರೂ ಈ ಮೊದಲು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಮಾಧವ ಗಾಡ್ಗಿಳ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದರಿಂದಾಗಿಯೇ ಇಂದು ಆತಂಕ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದರು.

ವಿಧಾನ ಸಭೆಯಲ್ಲಿ ಕಸ್ತೂರಿರಂಗನ್ ವರದಿಯ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅರಣ್ಯ ಸಚಿವರಾಗಿದ್ದಾಗ ಸಮಿತಿ ರಚಿಸಲಾಗಿತ್ತು. ಅದಕ್ಕೆ ತಮಿಳುನಾಡು ಕೇರಳ, ಗುಜರಾತ್, ಗೋವಾ, ಕರ್ನಾಟಕ, ಮಹಾರಾಷ್ಟ್ರಗಳ ರಾಜ್ಯಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಮಾಧವ ಗಾಡ್ಗಿಳ್ ಸಮಿತಿ ಅತ್ಯಂತ ಕಠಿಣ ಶಿಫಾರಸುಗಳನ್ನು ಮಾಡಿದ್ದು ಅದನ್ನು ಅನುಷ್ಠಾನಕ್ಕೆ ತರುವುದಾಗಿದ್ದರೆ, ಆರು ರಾಜ್ಯಗಳ 1500 ಕಿ.ಮೀ. ವ್ಯಾಪ್ತಿಯ ಪಶ್ಚಿಮ ಘಟ್ಟ ಭಾಗದಲ್ಲಿನ ಒಂದು ಲಕ್ಷ ಚ.ಕಿ.ಮೀ. ಹೆಚ್ಚಿನ ಪ್ರದೇಶಗಳ, ಆರು ಕೋಟಿ ಜನರನ್ನು ಒಕ್ಕಲೆಬ್ಬಿಸಬೇಕಾಗುತ್ತದೆ. ಈ ವರದಿ ಸರಿ ಇಲ್ಲ ಎಂಬ ಪ್ರತಿಭಟನೆಗಳು ವ್ಯಕ್ತವಾದಾಗ ಕೇಂದ್ರ ಸರ್ಕಾರವೇ ಕಸ್ತೂರಿರಂಗನ್ ನೇತೃತ್ವದಲ್ಲಿ ಉನ್ನತ ಕಾರ್ಯ ನಿರ್ವಹಣಾ ಸಮಿತಿಯನ್ನು ರಚಿಸಿತು ಎಂದು ಹೇಳಿದರು.

ಕಸ್ತೂರಿರಂಗನ್ ವರದಿಯಲ್ಲಿ ಮಾಧವ ಗಾಡ್ಗಿಳ್ ಅವರ ವರದಿಯಲ್ಲಿನ ಕಠಿಣ ನಿಯಮಗಳನ್ನು ಸಡಿಲ ಗೊಳಿಸಲಾಗಿದೆ. ಸೂಕ್ಷ್ಮ ಅರಣ್ಯ ಪ್ರದೇಶ ವ್ಯಾಪ್ತಿಯನ್ನು 59,900 ಚ.ಕಿ.ಮೀ. ವ್ಯಾಪ್ತಿಗೆ ಕಡಿತ ಮಾಡಿದೆ. ಇದರಲ್ಲಿ ಜನವಸತಿ ಕೃಷಿ ಮತ್ತು ತೋಟಗಾರಿಕೆ ಪ್ರದೇಶಗಳಿಗೆ ವಿನಾಯಿತಿ ನೀಡಲಾಗಿದೆ. ಆದರೆ ಕೈಗಾರಿಕೆಗಳಿಗೆ ಕಠಿಣ ನಿರ್ಬಂಧಗಳಿವೆ ಎಂದು ಅಶೋಕ್ ವಿವರಿಸಿದರು. ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಶೇ.40ರಷ್ಟು ಭೂಮಿಯನ್ನು ಉಳಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು. ಗೋವಾದ ಗೋವಾ ಫೌಂಡೇಷನ್ ಎಂಬ ಸಂಸ್ಥೆ ಪರಿಸರ ರಕ್ಷಣೆ ವಿಚಾರದಲ್ಲಿ ಪ್ರಾಮಾಣಿಕವಾದ, ಪ್ರಬಲ ಹೋರಾಟ ನಡೆಸುತ್ತಿದೆ. ಪದೇಪದೇ ನ್ಯಾಯಾಲಯಗಳ ಮುಂದೆ ಹೋಗಿ ತೀರ್ಪುಗಳು ಹೊರಬೀಳುವಂತೆ ಮಾಡುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಅಸಹಾಯಕ ವಾಗುವಂತೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕಸ್ತೂರಿರಂಗನ್ ಸಮಿತಿ ವೈಮಾನಿಕ ಸಮೀಕ್ಷೆ ನಡೆಸಿದ್ದರಿಂದಾಗಿ ಕೃಷಿ ಬೆಳೆಗಳು, ತೋಟಗಾರಿಕೆ ಕೂಡ ಅರಣ್ಯದಂತೆ ಕಂಡಿದೆ. ಇದು ಹೆಚ್ಚಿನ ಅಪಾಯ ಉಂಟು ಮಾಡಿದೆ ಎಂದರು. ಚರ್ಚೆಯ ನಡುವೆ ಸಚಿವ ಬಸವರಾಜ ರಾಯರೆಡ್ಡಿ ಮಧ್ಯ ಪ್ರವೇಶಿಸಿ ಮಾಧವ ಗಾಡ್ಗಿಳ್ ವರದಿಯನ್ನು ಆಗಿನ ಕೇಂದ್ರ ಸರ್ಕಾರ ಒಪ್ಪಿಲ್ಲ ಎಂದರು. ಬಿಜೆಪಿಯ ಆರಗ ಜ್ಞಾನೇಂದ್ರ ವರದಿಯನ್ನು ಒಪ್ಪಿಯೂ ಇಲ್ಲ ಹಾಗೆಯೇ ತಿರಸ್ಕರಿಸಿಯೂ ಇಲ್ಲ ಎಂದು ಸ್ಪಷ್ಟನೆ ನೀಡಿದರು. ಇದು ಕೆಲಕಾಲ ಚರ್ಚೆಗೆ ಕಾರಣವಾಯಿತು.

**ಕೇರಳ ಮಾದರಿ ಪಾಲಿಸುವುದು ಅಗತ್ಯ**

ಕಸ್ತೂರಿರಂಗನ್ ವರದಿ ಬಿಕ್ಕಟ್ಟು ಬಗೆಹರಿಯಬೇಕಾದರೆ ರಾಜ್ಯವೂ ಕೇರಳ ಮಾದರಿ ಅನುಸರಿಸಬೇಕು, ಒಂದು ಕಾನೂನು ತಂಡವನ್ನು ರಚಿಸಿ ಕಾನೂನಾತ್ಮಕ ಹೋರಾಟ ಮಾಡುವ ಜತೆಗೆ ಕೇಂದ್ರದ ಬಳಿ ಸರ್ವಪಕ್ಷ ನಿಯೋಗ ಕೊಂಡೊಯ್ದು ಮನವಿ ಮಾಡೋಣ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದರು. ವಿಧಾನಸಭೆಯಲ್ಲಿ ಕಸ್ತೂರಿರಂಗನ್ ಕರಡು ಅಧಿಸೂಚನೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, ಪಶ್ಚಿಮಘಟ್ಟಗಳಿಗೆ 40 ಲಕ್ಷ ಟನ್ ಕಾರ್ಬನ್ ಹೀರುವ ಶಕ್ತಿ ಇದೆ. ಹಾಗಾಗಿ ಅದನ್ನು ಉಳಿಸಬೇಕು. ಅಲ್ಲಿ 125 ಜೀವ ಪ್ರಬೇಧಗಳು ಇವೆ. 75ಕ್ಕೂ ಹೆಚ್ಚು ಉಪ ಪ್ರಬೇಧಗಳು ಇವೆ. ಪಶ್ಚಿಮಘಟ್ಟಗಳಲ್ಲಿ 39 ಪ್ರದೇಶಗಳನ್ನು ಯುನೆಸ್ಕೋ ಪಟ್ಟಿಗೆ ಸೇರಿಸಲಾಗಿದೆ ಎಂಬುದು ಪರಿಸರವಾದಿಗಳ ವಾದವಾಗಿದೆ. 2010ರಲ್ಲಿ ಯುಪಿಎ ಆಡಳಿತದಲ್ಲಿ ಜಯರಾಂ ರಮೇಶ್ ಅವರು ಅರಣ್ಯ ಸಚಿವರಾಗಿದ್ದಾಗ, ಮಾದವ್ ಗಾಡ್ಗಿಳ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡುತ್ತಾರೆ. ಆ ಸಮಿತಿ 316 ಪುಟದ ವರದಿ ನೀಡುತ್ತಾರೆ. ಅದರಲ್ಲಿ ಅವರು ಸಂಪೂರ್ಣ ವರದಿ ನೀಡುತ್ತಾರೆ. ಗಾಡ್ಗಿಲ್ ಸಮಿತಿ ರಚನೆ ಮಾಡಲು ಸುಪ್ರೀಂ ಕೋರ್ಟ್, ಎನ್‌ಜಿಟಿ ನಿರ್ದೇಶನ ನೀಡಿರಲಿಲ್ಲ. ಆಗಿನ ಕೇಂದ್ರ ಸರ್ಕಾರ ಸ್ವಯಂಪ್ರೇರಿತವಾಗಿ ಈ ಸಮಿತಿ ರಚನೆ ಮಾಡಿತ್ತು ಎಂದರು.

Chief reporter : SANDEEP RENU 99728 72151 | Executive Editor : SHARAT JYOTSNA B.R 9886766483 vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 87 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 22 2026 ಮಂಗಳವಾರ

## ಒಳಪುಟಗಳಲ್ಲಿ

ಇಂದು 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ - ಪು.4

ಸ್ವಂತ ಖರ್ಚಿನಲ್ಲೇ ಕಾಲುವೆ ದುರಸ್ತಿ ಕಾರ್ಯಕ್ಕೆ ಮುಂದಾದ ಶಾಸಕ ಎಚ್.ಡಿ. ರೇವಣ್ಣ - ಪು.6

ಕೇಂದ್ರೀಯ ವಿವಿಯಲ್ಲಿ ಮಕ್ಕಳಸ್ನೇಹಿ ಗ್ರಂಥಾಲಯ ಕುರಿತು ಸರ್ಟಿಫಿಕೆಟ್ ಕೋರ್ಸ್ ಆರಂಭ - ಪು.7

# ಕಸ್ತೂರಿರಂಗನ್ ವರದಿ: ಪ್ರತಿಯೊಬ್ಬ ರೈತರ ರಕ್ಷಣೆ ಸರ್ಕಾರದ ಆದ್ಯತೆ

**ಬೆಂಗಳೂರು, ಸೆ.21: ಕಸ್ತೂರಿರಂಗನ್ ವರದಿಯ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ವಿಧಾನಸಭೆಯಲ್ಲಿ ಅಧಿಕೃತವಾಗಿ ಚರ್ಚೆ ಆರಂಭಿಸಿದರು.**

ಕೇಂದ್ರದ ಕರಡು ಅಧಿಸೂಚನೆಯಿಂದ ರಾಜ್ಯದ ಮಲೆನಾಡು ಭಾಗದ ಜನರಿಗೆ, ಕೃಷಿಕರಿಗೆ ಆಗುವ ತೊಂದರೆಗಳು ಹಾಗೂ ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಸ್ಪಷ್ಟ ನಿಲುವಿನ ಬಗ್ಗೆ ಅವರು ಸದನಕ್ಕೆ ಪೂರಕ ಮಾಹಿತಿಗಳನ್ನು ಮಂಡಿಸಿದರು.

ರಾಜಕಾರಣವನ್ನು ಬದಿಗಿಟ್ಟು ರೈತರ ಹಿತಕಾಪಾಡಲು ಕಸ್ತೂರಿರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯನಿರತ ತಂಡ ನೀಡಿರುವ ವರದಿಯ ಬಗ್ಗೆ ವಿಶೇಷ ಚರ್ಚೆ ಮಾಡೋಣ. ಪ್ರತಿಯೊಬ್ಬ ರೈತರ ರಕ್ಷಣೆ ಮಾಡಬೇಕೆಂಬುದು ನನ್ನ ಬದ್ಧತೆ ಯಾಗಿದೆ. ಕೇವಲ ಅರಣ್ಯದಂಚಿನಲ್ಲಿರುವ ರೈತರ ಪರಿಸ್ಥಿತಿ ಅಷ್ಟೇ ಅಲ್ಲ ನಾಡಿನ ರೈತರ ಹಿತ ಕಾಪಾಡಬೇಕಿದೆ. ಕೇಂದ್ರಕ್ಕೆ ರಾಜ್ಯದ ನಿಲುವುದನ್ನು ತಿಳಿಸಬೇಕಾಗಿರುವುದರಿಂದ ಈ ವಿಶೇಷ ಚರ್ಚೆಯನ್ನು ನಡೆಸಬೇಕಿದೆ ಎಂದರು.

ಕಸ್ತೂರಿರಂಗನ್ ವರದಿ ಹಿನ್ನೆಲೆಯಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಜನಾಕ್ರೋಶವಿದೆ. ಆ ಭಾಗದ ಜನರ ಸಮಸ್ಯೆಯನ್ನು ಆಲಿಸಿದ್ದೇನೆ. ಸಾವಿರಾರು ಅರ್ಜಿಗಳು ಬಂದಿವೆ. ಅನೇಕ ಸಲಹೆಗಳನ್ನು ನೀಡಿದ್ದಾರೆ. ಪಶ್ಚಿಮ ಘಟ್ಟದ ಬಡಜನರ ಹಿತವನ್ನು ಕಾಪಾಡಬೇಕಾಗಿದೆ ಎಂದು ತಿಳಿಸಿದರು.

### ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ



ಪಶ್ಚಿಮ ಘಟ್ಟ ಪ್ರದೇಶದಲ್ಲಿ ಆರು ನದಿಗಳು ಹುಟ್ಟುತ್ತವೆ. 10 ಜಿಲ್ಲೆಯ ಜನರ ಬದುಕಿಗೆ ಕಸ್ತೂರಿರಂಗನ್ ವರದಿಯಿಂದ ಮಾರಕವಾಗಲಿದೆ ಎಂಬ ಭಯದ ವಾತಾವರಣ ಉಂಟಾಗಿದೆ. 19, 252 ಲಕ್ಷ ಚದರ ಕಿ.ಮೀ ವ್ಯಾಪ್ತಿಯಲ್ಲಿದೆ. 960 ಕಿ.ಮೀ ಜಾಗವನ್ನು ಪರಿಸರ ಸೂಕ್ಷ್ಮ ವಲಯಕ್ಕೆ ಸೇರಿಸಲಾಗಿದೆ. ಹೀಗಾಗಿ ವರದಿಯನ್ನು ತಿರಸ್ಕರಿಸಬೇಕೆಂಬ ಒತ್ತಾಯ ತೀವ್ರವಾಗಿದೆ ಎಂದರು.

ಕೇಂದ್ರ ಸರ್ಕಾರದ ಬಳಿಗೆ ಸರ್ವ ಪಕ್ಷಗಳ ನಿಯೋಗ ಕರೆದೊಯ್ಯಬೇಕು. ಸಂವಿಧಾನದ 371ನೇ ವಿಧಿಯಡಿ ಸೇರಿಸಿ ವಿಶೇಷ ಸ್ಥಾನಮಾನ ನೀಡಬೇಕು ಎಂಬಂತಹ ಹಲವು ಸಲಹೆಗಳು ಬಂದಿವೆ. ಕೇವಲ ಇದರ ಬಗ್ಗೆ ಸಂಪುಟಲ್ಲಿ ತೀರ್ಮಾನ ಮಾಡಬಾರದೆಂಬ ಉದ್ದೇಶದಿಂದ ರೈತರು, ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

### ಅಧಿಕಾರಿಗಳಿಗಿಂತ ರೈತರೇ ವರದಿಯನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ

ಬಾಳೆಹೊನ್ನೂರು, ಸಕಲೇಶಪುರ ಮೊದಲಾದ ಕಡೆ ರೈತರ ಅಭಿಪ್ರಾಯ ಸಂಗ್ರಹಿಸಿದಾಗ ಅಧಿಕಾರಿಗಳಿಗಿಂತ ರೈತರೇ ಚೆನ್ನಾಗಿ ಕಸ್ತೂರಿರಂಗನ್ ವರದಿನ್ನು ಅಧ್ಯಯನ ಮಾಡಿದ್ದಾರೆ ಎಂಬುದು ತಿಳಿದುಬಂದಿತು. ಇಡೀ ದಿನಚರ್ಚೆಯಾಗಲಿ, ನಿಲುವಳಿ ಸೂಚನೆ ಮೇಲಾದರೂ ಚರ್ಚೆಯಾಗಲಿ ಎಂದು ಮುಖ್ಯಮಂತ್ರಿ ತಿಳಿಸಿದರು. ಮುಖ್ಯಮಂತ್ರಿಗಳ ಮಾತಿಗೆ ದನಿಗೂಡಿಸಿದ ಅರಣ್ಯ ಸಚಿವ ರಾಮಲಿಂಗೇಗೌಡ ಅವರು ವರದಿಯ ಸೂಕ್ಷ್ಮ ಹಾಗೂ ತಾಂತ್ರಿಕ ಅಂಶಗಳನ್ನು ಸದನದ ಮುಂದಿಟ್ಟರು. ಪಶ್ಚಿಮ ಘಟ್ಟದ ಪರಿಸರ ಸಂರಕ್ಷಣೆಯ ಜೊತೆಗೆ ಅರಣ್ಯದಂಚಿನಲ್ಲಿ ತಲತಲಾಂತರದಿಂದ ಬದುಕುತ್ತಿರುವ ರೈತರು ಹಾಗೂ ಸ್ಥಳೀಯರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎಂದು ಅವರು ಅಂಕಿ-ಅಂಶಗಳ ಸಮೇತ ವಿವರಿಸಿದರು.

## ಧರ್ಮಸ್ಥಳ ಸೌಜನ್ಯಾ ಪ್ರಕರಣಕ್ಕೆ ಭಾರಿ ತಿರುವು: ಮರುತನಿಖೆಗೆ ಸುಪ್ರೀಂ ಆದೇಶ



**ನವದೆಹಲಿ, ಸೆ.21:** ಧರ್ಮಸ್ಥಳದ 17 ವರ್ಷದ ವಿದ್ಯಾರ್ಥಿನಿ ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ಆದೇಶ ನೀಡಿದೆ. ಪ್ರಕರಣವನ್ನು ಹೊಸದಾಗಿ ಮರುತನಿಖೆ ನಡೆಸುವಂತೆ ಸೂಚಿಸಿರುವ ನ್ಯಾಯಾಲಯ, ತನಿಖೆಗಾಗಿ ಹೊಸ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಸೌಜನ್ಯಾ ತಾಯಿ ಕುಸುಮಾವತಿ ಗೌಡ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಂಜಯ್ ಕುಮಾರ್ ನೇತೃತ್ವದ ದ್ವಿ ಸದಸ್ಯ ಪೀಠ, ಎಸ್ಐಟಿ ಮುಂದಿನ 3 ತಿಂಗಳ ಒಳಗಾಗಿ ಸಂಪೂರ್ಣ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ನಿರ್ದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದ ಸಂತೋಷ್ ರಾವ್ ಅವರನ್ನು ಜೂನ್ 16, 2023 ರಂದು ಸಿಬಿಐ ನ್ಯಾಯಾಲಯವು ಖುಲಾಸೆಗೊಳಿಸಿತು. ತನಿಖೆಯಲ್ಲಿ ಗಂಭೀರವಾಗಿ ಲೋಪಗಳಾಗಿದ್ದು, ನಿಜವಾದ ಆರೋಪಿಗಳನ್ನು ರಕ್ಷಿಸಲಾಗಿದೆ. ಪ್ರಕರಣದ ನೈಜ ಆರೋಪಿಗಳನ್ನು ಪತ್ತೆಹಚ್ಚಿ ನ್ಯಾಯ ಒದಗಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಸಿಬಿಐನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಸಿಐಡಿ ತನಿಖೆಯಲ್ಲಿ ಸಂಗ್ರಹಿಸಲಾಗಿದ್ದ ಸಾಕ್ಷ್ಯಗಳನ್ನೇ ಆಧರಿಸಿ ವರದಿ ಸಿದ್ಧಪಡಿಸಲಾಗಿದೆ ಹಾಗೂ ಸ್ವತಂತ್ರ ತನಿಖೆ ನಡೆದಿಲ್ಲ, ತನಿಖಾಧಿಕಾರಿ ಘಟನಾ ಸ್ಥಳಕ್ಕೆ ಹೋಗದೇ ಹೇಗೆ ತನಿಖೆ ಮಾಡಲಾಯ್ತು ಎಂದು ಪ್ರಶ್ನಿಸಿತ್ತು.

ವಿಚಾರಣೆ ಸಮಯದಲ್ಲಿ ನ್ಯಾಯಾಲಯ ಹೊಸದಾಗಿ ತನಿಖೆ ನಡೆಸಲು ಆದೇಶಿಸಿದರೆ ಹೊಸ ವಿಶೇಷ ತನಿಖಾ ತಂಡವನ್ನು ರಚಿಸಲು ಸಿದ್ಧವಿದೆ ಎಂದು ರಾಜ್ಯ ಸರ್ಕಾರ ಹೇಳಿತ್ತು. ಅದರಂತೆ ಕೋರ್ಟ್ ಆದೇಶ ನೀಡಿದ್ದು ಎಸ್ಐಟಿ ಹೊಸದಾಗಿ ತನಿಖೆ ಮಾಡಬೇಕು, ಎಸ್ಐಟಿಯಲ್ಲಿ ಹಿಂದೆ ಪ್ರಕರಣದ ತನಿಖೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಥವಾ ಸಿಬಿಐ ಅಧಿಕಾರಿಗಳನ್ನು ಸೇರಿಸಬಾರದು ಎಂದು ಸ್ಪಷ್ಟಪಡಿಸಿದೆ. 2012ರ ಅಕ್ಟೋಬರ್‌ನಲ್ಲಿ ಕಾಲೇಜು ವಿದ್ಯಾರ್ಥಿನಿ ಸೌಜನ್ಯಾ ಅತ್ಯಾಚಾರ ಹಾಗೂ ಕ್ರೂರ ಹತ್ಯೆ ನಡೆಯಿತು. ಈ ಪ್ರಕರಣದಲ್ಲಿ ಸಂತೋಷ್ ರಾವ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಸಿಬಿಐ ವಿಶೇಷ ನ್ಯಾಯಾಲಯವು 2023ರಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಸಂತೋಷ್ ರಾವ್ ಅವರನ್ನು ದೋಷಮುಕ್ತಗೊಳಿಸಿ ತೀರ್ಪು ನೀಡಿತ್ತು. 2024 ರಲ್ಲಿ, ಕುಸುಮಾವತಿ ಹೊಸ ಸಿಬಿಐ ತನಿಖೆ ಕೋರಿ ಕರ್ನಾಟಕ ಹೈಕೋರ್ಟ್ ಮೊರೆಹೋದರು. ಆ.20, 2024 ರಂದು, ಹೈಕೋರ್ಟ್ ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಈ ಆದೇಶದ ವಿರುದ್ಧ ಕುಸುಮಾವತಿ ಸುಪ್ರೀಂ ಮೆಟ್ಟಿಲೇರಿದ್ದರು.

## ಪೇಜಾವರ ಶ್ರೀ-ಅಮಿತ್ ಶಾ ಭೇಟಿ



**ನವದೆಹಲಿ, ಸೆ.21:** ವಸಂತ್ ಕುಂಜ್ನಲ್ಲಿರುವ ಪೇಜಾವರ ಮಠದ ಶಾಖೆ ವೇದವ್ಯಾಸ ಗುರುಕುಲದಲ್ಲಿ 39ನೇ ಚಾತುರ್ಮಾಸ್ಯ ವ್ರತ ನಿರತರಾಗಿರುವ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಭೇಟಿಮಾಡಿ ಆಶೀರ್ವಾದ ಪಡೆದರು.

ಸಂಜೆ ವೇದವ್ಯಾಸ ಗುರುಕುಲಕ್ಕೆ ಆಗಮಿಸಿದ ಅಮಿತ್ ಶಾ ಅವರನ್ನು ಗುರುಕುಲದ ವಿದ್ಯಾರ್ಥಿಗಳು ವೇದ ಘೋಷದೊಂದಿಗೆ ಪೂರ್ಣಕುಂಭ ಸ್ವಾಗತ ನೀಡಿದರು. ಡಾ. ವರಖೇಡಿ ಶ್ರೀನಿವಾಸ ಆಚಾರ್ಯ, ಡಾ. ವಿಠೋಬಾಚಾರ್ಯ ಹಾಗೂ ವಾಸುದೇವ ಭಟ್ ಪೆರಂಪಳ್ಳಿ ಅವರು ಅವರನ್ನು ಬರಮಾಡಿ ಕೊಂಡರು.

ಬಳಿಕ ಶ್ರೀ ಕೃಷ್ಣಧಾಮಕ್ಕೆ ತೆರಳಿದ ಅಮಿತ್ ಶಾ ಶ್ರೀಕೃಷ್ಣನ ದರ್ಶನ ಪಡೆದು ಪಂಚದೀಪಗಳನ್ನು ಬೆಳಗಿ ಪ್ರಾರ್ಥನೆ ಸಲ್ಲಿಸಿದರು. ನಂತರ ಸಂಸ್ಥಾನದ ಪಟ್ಟದ ದೇವರ ದರ್ಶನ ಪಡೆದ ಅವರು, ಶ್ರೀ ವಿಶ್ವತೀರ್ಥ ಸಂಸ್ಮರಣ ಧ್ಯಾನಮಂದಿರಕ್ಕೆ ತೆರಳಿ ಪಾದುಕಾ ದರ್ಶನ ಮಾಡಿದರು.

ತದನಂತರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರನ್ನು ಭೇಟಿಯಾದ ಅಮಿತ್ ಶಾ ಅವರು ಫಲಪುಷ್ಪ ಸಮರ್ಪಿಸಿ ಸತ್ಕರಿಸಿದರು. ಸ್ವಾಮೀಜಿಯವರೊಂದಿಗೆ ಕೆಲಹೊತ್ತು ಆಪ್ತ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಶ್ರೀಪಾದರು ಅಮಿತ್ ಶಾ ಅವರಿಗೆ ಶಾಲು, ಪೇಟ ಹಾಗೂ ಹಾರ ಹಾಕಿ ಸನ್ಮಾನಿಸಿ, ಸ್ಮರಣಿಕೆ ಸಹಿತ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಸಂಸದರಾದ ಬಾನ್ಸುರಿ ಸ್ವರಾಜ್, ರಾಮ್ ವೀರ್ ಸಿಂಗ್ ಬಿಧೂರಿ, ಶಾಸಕರಾದ ಅನಿಲ್ ಶರ್ಮಾ, ಕೈಲಾಶ್ ಗೆಹ್ಲೋತ್, ಡಿಡಿಎ ಸದಸ್ಯ ರಾಜೀವ್ ಬಬ್ಬರ್, ರಾಕೇಶ್ ಗೌರ್, ವಿದ್ವಾನ್ ಎನ್. ವಿಠಲ ಭಟ್, ಟಿ.ಪಿ. ಅನಂತ್ ಹಾಗೂ ಶ್ರೀಗಳ ಆಪ್ತ ಕಾರ್ಯದರ್ಶಿ ಕೃಷ್ಣಮೂರ್ತಿ ಭಟ್ ಮತ್ತಿತರರು ಹಾಜರಿದ್ದರು.

## ವಂದೇಮಾತರಂ ಗದ್ದಲ ಪ್ರತಿಧ್ವನಿ, ಎರಡೂ ಸದನದಲ್ಲಿ ವಾಕ್ಸಮರ

### ಎರಡು ಚರಣ ಹಾಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಪೂರ್ಣ ಗಾಯನ ಮಾಡಿದ ಬಿಜೆಪಿ ಸದಸ್ಯರು





**ಬೆಂಗಳೂರು,ಸೆ.21:** ರಾಜ್ಯ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನ ವಂದೇಮಾತರಂ ಗದ್ದಲ ತೀವ್ರಗೊಂಡಿತು. ಕಸ್ತೂರಿರಂಗನ್ ವರದಿ ಹಾಗೂ ಬರ ಪರಿಸ್ಥಿತಿ ಕುರಿತು ಮಹತ್ವದ ಚರ್ಚೆ ನಡೆಸಬೇಕಿದ್ದ ಸದನದಲ್ಲಿ ದಿನದ ಆರಂಭದಲ್ಲೇ ಎರಡೂ ಸದನದಲ್ಲಿ ವಂದೇ ಮಾತರಂ ಗಾಯನದ ಅವಧಿಯೇ ರಾಜಕೀಯ ಸಂಘರ್ಷಕ್ಕೆ ವೇದಿಕೆಯಾಯಿತು.

ಪರಿಷತ್‌ನಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಸಲೀಂ ಅಹ್ಮದ್ ಅಧ್ಯಕ್ಷತೆಯಲ್ಲಿ ವಂದೇ ಮಾತರಂ ಗಾಯನಕ್ಕೆ ಚಾಲನೆ ನೀಡಲಾಯಿತು. ರಾಜ್ಯ ಸರ್ಕಾರದ ಇತ್ತೀಚಿನ ಆದೇಶದಂತೆ ಎರಡು ಚರಣಗಳ ಗಾಯನದ ಬಳಿಕ ಕಾರ್ಯಕ್ರಮ ಸ್ಥಗಿತಗೊಂಡಿತು. ಇದನ್ನು ಆಕ್ಷೇಪಿಸಿದ ಬಿಜೆಪಿ ಸದಸ್ಯರು ಸದನದಲ್ಲೇ ಪೂರ್ಣ ವಂದೇಮಾತರಂ ಗಾಯನ ಆರಂಭಿಸಿದರು. ಇದೇ ವೇಳೆ ಸಭಾಪತಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲು ಮುಂದಾದರು. ಈ ನಡುವೆಯೂ ಬಿಜೆಪಿ ಸದಸ್ಯರು ಪೂರ್ಣ ವಂದೇಮಾತರಂ ಹಾಡಿದ್ದು, ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣಕ್ಕೆ ಕಾರಣವಾಯಿತು.

ಸರ್ಕಾರದ ಕಾರ್ಯಕ್ರಮದಲ್ಲಿ ಎರಡು ಚರಣ ಮಾತ್ರ ಹಾಡುವಂತೆ ಆದೇಶವಾಗಿದೆ ಎಂದು ಸಭಾನಾಯಕ ಯತೀಂದ್ರ ಸಮರ್ಥಿಸಿಕೊಂಡರು. ರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತಿತರ ಪ್ರಮುಖ ಸಂವಿಧಾನಿಕ ಗಣ್ಯರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡಲಾಗುತ್ತದೆ ಎಂದು ತಿಳಿಸಿದರು.

ಈ ಹೇಳಿಕೆ ಬಿಜೆಪಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು. ಸಿ.ಟಿ. ರವಿ ಮಾತನಾಡಿ, ಸಭಾಪತಿ ಅವರು ಹಾಗಾದರೆ ಅಸಹಾಯಕರಾಗಿದ್ದಾರೆಯೇ ಎಂದು ಪ್ರಶ್ನಿಸಿದರೆ, ಛಲವಾದಿ ನಾರಾಯಣಸ್ವಾಮಿ ಅವರು ಸಭಾಪತಿಯ ಅಧಿಕಾರ ಮತ್ತು ಸದನದ ಸ್ವಾಯತ್ತತೆಯ ಕುರಿತು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿದರು. ಸಭಾಪತಿಗಳ ಕೈಯಲ್ಲಿ ಏನೂ ಇಲ್ಲ ಎಂದು ಸಭಾನಾಯಕರು ಹೇಳುತ್ತಾರೆ. ನೀವು ಕಾಂಗ್ರೆಸ್ ಸಭಾಪತಿಗಳಾ ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು. ಯತೀಂದ್ರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ, ಈ ವಿಚಾರದಲ್ಲಿ ಸಭಾಪತಿಯೇ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು. ಇದರಿಂದ ಯತೀಂದ್ರ ಮತ್ತು ಛಲವಾದಿ ನಾರಾಯಣಸ್ವಾಮಿ ನಡುವೆ ಮಾತಿನ ಚಕಮಕಿ ನಡೆಯಿತು. ಸಿ.ಟಿ. ರವಿ ಮತ್ತಷ್ಟು ತೀವ್ರವಾಗಿ ಪ್ರತಿಕ್ರಿಯಿಸಿ, ಸಭಾಪತಿ ಪೀಠ ಸಂವಿಧಾನ ಪೀಠವೋ, ಕಾಂಗ್ರೆಸ್ ಪೀಠವೋ ಎಂದು ಪ್ರಶ್ನಿಸಿದರು.

**ಹರಿಪ್ರಸಾದ್ ಹೇಳಿಕೆಗೆ ಬಿಜೆಪಿ ತೀವ್ರ ವಿರೋಧ:** ವಿಧಾನಪರಿಷತ್‌ನಲ್ಲಿ ಪ್ರತಿಪಕ್ಷದ ಸದಸ್ಯರು ಪೂರ್ಣ ಗೀತೆ ಹಾಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್, ಈ ಸದನದಲ್ಲಿ ಈ ಹಿಂದೆ ಎರಡು ಚರಣಗಳೇ ಹಾಡಲಾಗುತ್ತಿತ್ತು ಎಂದು ಹೇಳಿದರು. ಬಿಜೆಪಿ ಸದಸ್ಯರು ಸಭಾಪತಿ ಬಂದ ಸಂದರ್ಭದಲ್ಲಿ ಪೂರ್ಣ ಗೀತೆ ಹಾಡಲು ಆರಂಭಿಸಿದ್ದಾರೆ ಎಂದು ಆಕ್ಷೇಪಿಸಿದರು.

ಇದಕ್ಕೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಇದು ಕಾಂಗ್ರೆಸ್ ಕಚೇರಿಯಲ್ಲ, ವಿಧಾನಪರಿಷತ್ ಎಂದು ಆಕ್ಷೇಪಿಸಿದರು. ಹರಿಪ್ರಸಾದ್ ಅವರ ಮಾತಿನ ನಡುವೆ ಘೋಷಣೆಗಳು ಮೊಳಗಿದವು. ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಕೆಲಕಾಲ ತೀವ್ರ ವಾಗ್ವಾದ ನಡೆಯಿತು.

### ಕಸ್ತೂರಿರಂಗನ್ ಚರ್ಚೆಗೆ ಮರಳಿಸಲು ಪರಮೇಶ್ವರ್ ಮನವಿ

**ಗದ್ದಲದ ನಡುವೆ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಸದನದ ಉದ್ದೇಶವನ್ನು ನೆನಪಿಸಿದರು. ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗಿದ್ದು, ಕಸ್ತೂರಿರಂಗನ್ ವರದಿ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಲಾಗಿದೆ. ಹೀಗಾಗಿ ಸದಸ್ಯರು ಸಹಕರಿಸಿ ಬರ, ರೈತರ ಸಮಸ್ಯೆಗಳು ಮತ್ತು ಕಸ್ತೂರಿರಂಗನ್ ವರದಿ ಕುರಿತು ಚರ್ಚೆ ನಡೆಸಬೇಕು ಎಂದು ಮನವಿ ಮಾಡಿದರು. ಆದರೆ ಬಿಜೆಪಿ ಸದಸ್ಯರು ಕಸ್ತೂರಿರಂಗನ್ ವರದಿಯ ಜಾರಿಗೆ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು. ಸಿ.ಟಿ. ರವಿ, ಕಸ್ತೂರಿರಂಗನ್ ವರದಿ ಕಾಂಗ್ರೆಸ್ ಸರ್ಕಾರದ ಹಿಂದಿನ ನೀತಿಗಳ ಪರಿಣಾಮ ಎಂಬ ಆರೋಪ ಮಾಡುತ್ತಾ ಪರಮೇಶ್ವರ್ ಅವರನ್ನು ತರಾಟೆಗೆ ತೆಗೆದುಕೊಂಡರು. ಇದರಿಂದ ಮತ್ತೆ ಎರಡೂ ಬದಿಯ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಸೆ.21ರಿಂದ 23ರವರೆಗೆ ನಡೆಯುತ್ತಿರುವ ವಿಶೇಷ ಅಧಿವೇಶನವನ್ನು ಮುಖ್ಯವಾಗಿ ಕಸ್ತೂರಿರಂಗನ್ ವರದಿ ಮತ್ತು ರಾಜ್ಯದ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಕರೆಯಲಾಗಿದೆ. ಸೆ.21ರಂದು ಕಸ್ತೂರಿರಂಗನ್ ವರದಿ, ನಂತರದ ದಿನಗಳಲ್ಲಿ ರೈತರ ಸಮಸ್ಯೆಗಳು ಮತ್ತು ಬರಕ್ಕೆ ಸಂಬಂಧಿಸಿದ ವಿಷಯಗಳ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ. ಸದನದಲ್ಲಿ ಪ್ರತಿಪಕ್ಷಗಳ ಮತ್ತು ಆಡಳಿತಾ ಸದಸ್ಯರ ನಡುವೆ ಗದ್ದಲ ಉಂಟಾದ ಪರಿಣಾಮ ಸಭಾಧ್ಯಕ್ಷರು ಕಲಾಪವನ್ನು ಕೆಲಕಾಲ ಮುಂದೂಡಿದರು.**

### ವಿಧಾನಸಭೆಯಲ್ಲೂ ಗದ್ದಲ

ವಂದೇಮಾತರಂ ಕುರಿತ ಗದ್ದಲ ವಿಧಾನಸಭೆಯ ಕಲಾಪದ ಆರಂಭದಲ್ಲೇ ಪ್ರತಿಧ್ವನಿಸಿದ್ದು, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳ ನಡುವೆ ತಾಳಮೇಳ ಇಲ್ಲದ ವಾತಾವರಣ ನಿರ್ಮಾಣವಾಯಿತು. ಎಂದಿನಂತೆ ವಂದೇ ಮಾತರಂ ಗೀತೆಯನ್ನು ಪ್ರಸಾರ ಮಾಡಲಾಯಿತು. ರಾಜ್ಯ ಸರ್ಕಾರದ ಆದೇಶದಂತೆ ಎರಡು ಚರಣಗಳ ಬಳಿಕ ವಂದೇಮಾತರಂ ನಿಲ್ಲಿಸಲಾಯಿತು.

ಆದರೆ ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರು ತಮ ಕೈಯಲ್ಲಿ ವಂದೇ ಮಾತರಂ ಗೀತೆಯ ಮುದ್ರಿತ ಪ್ರತಿಯನ್ನು ಹಿಡಿದು ಬಾಕಿ ಉಳಿದ ಚರಣಗಳ ಗಾಯನವನ್ನು ಮುಂದುವರಿಸಿದರು. ಬಳಿಕ ಭಾರತ್ ಮಾತಾಕೀ ಜೈ, ವಂದೇಮಾತರಂ, ಜೈಭೀಮ್ ಘೋಷಣೆ ಕೂಗಿದರು. ಆದರೆ ಇದ್ಯಾವುದನ್ನು ಕೇಳಿಸಿಕೊಳ್ಳದಂತೆ ಆಡಳಿತ ಪಕ್ಷದ ಕಡೆಯಿಂದ ಮುಂದುವರಿದ ಕಲಾಪಗಳು ನಡೆಯುತ್ತಿದ್ದವು.

ವಂದೇ ಮಾತರಂ ವಿಚಾರವಾಗಿ ವಿಧಾನ ಪರಿಷತ್‌ನಲ್ಲಾದಂತೆ ಯಾವುದೇ ಚರ್ಚೆ, ಗದ್ದಲಗಳು ನಡೆಯಲಿಲ್ಲ. ಆಡಳಿತ ಪಕ್ಷ ಕಾಂಗ್ರೆಸ್‌ನವರು ತಮ ನಿಲುವಿಗೆ ಬದ್ಧರಾಗಿ ಎರಡು ಚರಣಗಳನ್ನು ಹಾಡಿದರೆ, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಪೂರ್ಣ ಚರಣಗಳನ್ನು ಹಾಡಿ, ಕಲಾಪದಲ್ಲಿ ಭಾಗವಹಿಸಿದರು.

## ಅಯೋಧ್ಯೆ ರಾಮಮಂದಿರ: ಕಳವು ಮಾಡಿದ 105 ಘಟನೆ ಸಿಸಿಟಿವಿಯಲ್ಲಿ ಪತ್ತೆ: ಸುಪ್ರೀಂಗೆ ಎಸ್ಐಟಿ ಮಾಹಿತಿ

**ನವದೆಹಲಿ, ಸೆ.21:** ಅಯೋಧ್ಯೆ ರಾಮ ದೇಣಿಗೆ ಕಳ್ಳತನ ಪ್ರಕರಣದಲ್ಲಿ ಪ್ರಮುಖ ಬೆಳವಣಿಗೆಯಾಗಿದೆ. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ದೇವಾಲಯದೊಳಗಿನ ದೇಣಿಗೆ ಕಳ್ಳತನದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ವರದಿಯನ್ನು ಉಲ್ಲೇಖಿಸಿ, ತನಿಖೆಯ ಪ್ರಗತಿಯ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಸೋಮವಾರ ಮಾಹಿತಿ ನೀಡಿದರು. ದೇವಾಲಯದೊಳಗಿನ ದೇಣಿಗೆ ಕಳ್ಳತನದ 105 ಘಟನೆಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ. ಎಸ್ಐಟಿಯ ತನಿಖೆ ಪೂರ್ಣಗೊಳ್ಳುವ ಹಂತದಲ್ಲಿದೆ. ಎಸ್‌ಜಿ ಪ್ರಕಾರ, ಈ ಪ್ರಕರಣದಲ್ಲಿ ಸೆ.25 ರೊಳಗೆ ಚಾರ್ಜ್‌ಶೀಟ್ ಸಲ್ಲಿಸಲಾಗುವುದು.

ಸಿಸಿಟಿವಿಯಲ್ಲಿ ಸೆರೆಹಿಡಿಯಲಾದ 105 ಕಳ್ಳತನಗಳಿಗೆ ಸಂಬಂಧಿಸಿದ ಪುರಾವೆಗಳನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಸಾಕ್ಷಿಗಳ ಹೇಳಿಕೆಗಳು ಮತ್ತು ಇತರ ಪುರಾವೆಗಳನ್ನು ಸಹ ಹಾಜರುಪಡಿಸಲಾಯಿತು.

ವಿಶೇಷ ನ್ಯಾಯಾಂಗ ಮ್ಯಾಜಿಸ್ಟ್ರೇಟ್ (ಎಸ್‌ಜಿ) ಆರೋಪಿಗಳನ್ನು ಗುರುತಿಸಲು ಸಿಸಿಟಿವಿ ದೃಶ್ಯಾವಳಿಗಳು ಮತ್ತು ಇತರ ವಸ್ತುಗಳನ್ನು ಹೇಗೆ ವಿಶ್ಲೇಷಿಸಲಾಗಿದೆ ಎಂಬುದನ್ನು ಸ್ಥಿತಿ ವರದಿಯಲ್ಲಿ ವಿವರಿಸಿದ್ದಾರೆ. ಸುಪ್ರೀಂ ಕೋರ್ಟ್ ದಾಖಲೆಯಲ್ಲಿ ಒದಗಿಸಲಾದ ಎಲ್ಲಾ ಮಾಹಿತಿಯನ್ನು ತೆಗೆದುಕೊಂಡಿತು. ಬೆಲೆಬಾಳುವ ವಸ್ತುಗಳ ರಶೀದಿಗಳನ್ನು ಸಾಫ್ಟ್‌ವೇರ್ ಬಳಸಿ ರಚಿಸಲಾಗಿದೆ. ವಸ್ತುಗಳನ್ನು ಎಸ್‌ಬಿಐ ಲಾಕರ್‌ಗಳಲ್ಲಿ ಸಂಗ್ರಹಿಸಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ವಿಚಾರಣೆಯ ಸಮಯದಲ್ಲಿ, ಅರ್ಜಿದಾರರು ಎಸ್ಐಟಿ ವರದಿಯ ಪ್ರತಿಯನ್ನು ಕೋರಿದರು. ಆದರೆ ಕೋರ್ಟ್ ಈ ವಿನಂತಿಯನ್ನು ತಿರಸ್ಕರಿಸಿತು.

## ವಂದೇಮಾತರಂಗೆ ಕತ್ತರಿ: ಕಾಂಗ್ರೆಸ್ ವಿರುದ್ಧ ಗುಡುಗಿದ ಜೋಶಿ

ನವದೆಹಲಿ, ಸೆ.21: ವಂದೇಮಾತರಂ' ಗೀತೆಯನ್ನು ಎರಡೇ ಚರಣಕ್ಕೆ ಕತ್ತರಿಸಿದ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಂಸತ್ತಿನಲ್ಲಿ ರಣಕಹಳೆ ಮೊಳಗಿಸಲಿದ್ದೇವೆ" ಎಂದು ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದ್ದಾರೆ.

ಕಾಂಗ್ರೆಸ್ ಪಕ್ಷ ದೇಶವಿರೋಧಿ ಕ್ರೂರ ಮನಸ್ಥಿತಿ ಹೊಂದಿದ್ದು, ಕರ್ನಾಟಕದಲ್ಲಿ ತುಘಲಕ್ ದರ್ಬಾರ್ ನಡೆಸುತ್ತಿದೆ. ಸರ್ಕಾರ ಕಾನೂನು ಬಾಹಿರವಾಗಿ ಮನಸೋಇಚ್ಛೆ ಫರ್ಮಾನು ಹೊರಡಿಸುತ್ತಿದೆ ಎಂದು ಕಿಡಿ ಕಾರಿದ್ದಾರೆ.

ವಿಧಾನಸೌಧದಲ್ಲಿ 'ವಂದೇಮಾತರಂ' ಗೀತೆಯನ್ನು ಕಾನೂನು ಬಾಹಿರವಾಗಿ ಕತ್ತರಿಸಿ, ಕೇವಲ ಎರಡೇ ಚರಣವನ್ನು ಹಾಡಿ ದೇಶವಿರೋಧಿ ನೀತಿ ಪ್ರದರ್ಶಿಸಿದ್ದು, ಇದರ ವಿರುದ್ಧ ಸಂಸತ್ತಿನಲ್ಲಿ ಧ್ವನಿ ಎತ್ತಲಿದ್ದೇವೆ ಎಂದು ಹೇಳಿದ್ದಾರೆ ಜೋಶಿ.

### ದೇಶವಿರೋಧಿ ಮನಸ್ಥಿತಿಯ ಕರ್ನಾಟಕ ಕಾಂಗ್ರೆಸ್‌ನಿಂದ ತುಘಲಕ್ ದರ್ಬಾರ್

### ದೇಶದ ಹೆಮ್ಮೆಯನ್ನೇ ಬಲಿಕೊಡುತ್ತಿದೆ ಎಂದು ತರಾಟೆ



ನಕಲಿ ದೇಶಭಕ್ತಿ ಕಳಚಿದೆ: ಕಾಂಗ್ರೆಸ್ ತನ್ನ ನಕಲಿ ದೇಶ ಭಕ್ತಿಯ ಮುಖವಾಡವನ್ನು ಇಂದು ಸಂಪೂರ್ಣ ಕಳಚಿಟ್ಟಿದೆ. 'ವಂದೇಮಾತರಂ' ಅನ್ನು ಎರಡೇ ಚರಣಕ್ಕೆ ಸೀಮಿತಗೊಳಿಸಿ ಹಾಡಿದ್ದು ಅತ್ಯಂತ ಖಂಡನೀಯ ಮತ್ತು ನಾಚಿಕೆಗೇಡಿನ ಸಂಗತಿ ಎಂದು ಸಚಿವರು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಡಿಕೆಶಿ ಆಡಳಿತದಲ್ಲಿ ರಾಷ್ಟ್ರಗೀತೆಗೆ ಅಪಮಾನ: ಡಿಕೆ ಶಿವಕುಮಾರ ಆಡಳಿತ ದಲ್ಲಿ ರಾಷ್ಟ್ರಗೀತೆಗೆ ಹೀಗೆ ಅಪಮಾನ ಎಸಗುವುದನ್ನು ಕನ್ನಡಿಗರು ಯಾರೂ ನಿರೀಕ್ಷಿಸಿರಲಿಲ್ಲ. ದೆಹಲಿಯ ನಕಲಿ ಕುಟುಂಬವನ್ನು ಓಲೈಸಲು ರಾಜ್ಯ ಕಾಂಗ್ರೆಸ್ಸಿಗರು ಏನೆಲ್ಲಾ ಮಾಡುತ್ತಿದ್ದಾರೆ ಎಂದು ಹರಿಹಾಯ್ದಿದ್ದಾರೆ.

**ಕಾಂಗ್ರೆಸ್ ಗೆ ರಾಷ್ಟ್ರಗೀತೆ ಮೇಲೇಕೆ ಇಷ್ಟು ದ್ವೇಷ:** ಕಾಂಗ್ರೆಸ್ ಪಕ್ಷಕ್ಕೆ ನಮ್ಮ ರಾಷ್ಟ್ರಗೀತೆ ಮೇಲೇಕೆ ಇಷ್ಟು ದ್ವೇಷ ಎಂದು ಪ್ರಶ್ನಿಸುವ ಸಚಿವರು, ರಾಷ್ಟ್ರೀಯ ಗೌರವ ರಕ್ಷಣೆಗೆಂದು ಇತ್ತೀಚಿನ ಸಂಸತ್ ಅಧಿವೇಶನದಲ್ಲಿ ಜಾರಿ ತಂದ ಕಾಯ್ದೆಗೂ ಅಪಮಾನಿಸಿದಂತಿದೆ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆ ಎಂದು ಆಕ್ಷೇಪಿಸಿದ್ದಾರೆ.

**ದೇಶದ ಹೆಮ್ಮೆಯನ್ನೇ ಬಲಿ ಕೊಡುತ್ತಿರುವ ಕಾಂಗ್ರೆಸ್:** ರಾಜ್ಯ ಕಾಂಗ್ರೆಸ್ ಸರ್ಕಾರ ಈ ದೇಶದ ಹೆಮ್ಮೆಯನ್ನೇ ಬಲಿ ಕೊಡಲು ನಿಂತಿದೆ. ಆದರೆ, ಇಂಥ ತುಘಲಕ್ ಆದೇಶಗಳಿಂದ ಭಾರತಾಂಬೆಯ ಅಸ್ಮಿತೆಯನ್ನು ಅಳಿಸಲು ಸಾಧ್ಯವಿಲ್ಲ. ಕರ್ನಾಟಕದ ಜನತೆ ಈ ನೀಚ ಕೃತ್ಯಕ್ಕೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದು ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದ್ದಾರೆ.

## ಬೇಡಿಕೆ ಒಪ್ಪದಿದ್ದರೆ ಇಡೀ ರಾಷ್ಟ್ರವನ್ನೇ ಸ್ಫೋಟಿಸುವುದಾಗಿ ಬೆದರಿಕೆ: ಗುಡುಗಿದ ಟ್ರಂಪ್



**ವಾಷಿಂಗ್ಟನ್, ಸೆ.12:** ಅಮೆರಿಕವು ಈ ಪ್ರದೇಶದಲ್ಲಿ ತನ್ನ ಯುದ್ಧವನ್ನು ಹೆಚ್ಚಿಸಲು ಯೋಜಿಸುತ್ತಿದೆ ಎಂಬ ಕಳವಳಗಳ ನಡುವೆ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಆಡಳಿತದ ವಿರುದ್ಧ ಮತ್ತೊಂದು ಅಬ್ಬರದ ವಾಗ್ದಾಳಿಯಲ್ಲಿ "ಇಡೀ ರಾಷ್ಟ್ರವನ್ನೇ ಸ್ಫೋಟಿಸುವುದಾಗಿ" ಬೆದರಿಕೆ ಹಾಕಿದ್ದಾರೆ. ಫಾಕ್ಸ್ ನ್ಯೂಸ್ ಜತೆ ಮಾತನಾಡಿದ ಅಮೆರಿಕದ ಅಧ್ಯಕ್ಷರು, ಟೆಹ್ರಾನ್ ತನ್ನ ಬೇಡಿಕೆಗಳಿಗೆ ಒಪ್ಪದಿದ್ದರೆ "ಇಡೀ ರಾಷ್ಟ್ರವನ್ನೇ ಸ್ಫೋಟಿಸುವ" ಅಗತ್ಯ "ಇದೇ ವೇಳೆ ಮತ್ತು ಯಾವಾಗ" ಎಂಬುದು "ಪ್ರಶ್ನೆ" ಎಂದು ಹೇಳಿದರು. "ಅವರು ಉತ್ತಮವಾಗಿ ವರ್ತಿಸುತ್ತಾರೆ", ಆಯ್ಕೆಗಳಲ್ಲಿ "ಅವುಗಳನ್ನು ಅಳಿಸಿಹಾಕುವುದು, ಇರಾನ್ ಆರ್ಥಿಕವಾಗಿ ಕೊಳೆಯಲು ಬಿಡುವುದು ಅಥವಾ ಒಪ್ಪಂದ ಮಾಡಿಕೊಳ್ಳುವುದು" ಸೇರಿವೆ ಎಂದು ಹೇಳಿದರು. ಟೆಹ್ರಾನ್ ಅಮೆರಿಕ ಮತ್ತು ಮಧ್ಯಪ್ರಾಚ್ಯ ಪ್ರದೇಶಗಳನ್ನು ಇರಾನ್ ವಿರುದ್ಧ "ಯಾವುದೇ ತಪ್ಪು" ಮಾಡಿದರೆ "ನೋವಿನ ದಾಳಿ"ಗಳಿಗೆ ಗುರಿಯಾಗಿಸ ಲಾಗುವುದು ಎಂದು ಎಚ್ಚರಿಸಿದ ನಂತರ ಇದು ಬಂದಿದೆ. ಸೌದಿ ಅರೇಬಿಯಾ ಮತ್ತು ಯೆಮೆನ್‌ನಲ್ಲಿರುವ ಇರಾನ್ ಬೆಂಬಲಿತ ಹೌತಿಗಳ ನಡುವಿನ ಹಗೆತನವು "ವೇಗವಾಗಿ ಉಲ್ಬಣಗೊಳ್ಳುವ ಸಾಧ್ಯತೆಯಿದೆ" ಎಂದು ಮಧ್ಯಪ್ರಾಚ್ಯದಲ್ಲಿರುವ ಅಮೆರಿಕನ್ನರಿಗೆ ಯುಎಸ್ ಸ್ಟೇಟ್ ಡಿಪಾರ್ಟ್ಮೆಂಟ್ ಭದ್ರತಾ ಎಚ್ಚರಿಕೆಯನ್ನು ನೀಡಿದ್ದರಿಂದ ಇದು ಬಂದಿದೆ. ಈ ಪ್ರದೇಶದ ಕನಿಷ್ಠ 11 ಯುಎಸ್ ರಾಯಭಾರ ಕಚೇರಿಗಳು ಪ್ರಯಾಣ ಅಡಚಣೆಗಳು ಸಾಧ್ಯ ಎಂದು ಎಚ್ಚರಿಕೆ ನೀಡಿವೆ.

# ಯುಕೆಪಿ–3ನೇ ಹಂತಕ್ಕೆ ಶೀಘ್ರ ಭೂಸ್ವಾಧೀನ ಪ್ರಕ್ರಿಯೆ ಆರಂಭ



ಬೆಂಗಳೂರು, ಸೆ.21: ಮಹತ್ವಾಕಾಂಕ್ಷೆಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ಕ್ಕೆ (ಯುಕೆಪಿ–3) ಮತ್ತಷ್ಟು ವೇಗ ನೀಡಲು ರಾಜ್ಯ ಸರ್ಕಾರ ಮುಂದಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಇನ್ನೇನು ಕೆಲವೇ ದಿನಗಳಲ್ಲಿ ಶುರುವಾಗಲಿದೆ. ಇನ್ನೊಂದೆಡೆ ಕೃಷಿಯಲ್ಲಿ ಭವಿಷ್ಯ ಕಟ್ಟಿಕೊಳ್ಳಲು ಯುವ ರೈತರಿಗೆ ಸುವರ್ಣಾವಕಾಶ ನೀಡಲಾಗುತ್ತಿದೆ. ಈ ಮೂಲಕ ಯುವ ಕೃಷಿಕರ ಕನಸಿಗೆ ರೆಕ್ಕೆ ನೀಡಲು ಸರ್ಕಾರ ಸಿದ್ಧವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂಬಿ ಪಾಟೀಲ್ ತಿಳಿಸಿದ್ದಾರೆ.

ಮೊದಲಿಗೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಳ–184 ಗ್ರಾಮಗಳ ಜಮೀನು ಭೂಸ್ವಾಧೀನ ಪಡಿಸುವ ಕುರಿತು ಸೋಮವಾರ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಮಹತ್ವದ ಸಭೆ ನಡೆಯಿತು. ಈ ವೇಳೆ ಎಂಬಿ ಪಾಟೀಲರೊಂದಿಗೆ ಭೂಸ್ವಾಧೀನ ಹಾಗೂ ಸಂಬಂಧಿತ ಪ್ರಕ್ರಿಯೆಗಳ ಪ್ರಗತಿ ಕುರಿತು ಚರ್ಚೆಗಳು ನಡೆಸಿದರು. ಸಚಿವರಾದ ಲಕ್ಷ್ಮಣ ಸವದಿ, ವಿಜಯಾನಂದ ಕಾಶಪ್ಪನವರ್ ಇದ್ದರು.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಅಡಿಯಲ್ಲಿ ಆಲಮಟ್ಟಿ ಜಲಾಶಯದ ಪೂರ್ಣ ಜಲಾಶಯ ಮಟ್ಟವನ್ನು 519.60 ಮೀಟರ್‌ನಿಂದ 524.256 ಮೀಟರ್‌ಗೆ ಹೆಚ್ಚಿಸುವ ಹಿನ್ನೆಲೆಯಲ್ಲಿ, ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ 184 ಗ್ರಾಮಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಮುಖ ಹಂತದಲ್ಲಿದೆ ಎಂಬುದನ್ನು ಸಚಿವರು ಸಭೆಯಲ್ಲಿ ಗಮನಕ್ಕೆ ತಂದರು.

# ಅಧಿವೇಶನ ಒಂದು ವಾರ ವಿಸ್ತರಿಸಿ



**ಬೆಂಗಳೂರು, ಸೆ.21:** ರಾಜ್ಯದ ವಿವಿಧ ಗಂಭೀರ ಸಮಸ್ಯೆಗಳು ಹಾಗೂ ಸಂಕಷ್ಟಗಳ ಕುರಿತು ಸಮಗ್ರವಾಗಿ ಚರ್ಚಿಸಲು ಕೇವಲ ಮೂರು ದಿನಗಳ ವಿಶೇಷ ಅಧಿವೇಶನ ಸಾಕಾಗುವುದಿಲ್ಲ, ಕನಿಷ್ಠ ಒಂದು ವಾರಕ್ಕೆ ವಿಸ್ತರಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಸ್ತೂರಿರಂಗನ್ ವರದಿ, ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲ, ಸಂಕಷ್ಟದಲ್ಲಿರುವ ರೈತರು ಸೇರಿ ಹಲವು ಪ್ರಮುಖ ವಿಚಾರಗಳ ಕುರಿತು ಚರ್ಚಿಸಲು ಮೂರು ದಿನ ಸಾಕಾಗುವುದಿಲ್ಲ. ಹೀಗಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರು, ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಸೇರಿ ನಾವು ಕನಿಷ್ಠ ಒಂದು ವಾರ ಅಧಿವೇಶನ ನಡೆಸಬೇಕೆಂದು ಆಗ್ರಹಿಸಿದ್ದೇವೆ ಎಂದರು.

ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿಜೆಪಿಯವರು ಜನರ ಭಾವನೆಗಳ ಮೇಲೆ ಆಡಳಿತ ನಡೆಸುತ್ತಾರೆ ಹಾಗೂ ಕಾಂಗ್ರೆಸ್ ಜನರ ಬದುಕನ್ನು ಕಟ್ಟಿಕೊಡುವ ಕೆಲಸ ಮಾಡುತ್ತದೆ ಎಂಬರ್ಥದಲ್ಲಿ ಮಾತನಾಡಿದ್ದರು. ಆದರೆ ಕಳೆದ ಮೂರು ಕಾಲು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ನಿಜವಾಗಿಯೂ ಜನರ ಬದುಕನ್ನು ಕಟ್ಟಿಕೊಡುವ ಕೆಲಸ ಮಾಡಿದೆಯೇ ಅಥವಾ ಜನರ ಬದುಕಿನೊಂದಿಗೆ ಚೆಲ್ಲಾಟವಾಡಿದೆಯೇ ಎಂಬುದನ್ನೂ ಈ ಅಧಿವೇಶನದಲ್ಲಿ ಚರ್ಚಿಸಬೇಕಿದೆ ಎಂದು ಹೇಳಿದರು. ಬಿಜೆಪಿ ನಡೆಸಿದ ನಿರಂತರ ಹೋರಾಟದ ಒತ್ತಡಕ್ಕೆ ಮಣಿದು ಸರ್ಕಾರ ವಿಶೇಷ ಅಧಿವೇಶನ ಕರೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಅಧಿವೇಶನದಲ್ಲಿ ಬಿಜೆಪಿ ಹಾಗೂ ನಮ ಮಿತ್ರಪಕ್ಷ ಜೆಡಿಎಸ್ ಒಟ್ಟಾಗಿ ರೈತರ ಪರವಾಗಿ ಬಲವಾಗಿ ಧ್ವನಿ ಎತ್ತಲಿವೆ. ರಾಜ್ಯದ ರೈತರು ಎದುರಿಸುತ್ತಿರುವ ಬರಗಾಲದ ಸಂಕಷ್ಟ, ಬೆಳೆ ನಷ್ಟ, ರೈತರ ಸಮಸ್ಯೆಗಳು ಸೇರಿದಂತೆ ಅವರ ಬದುಕಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸಲಾಗುವುದು ಎಂದು ಬಿ.ವೈ. ವಿಜಯೇಂದ್ರ ತಿಳಿಸಿದರು.

# ಪೋಖ್ರಾನ್‌ನಲ್ಲಿ ಸ್ವದೇಶಿ ಕೆಎಎಲ್ ದಾಳಿ ಡ್ರೋನ್ ಯಶಸ್ವಿ ಪರೀಕ್ಷೆ

**ನವದೆಹಲಿ, ಸೆ.21:** ಭಾರತದ ಸ್ವದೇಶಿ ರಕ್ಷಣಾ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ ಯಾಗಿ, ನೋಯ್ಡಾ ಮೂಲದ ಐಜಿ ಡಿಫೇನ್ಸ್ ಸಂಸ್ಥೆ ಅಭಿವೃದ್ಧಿ ಪಡಿಸಿರುವ ದೀರ್ಘ ವ್ಯಾಪ್ತಿಯ KAL ಒನ್–ವೇ ಅಟ್ಯಾಕ್ ಡ್ರೋನ್ ಅನ್ನು ರಾಜಸ್ಥಾನದ ಪೋಖ್ರಾನ್ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.




ವಾಹನದ ಮೇಲೆ ಅಳವಡಿಸಲಾಗಿದ್ದ ಉಡಾವಣಾ ಸೈಟ್‌ನಿಂದ KAL ಡ್ರೋನ್ ಅನ್ನು ಹಾರಿಸಲಾಗಿದ್ದು, ಪರೀಕ್ಷೆಯಲ್ಲಿ ಅದರ ಏರ್‌ಫ್ರೇಮ್, ಪ್ರೊಪಲ್ಷನ್, ಏವಿಯಾನಿಕ್ಸ್, ನ್ಯಾವಿಗೇಷನ್ ಹಾಗೂ ಮಿಷನ್ ವ್ಯವಸ್ಥೆಗಳ ಸಮನ್ವಯವನ್ನು ಪರಿಶೀಲಿಸಲಾಯಿತು. ಆದರೆ ಪರೀಕ್ಷೆಯ ವೇಳೆ ಡ್ರೋನ್ ನಿಖರವಾಗಿ ಎಷ್ಟು ದೂರ ಅಥವಾ ಎಷ್ಟು ಸಮಯ ಹಾರಾಟ ನಡೆಸಿತು ಎಂಬುದನ್ನು ಸಂಸ್ಥೆ ಬಹಿರಂಗಪಡಿಸಿಲ್ಲ. ಜೀವಂತ ಪೇಲೋಡ್‌ನೊಂದಿಗೆ ಪರೀಕ್ಷೆ ನಡೆಸಲಾಗಿತ್ತೇ ಅಥವಾ ಅಂತಿಮ ಗುರಿ ದಾಳಿ ನಡೆಸಲಾಗಿತ್ತೇ ಎಂಬುದನ್ನೂ ತಿಳಿಸಲಾಗಿಲ್ಲ.

ಐಜಿ ಡಿಫೆನ್ಸ್ ಪ್ರಕಾರ KAL ಡ್ರೋನ್ 1,000 ಕಿ.ಮೀ.ವರೆಗೆ ವ್ಯಾಪ್ತಿ ಹೊಂದಿದ್ದು, 7ರಿಂದ 8 ಗಂಟೆಗಳವರೆಗೆ ನಿರಂತರವಾಗಿ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಗರಿಷ್ಠ 50 ಕೆ.ಜಿ. ಪೇಲೋಡ್ ಹೊತ್ತೊಯ್ಯಬಲ್ಲ ಈ ಡ್ರೋನ್ ಸಮುದ್ರಮಟ್ಟದಿಂದ ಸುಮಾರು 5,000 ಮೀಟರ್ ಎತ್ತರದವರೆಗೆ ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ.

ಏಂಐನಲ್ಲಿ ಮಲ್ಟಿ–ಬ್ಯಾಂಡ್ GNSS ಮತ್ತು ಇನರ್ಷಿಯಲ್ ನ್ಯಾವಿಗೇಷನ್ ಸಿಸ್ಟಮ್ ಅನ್ನು ಸಂಯೋಜಿಸಿರುವ ನ್ಯಾವಿಗೇಷನ್ ವ್ಯವಸ್ಥೆ ಬಳಸಲಾಗಿದೆ. ಇದರಿಂದ ಮಿಷನ್‌ನ ವಿವಿಧ ಹಂತಗಳಲ್ಲಿ ಡ್ರೋನ್ ಸ್ವಾಯತ್ತವಾಗಿ ಹಾರಾಟ ನಡೆಸುವಂತೆ ವಿನ್ಯಾಸಗೊಳಿಸಲಾಗಿದೆ.

KAL ಅನ್ನು ನಿರ್ದಿಷ್ಟ ಗುರಿಗಳ ವಿರುದ್ಧ ಒನ್–ವೇ ಮಿಷನ್ ನಡೆಸಲು ವಿನ್ಯಾಸಗೊಳಿಸಲಾಗಿದೆ. ಅಂದರೆ, ಗುರಿಯತ್ತ ತೆರಳಿ ದಾಳಿ ನಡೆಸಿದ ಬಳಿಕ ಮರಳಿ ಬರುವ ಉದ್ದೇಶದ ಸಾಮಾನ್ಯ ಡ್ರೋನ್‌ಗಿಂತ ಭಿನ್ನವಾದ ವ್ಯವಸ್ಥೆಯಾಗಿದೆ. ಸಂಸ್ಥೆಯ ಪ್ರಕಾರ, ಮಿಷನ್ ವಿನ್ಯಾಸ ಮತ್ತು ಅಗತ್ಯ ಅನುಮತಿಗಳ ಆಧಾರದ ಮೇಲೆ ಮೂಲಸೌಕರ್ಯ, ರೇಡಾರ್ ವ್ಯವಸ್ಥೆ, ವಾಯು ರಕ್ಷಣಾ ವ್ಯವಸ್ಥೆಗಳು ಸೇರಿದಂತೆ ವಿವಿಧ ನಿರ್ದಿಷ್ಟ ಗುರಿಗಳನ್ನು ಹೊಡೆಯಲು ಇದನ್ನು ಬಳಸಬಹುದು

# ಇಂದು 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ

**ನವದೆಹಲಿ, ಸೆ. 21:** 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವು ನಾಳೆ, 2026ರ ಸೆಪ್ಟೆಂಬರ್ 22 ರಂದು ಗುಜರಾತ್ನ ಕೆವಾಡಿಯಾದಲ್ಲಿರುವ ಏಕತಾ ನಗರದಲ್ಲಿ ನಡೆಯಲಿದೆ. 2024ರ ಸಾಲಿನ ಭಾರತೀಯ ಸಿನಿಮಾಗಳ ಅತ್ಯುತ್ತಮ ಸಾಧನೆಯನ್ನು ಗೌರವಿಸುವ ಈ ಪ್ರಶಸ್ತಿಗಳನ್ನು ಭಾರತದ ರಾಷ್ಟ್ರಪತಿಗಳು ಪ್ರದಾನ ಮಾಡಲಿದ್ದಾರೆ.

ಎಲ್ಲ ಕನ್ನಡಿಗರಿಗೂ ಈ ಬಾರಿಯ ಸಮಾರಂಭ ತೀರಾ ವಿಶೇಷವಾದದ್ದು. ಹಿರಿಯ ನಟ ಅನಂತ್ ನಾಗ್ ಅವರಿಗೆ ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವವಾದ 2024ರ ಸಾಲಿನ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ರಾಷ್ಟ್ರಪತಿಗಳು ಸ್ವತಃ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಐದು ದಶಕಗಳಿಗೂ ಹೆಚ್ಚಿನ ತಮ್ಮ ನಟನಾ ಪಯಣದಲ್ಲಿ ಅನಂತ್ ನಾಗ್ ಅವರು ಕನ್ನಡ ಹಾಗೂ ಭಾರತೀಯ ಚಿತ್ರರಂಗಕ್ಕೆ ಅತ್ಯಂತ ಸ್ಮರಣೀಯ ಪಾತ್ರಗಳನ್ನು ನೀಡಿದ್ದು, ಈ ಸುದೀರ್ಘ ಪಯಣಕ್ಕೆ ಈ ಪ್ರಶಸ್ತಿ ಸಂದಿದೆ.




**ಗುಜರಾತ್‌ನ ಕೆವಾಡಿಯಾದ ಏಕತಾ ನಗರದಲ್ಲಿ ಸಮಾರಂಭ**

ಪ್ರಮುಖ ಪ್ರಶಸ್ತಿಗಳ ಪೈಕಿ, ಆರ್ಟಿಕಲ್ 370 ಅತ್ಯುತ್ತಮ ಕಥಾಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಭ್ರಮಯುಗಂ ಚಿತ್ರಕ್ಕಾಗಿ ಮಮ್ಮುಟ್ಟಿ ಹಾಗೂ ಚಂದು ಚಾಂಪಿಯನ್ ಚಿತ್ರಕ್ಕಾಗಿ ಕಾರ್ತಿಕ್ ಆರ್ಯನ್ ಅತ್ಯುತ್ತಮ ನಟ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಆರ್ಟಿಕಲ್ 370 ಚಿತ್ರದ ಅಭಿನಯಕ್ಕಾಗಿ ಯಾಮಿ ಗೌತಮ್ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆಯಲಿದ್ದಾರೆ. ಸ್ವಾತಂತ್ರ್ಯ ವೀರ್ ಸಾವರ್ಕರ್ ಚಿತ್ರಕ್ಕಾಗಿ ರಣದೀಪ್ ಹೂಡಾ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಭಾಂಗಾರ್ ಅತ್ಯುತ್ತಮ ರಂಗೇತರ ಚಿತ್ರ ಹಾಗೂ ?ರಾಮ್–ನಾಮಿ? ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿವೆ. ಇನ್ನುಳಿದಂತೆ ಕಲ್ಕಿ 2898 AD, ಅಮರನ್, ಪುಷ್ಪ: ದಿ ರೂಲ್ ಪಾರ್ಟ್–02, ಭೂಲ್ ಭುಲೈಯ್ಯಾ 3 ಮತ್ತು ಸ್ತ್ರೀ 2 ನಂತಹ ಜನಪ್ರಿಯ ಸಿನಿಮಾಗಳು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪಡೆಯಲಿವೆ.

ಈ ವರ್ಷ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಉತ್ಸವಕ್ಕೆ ಹೊಸದೊಂದು ಅಧ್ಯಾಯವೂ ಶುರುವಾಗಿದೆ. ಮೊದಲ ಬಾರಿಗೆ ಈ ಸಮಾರಂಭವು ದೆಹಲಿಯಿಂದ ಹೊರಗೆ ನಡೆಯುತ್ತಿದೆ. ಭಾರತೀಯ ಚಿತ್ರರಂಗದ ಈ ಸಂಭ್ರಮವು ದೇಶದ ಮೂಲೆ ಮೂಲೆಗೂ ತಲುಪಲಿ ಎಂಬ ಉದ್ದೇಶದಿಂದ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಮುಂಬರುವ ವರ್ಷಗಳಲ್ಲಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲು ತೀರ್ಮಾನಿಸಿದೆ. 1954 ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ಎಲ್ಲಾ ಭಾರತೀಯ ಭಾಷೆಗಳ ಕಥಾಚಿತ್ರಗಳು, ಸಾಕ್ಷ್ಯಚಿತ್ರಗಳು ಮತ್ತು ಸಿನಿಮಾ ಕುರಿತಾದ ಬರಹಗಳನ್ನು ಒಳಗೊಂಡಿವೆ.

# ಕಸ್ತೂರಿರಂಗನ್ ವರದಿ: ಪ್ರತಿಪಕ್ಷಗಳ ನಿಲುವು ಪ್ರಶ್ನಿಸಿದ ಡಾ.ಜಿ. ಪರಮೇಶ್ವರ್

**ಬೆಂಗಳೂರು, ಸೆ.21:** ಪಶ್ಚಿಮಘಟ್ಟಗಳ ಕಸ್ತೂರಿರಂಗನ್ ಸಮಿತಿ ವರದಿ ಹಾಗೂ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಆರಂಭವಾದ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಮತ್ತು ಪ್ರತಿಭಟನೆಗೆ ವೇದಿಕೆಯಾಯಿತು.

ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಕಸ್ತೂರಿರಂಗನ್ ವರದಿ ವಿಚಾರವನ್ನು ಪ್ರಸ್ತಾಪಿಸಿದ ಬಳಿಕವೂ ಪ್ರತಿಪಕ್ಷ ಸದಸ್ಯರ ಪ್ರತಿಭಟನೆ ಮುಂದುವರಿದ ಹಿನ್ನೆಲೆಯಲ್ಲಿ ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು.

ಕಸ್ತೂರಿರಂಗನ್ ವರದಿಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರಗಳ ಮೂಲಕ ತಿಳಿಸಿದೆ.. ಕೇಂದ್ರ ಸರ್ಕಾರ ಪದೇಪದೇ ಅಧಿಸೂಚನೆಗಳನ್ನು ಹೊರಡಿಸುತ್ತಿದ್ದು, ಇದೀಗ ಹೊರಡಿಸಿರುವ ಕರಡು ಅಧಿಸೂಚನೆಗೂ ರಾಜ್ಯ ಸರ್ಕಾರದ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಮುಂದುವರಿದು ಪರಮೇಶ್ವರ್ ಅವರು ಪ್ರತಿಪಕ್ಷಗಳ ನಿಲುವನ್ನೇ ಪ್ರಶ್ನಿಸಿ, ವಿಪಕ್ಷಗಳು ಕಸ್ತೂರಿರಂಗನ್ ವರದಿಯ ಪರವೋ ಅಥವಾ ವಿರೋಧವೋ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಪಕ್ಷಗಳು ತಮ್ಮ ನಿಲುವನ್ನು ಹೇಳದಿದ್ದರೆ, ಜನರಿಗೆ ಅವರು ವರದಿಯ ಪರವಾಗಿದ್ದಾರೆ ಎಂಬ ಸಂದೇಶ ಹೋಗಬೇಕಾಗುತ್ತದೆ ಎಂದು ಹೇಳಿದರು. ಈ ಹೇಳಿಕೆ ಸದನದಲ್ಲಿ ಮತ್ತಷ್ಟು ರಾಜಕೀಯ ಬಿಸಿ ಏರಲು ಕಾರಣವಾಯಿತು.

**ವಿಪಕ್ಷದಿಂದ ತೀವ್ರ ಆಕ್ಷೇಪ:** ಪರಮೇಶ್ವರ್ ಅವರ ಪ್ರಸ್ತಾಪದ ನಡುವೆಯೇ ವಿಪಕ್ಷ ಸದಸ್ಯರು ಕಸ್ತೂರಿರಂಗನ್ ವರದಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಆಡಳಿತ ಪಕ್ಷ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರವೂ ನಡೆಯಿತು.

**ಸದನದಲ್ಲಿ ಬಿಸಿ ಏರಿಸಿದ ಡಿಸಿಎಂ ಹೇಳಿಕೆ, ವರದಿಗೆ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷ**



ಬಿಜೆಪಿ ನಾಯಕ ಸಿ.ಟಿ. ರವಿ ಅವರು ಕಸ್ತೂರಿರಂಗನ್ ವರದಿ ಹಾಗೂ ಅದರ ಹಿನ್ನೆಲೆಯ ಕುರಿತು ಕಾಂಗ್ರೆಸ್ ವಿರುದ್ಧ ಟೀಕಾತಕ ಹೇಳಿಕೆ ನೀಡಿದರು. ವರದಿಯ ವಿಚಾರದಲ್ಲಿ ಕಾಂಗ್ರೆಸ್‌ನ ನಿಲುವನ್ನು ಪ್ರಶ್ನಿಸಿದ ಅವರು, ಈ ಕುರಿತು ವಿಷಾದ ವ್ಯಕ್ತಪಡಿಸಬೇಕು ಎಂಬ ಅಭಿಪ್ರಾಯವನ್ನು ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ವ್ಯಕ್ತಪಡಿಸಿದರು. ಇದರ ನಡುವೆ ಸದನದಲ್ಲಿ ಘೋಷಣೆಗಳು ಮುಂದುವರಿದಿದ್ದರಿಂದ ಕಲಾಪದ ಸಹಜ ಪ್ರಕ್ರಿಯೆಗೆ ಅಡ್ಡಿಯಾಯಿತು.

## ಅಭಿಪ್ರಾಯ ಸಂಗ್ರಹಿಸಲು ನೇಮಿಸಿದ್ದ ಸಂಜಯ್ ಕುಮಾರ್ ಸಮಿತಿ ಹಳ್ಳಿಗಳಿಗೆ ಭೇಟಿಯೇ ನೀಡಿಲ್ಲ



**ಬೆಂಗಳೂರು, ಸೆ.21:** ಕಸ್ತೂರಿರಂಗನ್ ವರದಿಗೆ ಸಂಬಂಧಿಸಿದಂತೆ ರಾಜ್ಯಗಳ ಸಲಹೆ ಪರಿಶೀಲಿಸಲು ನೇಮಕವಾದ ಸಂಜಯ ಕುಮಾರ್ ಸಮಿತಿ, ಪಶ್ಚಿಮಘಟ್ಟದ ಬಾಧಿತ ಗ್ರಾಮಗಳಿಗೆ ಭೇಟಿ ನೀಡಿ ಜನರ ಅಭಿಪ್ರಾಯವನ್ನೇ ಪಡೆಯಲಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ವಿಧಾನಸಭೆಯಲ್ಲಿಂದು ಕಸ್ತೂರಿ ರಂಗನ್ ವರದಿ ಕುರಿತ ಚರ್ಚೆಯ ವೇಳೆ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ನಾನು ಅರಣ್ಯ ಸಚಿವನಾಗಿದ್ದಾಗ ನಿವೃತ್ತ ಅರಣ್ಯಾಧಿಕಾರಿ ಸಂಜಯ್ ಕುಮಾರ್ ನನ್ನನ್ನು ಭೇಟಿ ಮಾಡಿದ್ದರು. ನಾನು ಗ್ರಾಮ ಪಂಚಾಯತಿಗಳಿಗೆ ಹೋಗಿ, ಜನವಸತಿ ಪ್ರದೇಶಕ್ಕೆ ಭೇಟಿ ನೀಡಿ ಅಭಿಪ್ರಾಯ ಪಡೆಯಲು ಸಲಹೆ ನೀಡಿದ್ದೆ. ಆದರೆ ಅವರು ತಮ್ಮ ಕರ್ತವ್ಯ ಮಾಡಲಿಲ್ಲ ಎಂದರು.

ಕಸ್ತೂರಿರಂಗನ್ ವರದಿಯಲ್ಲಿ ನಮೂದಿಸಿರುವ 20,668 ಚದರ ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶದ ಪೈಕಿ 16000 ಚದರ ಕಿ.ಮೀ ಈಗಾಗಲೇ ಹುಲಿ ಸಂರಕ್ಷಿತ ಪ್ರದೇಶ, ಅಭಯಾರಣ್ಯ, ಮೀಸಲು ಅರಣ್ಯ ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಶೇ.80ರಷ್ಟು ಸಂರಕ್ಷಿತವಾಗಿದೆ. ಇದರ ಹೊರತಾಗಿ 10 ಜಿಲ್ಲೆಗಳ 34 ತಾಲೂಕಿನ 1449 ಹಳ್ಳಿಗಳು ಸೂಕ್ಷ್ಮ ಪ್ರದೇಶದಲ್ಲಿವೆ ಅವರಿಗೆ ನ್ಯಾಯ ಸಿಗಬೇಕು ಎಂದರೆ ಅಷ್ಟು ಪ್ರದೇಶ ಬಿಟ್ಟು ಬಿಡಿ ಎಂದು ಕೇಳಬೇಕು ಎಂದರು.

ಕೇರಳ ರಾಜ್ಯದಲ್ಲಿ ಸುಮಾರು 13 ಸಾವಿರ ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಇತ್ತು. ಇದನ್ನು 9900 ಚ.ಕಿ.ಮೀ. ಇಳಿಸಲಾಗಿದೆ. ಅದೇ ರೀತಿ ಸಭೆ ಮಾಡಿ ಸಮೀಕ್ಷೆ ಮಾಡಬೇಕು. ಹಲವು ನದಿಗಳ ಮೂಲವಾದ ಪಶ್ಚಿಮ ಘಟ್ಟ 8ನೇ ಜೀವವೈವಿಧ್ಯ ತಾಣವಾಗಿದೆ. ಮಳೆಯ ಮಾರುತ ತಡೆದು ದೇಶವ್ಯಾಪ್ತಿ ಮಳೆ ಸುರಿಸಲು ನೆರವಾಗುತ್ತದೆ. ಹೀಗಾಗಿ ಅದನ್ನು ಸಂರಕ್ಷಿಸಬೇಕು. ಇಷ್ಟು ದಿನ ಅದು ಉಳಿದಿದ್ದರೆ ಅಲ್ಲಿನ ನಿವಾಸಿಗಳಿಂದ ಎಂದರು. ದೊಡ್ಡ ಒತ್ತುವರಿದಾರರಿಗೆ ಅವಕಾಶ ನೀಡಬಾರದು ಎಂದೂ ಹೇಳಿದ ಈಶ್ವರ ಖಂಡ್ರೆ, ಯಾವುದೇ ರಾಜಕೀಯ ಬೆರೆಸದೆ, ಪರಿಸರ ಪ್ರಕೃತಿ ಸಂರಕ್ಷಿಸಬೇಕು, ನೇಪಾಳದ ದುರಂತ ನಮ್ಮ ಕಣ್ಣಮುಂದಿದೆ. ಜಾಗತಿಕ ತಾಪಮಾನ ಏರುತ್ತಿದೆ. ಇದನ್ನೂ ಗಮನಹರಿಸಬೇಕು. ಕೇಂದ್ರ ಅಧಿಸೂಚನೆ ಹೊರಡಿಸಿದ್ದು, ಅದಕ್ಕೂ ಉತ್ತರ ದಾಯಿತ್ವ ಇದೆ. ಹೀಗಾಗಿ ಆ ಪ್ರದೇಶಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆ ಪರಿಹರಿಸಬೇಕು ಎಂದರು.

# ಇಂದಿರಾ ಕಿಟ್ ಹಳೆಯ ಟೆಂಡರ್ ರದ್ದು, ಹೊಸ ಯೋಜನೆ: ಸಚಿವ ರಿಜ್ವಾನ್ ಅರ್ಷದ್



**ಬೆಂಗಳೂರು, ಸೆ.21:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಅನ್ನಭಾಗ್ಯ' ಯೋಜನೆಯಡಿ ನೀಡಲು ಉದ್ದೇಶಿಸಲಾಗಿದ್ದ 'ಇಂದಿರಾ ಆಹಾರ ಕಿಟ್' ಖರೀದಿಯ ಹಳೆಯ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿದ್ದು, ಹೊಸ ಹಾಗೂ ಸರಳೀಕೃತ ಮಾದರಿಯಲ್ಲಿ ಯೋಜನೆಯನ್ನು ಮರುರೂಪಿಸಲು ಸರ್ಕಾರ ಮುಂದಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್, ಒಂದೂವರೆ ತಿಂಗಳ ಅವಧಿಯಲ್ಲಿ ಪರಿಷ್ಕೃತ ರೂಪುರೇಷೆಗಳೊಂದಿಗೆ ಈ ಯೋಜನೆಯನ್ನು ಜಾರಿಗೆ ತರುವ ಸುಳಿವು ನೀಡಿದ್ದಾರೆ.

ಇಲಾಖೆಯು ನಡೆಸಿದ ವಿಶೇಷ ಸಮೀಕ್ಷೆ ಹಾಗೂ ಮೌಲ್ಯಮಾಪನದ ವೇಳೆ, ಕೇವಲ ಅಕ್ಕಿಯನ್ನೇ ನೆಚ್ಚಿಕೊಳ್ಳುವ ಬದಲು ಪೌಷ್ಟಿಕ ಹಾಗೂ ವೈವಿಧ್ಯಮಯ ಅಡುಗೆ ಸಾಮಗ್ರಿಗಳನ್ನು ಪಡೆಯಲು ಮಹಿಳಾ ಫಲಾನುಭವಿಗಳು ಹೆಚ್ಚಿನ ಆಸಕ್ತಿ ತೋರಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಶೀಘ್ರದಲ್ಲೇ ಬಿಪಿಎಲ್ ಕಾರ್ಡುದಾರರಿಗೆ ತೊಗರಿಬೇಳೆ, ಸಕ್ಕರೆ, ಉಪ್ಪು ಹಾಗೂ ಅಡುಗೆಎಣ್ಣೆಯನ್ನೊಳಗೊಂಡ ಆಹಾರ ಕಿಟ್‌ಗಳನ್ನು ನೀಡಲು ಸಿದ್ಧತೆ ನಡೆಸಲಾಗುತ್ತಿದೆ. ಕಿಟ್‌ನಲ್ಲಿರುವ ವಸ್ತುಗಳ ಪಟ್ಟಿ ಹಾಗೂ ಅವುಗಳನ್ನು ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸುವ ಸರಪಳಿ ವ್ಯವಸ್ಥೆಯನ್ನು ಸದ್ಯ ಸಮಗ್ರವಾಗಿ ಮರುಪರಿಶೀಲಿಸಲಾಗುತ್ತಿದೆ.

ಆಹಾರ ಕಿಟ್‌ನ ಅಂತಿಮ ಸ್ವರೂಪ, ಖರೀದಿ ವಿಧಾನ ಹಾಗೂ ವಿತರಣಾ ಚೌಕಟ್ಟು ಸಂಪೂರ್ಣವಾಗಿ ರೂಪುಗೊಂಡು ಜಾರಿಗೆ ಬರುವವರೆಗೂ ಬಿಪಿಎಲ್ ಕುಟುಂಬಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಹೆಚ್ಚುವರಿ 5 ಕೆಜಿ ಅಕ್ಕಿ ವಿತರಣೆ ಯಥಾರೀತಿ ಮುಂದುವರಿಯಲಿದೆ. ಫಲಾನುಭವಿಗಳ ಆಹಾರ ಭದ್ರತೆ ಮತ್ತು ಪೌಷ್ಠಿಕಾಂಶದ ಅಗತ್ಯಗಳನ್ನು ಸುಲಭ ಹಾಗೂ ಪಾರದರ್ಶಕವಾಗಿ ತಲುಪಿಸುವುದೇ ಸರ್ಕಾರದ ಈ ಹೊಸ ಬದಲಾವಣೆಯ ಮುಖ್ಯ ಗುರಿಯಾಗಿದೆ.

**ವಿಕೇಂದ್ರೀಕೃತ ಖರೀದಿ ವ್ಯವಸ್ಥೆಗೆ ಒಲವು**

ಇಡೀ ರಾಜ್ಯಕ್ಕೆ ಒಂದೇ ದೊಡ್ಡ ಟೆಂಡರ್ ನೀಡುವ ಬದಲು ಜಿಲ್ಲಾ ಮಟ್ಟದಲ್ಲೇ ಸರಕುಗಳನ್ನು ಖರೀದಿಸುವ ಮಾದರಿಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಈ ವಿಕೇಂದ್ರೀಕೃತ ಖರೀದಿ ವಿಧಾನದಿಂದ ಪೂರೈಕೆ ವ್ಯವಸ್ಥೆಯಲ್ಲಾಗುವ ಅಕ್ರಮ ಹಾಗೂ ಸರಕುಗಳ ಸೋರಿಕೆಗೆ ತಡೆ ಬೀಳಲಿದ್ದು, ಅಗತ್ಯ ವಸ್ತುಗಳು ಅರ್ಹರಿಗೆ ನೇರವಾಗಿ ತಲುಪಲು ನೆರವಾಗಲಿದೆ ಎಂದು ರಾಜ್ಯ ಖಾತರಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಅಭಿಪ್ರಾಯಪಟ್ಟಿದ್ದಾರೆ.

**ಇ-ವೋಚರ್ ತಂತ್ರಜ್ಞಾನದ ಚರ್ಚೆ**

ಸರಕು ಸಂಗ್ರಹಣೆ, ಗುಣಮಟ್ಟ ಪರೀಕ್ಷೆ, ಪ್ಯಾಕಿಂಗ್ ಹಾಗೂ ಗೋದಾಮುಗಳಿಂದ ವಿತರಿಸುವ ಬೃಹತ್ ಪ್ರಕ್ರಿಯೆಯನ್ನು ಸುಲಭಗೊಳಿಸಲು 'ಇ–ವೋಚರ್' ವ್ಯವಸ್ಥೆಯನ್ನು ಪರಿಚಯಿಸುವ ಕುರಿತಾಗಿಯೂ ಸುದೀರ್ಘ ಚರ್ಚೆಗಳು ನಡೆದಿವೆ. ಈ ಮಾದರಿ ಜಾರಿಯಾದರೆ ಫಲಾನುಭವಿಗಳೇ ನೇರವಾಗಿ ತಮಗೆ ಬೇಕಾದ ನಿಗದಿತ ಸಾಮಗ್ರಿಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ಈ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಅಳವಡಿಕೆ ಕುರಿತು ಸರ್ಕಾರವಿನ್ನೂ ಅಂತಿಮ ತೀರ್ಮಾನ ಪ್ರಕಟಿಸಿಲ್ಲ.

# ಕೊಡವ ಸಂಸ್ಕೃತಿ, ಕೊಡಗಿನ ವೈಶಿಷ್ಟ್ಯವನ್ನು ಹಾಡಿ ಹೊಗಳಿದ ರೇಣುಕುಮಾರ್

**ನವದೆಹಲಿ, ಸೆ.21:** ದೆಹಲಿ ಕರ್ನಾಟಕ ಸಂಘವು ದಿನಾಂಕ 20.09.2026 ರಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕೊಡವ ಸಮಾಜ, ನವದೆಹಲಿ ಸಹಯೋಗದಲ್ಲಿ ಕೊಡವ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೊಡವ ಸಾಹಿತ್ಯ ಅಕಾಡೆಮಿ ಮತ್ತು ದೆಹಲಿ ಕೊಡವ ಸಮಾಜದ ಸಾಂಪ್ರದಾಯಿಕ ಉಡುಗೆಯಲ್ಲಿದ್ದ ಕೊಡವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಆರ್. ಮತ್ತು ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ಉಪಾಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ, ಜಂಟಿ ಕಾರ್ಯದರ್ಶಿ ಅಶ್ವಿನಿ ಬಿ.ಎಸ್. ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶಿವಪ್ಪ ಎಂ. ಅವರನ್ನು ಸಾಂಪ್ರದಾಯಿಕ ವಾದ್ಯ ಮತ್ತು ಹಾಡಿನ ಮೂಲಕ ಸಂಘದ ಮುಖ್ಯ ದ್ವಾರದಿಂದ ವೇದಿಕೆಗೆ ಬರಮಾಡಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ರೇಣುಕುಮಾರ್ ಮಾತನಾಡಿ, ಇದು ಒಂದು ವಿಶೇಷ ಕಾರ್ಯಕ್ರಮ. ತಾಯಿ ಕಾವೇರಿಯನ್ನು ಪೂಜಿಸುವ ನಿಮ್ಮಂತಹ ಮನಸ್ಸುಗಳಿಗೆ ನಮಸ್ಕಾರ, ಜೈ ಕಾವೇರಿ ಮಾತೇ, ಜೈ ಕರ್ನಾಟಕ ಎಂದರು.

ತಿಳಿವದವರ ಹತ್ತಿರ ಮಾತನಾಡೋದು, ಅವರಿಂದ ತಿಳಿದುಕೊಳ್ಳುವುದು ನನ್ನ ಅಭ್ಯಾಸ. ಒಮ್ಮೆ ಒಬ್ಬರು ನನ್ನ ಹತ್ತಿರ ಬಂದು ಯಾವುದೋ ಲೈಬ್ರೆರಿಗೆ ಸಂಪರ್ಕ ಬೇಕೆಂದು ಕೇಳಿದರು. ಹೀಗೆ ಅವರ ಬಳಿ 2 ಗಂಟೆ ಮಾತನಾಡುವ ಸಂದರ್ಭದಲ್ಲಿ ಕರ್ನಾಟಕದ ವೀರಶೈವ ಪರಂಪರೆ ಲಿಂಗಾಯತ ಧರ್ಮದ ಬಗ್ಗೆ ನಾಲ್ಕು ಪಿಎಚ್‌ಡಿ ಮಾಡಿದ್ದ ಅವರು ಮಾತುಗಳನ್ನು ಮೌನವಾಗಿ ಪರಿವರ್ತಿಸಿದರು. ಕೊನೆಗೆ ಅವರು ಭಾರತ ದೇಶವೇ ಒಂದು ಬುಡಕಟ್ಟು ದೇಶ, ಭಾರತದಲ್ಲಿರುವವರು ಈಗ ಜಾತಿ, ಧರ್ಮ ಎಂದು ಮಾಡಿಕೊಂಡರೂ ಸಹ ಅವರ ಮೂಲಗಳನ್ನು ಹುಡುಕುತ್ತಾ ಹೋದರೆ ನಾವೆಲ್ಲರೂ ಬುಡಕಟ್ಟು ಜನಾಂಗದವರೇ ಎಂದು ತಿಳಿಸಿದರು. ಈಗ ನಿಮ್ಮೆಲ್ಲರನ್ನು, ನಿಮ್ಮ ಬಣ್ಣ ಬಣ್ಣದ ಉಡುಗೆ ತೊಡುಗೆಗಳು, ವೈಶಿಷ್ಟತೆ ನಿಮ್ಮನ್ನು ನೋಡುವವರ ಮನಸ್ಸನ್ನು ಗೆಲ್ಲುವ ಶಕ್ತಿ ಇರುವಂತಹ ಒಂದು ಉತ್ಸಾಹಭರಿತವಾದಂತಹ ಪದ್ಧತಿ ನೋಡಿ ಖುಷಿ ತಂದಿದೆ ಎಂದರು. ಕಾವೇರಿ ಅಂದ ತಕ್ಷಣ ಕಣ್ಣಿಗೆ ಬರುವುದು ಹಸಿರು, ಸಮೃದ್ಧತೆ, ಸಹನಶೀಲತೆ ಹಾಗಾಗಿ ಅಂತಹ ಕಾವೇರಿ ತಾಯಿಯ ಮಡಿನಲ್ಲಿ ಬಾಳುತ್ತಾ ಇರುವವರು ನಿಜವಾಗಿಯೂ ವಿಶೇಷರಾಗಿದ್ದೀರಿ ಎಂದು ಮನದುಂಬಿ ನುಡಿದರು.

**ದೇಶಕ್ಕೆ ಕೊಡವರ ಕೊಡುಗೆ ಅಪಾರ**

**ದೇಶದ ಜನಸಂಖ್ಯೆಗೆ ಹೋಲಿಸಿದರೆ ಕೊಡವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಆದರೆ, ನಿಮ್ಮ ಸಾಧನೆ ಅಪಾರ. ಜನರಲ್ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರಿಂದ ಆರಂಭಿಸಿ ಇಂದಿನವರೆಗಿನ ಸಾಧಕರ ಪಯಣವನ್ನು ನೋಡಿದರೆ, ದೇಶದ ರಕ್ಷಣಾ ಕ್ಷೇತ್ರ, ಕ್ರೀಡೆ, ಆಡಳಿತ, ಸಾಹಿತ್ಯ, ಕಲೆ ಸೇರಿದಂತೆ ಹಲವು ಕ್ಷೇತ್ರಗಳಿಗೆ ಕೊಡಗು ನೀಡಿರುವ ಕೊಡುಗೆಯ ಮಹತ್ವ ಅರಿವಾಗುತ್ತದೆ. ಸಂಖ್ಯೆಯಲ್ಲಿ ಚಿಕ್ಕ ಸಮುದಾಯವಾದರೂ, ದೇಶದ ಇತಿಹಾಸ ಮತ್ತು ವರ್ತಮಾನದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಕೊಡವರ ಸಾಧನೆ ನಿಜಕ್ಕೂ ಸ್ಮರಣೀಯ ಎಂದು ರೇಣುಕುಮಾರ್ ಬಣ್ಣಿಸಿದರು.**

ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಮಾತನಾಡಿ, ಹಿರಿಯರು ಕಟ್ಟಿದ ಅಯ್ಯನ ಮನೆ (ನೆಲೆ) ಅಂದರೆ ಊರಿನ ಕುಟುಂಬಸ್ಥರು ಹಬ್ಬ ಹರಿದಿನಗಳಲ್ಲಿ ಸೇರಿ ಕುಣಿದು ಆಚರಿಸುವ ಸ್ಥಳ. ಬಹು ಪರಂಪರೆಯ ಜನಗಳು ಸೇರಲು ಇಂತಹ ಭವ್ಯ ಕಟ್ಟಡವನ್ನು ಸ್ಥಾಪಿಸಿದ ಹಿರಿಯರನ್ನು ಹರಸಿ ಈಗಿನ ಅಧ್ಯಕ್ಷ ರೇಣುಕುಮಾರ್ ಆರ್. ಮತ್ತು ಕಾರ್ಯಕಾರಿ ಸಮಿತಿಯನ್ನು ಶ್ಲಾಘಿಸಿದರು.




ದೇಶ ಮತ್ತು ನಾಡಿನ ರಕ್ಷಣೆಗೆ ಕೊಡವರು ಸಲ್ಲಿಸಿರುವ ಹೋರಾಟ, ತ್ಯಾಗ ಮತ್ತು ಸೇವೆ ಸ್ಮರಣೀಯ. ಭಾರತೀಯ ಸೇನೆಯ ಹೆಮ್ಮೆಯ ವೀರರಾದ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಹಾಗೂ ಜನರಲ್ ಕೆ. ಎಸ್. ತಿಮ್ಮಯ್ಯ ಅವರಂತಹ ಮಹಾನ್ ಸೇನಾನಿಗಳನ್ನು ದೇಶಕ್ಕೆ ನೀಡಿದ ಹೆಗ್ಗಳಿಕೆ ಕೊಡಗಿನದು ಎಂದು ಸ್ಮರಿಸಿದರು.

ಈ ಶ್ರೀಮಂತ ಪರಂಪರೆಯನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿಯೂ ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ದೆಹಲಿ ಕೊಡವ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ದೆಹಲಿ ಕೊಡವ ಸಮಾಜದ ಅಧ್ಯಕ್ಷರಾದ ಕಾರಿಯಪ್ಪನವರು ದೆಹಲಿಯಲ್ಲಿ ರಾಯಭಾರಿಯಾಗಿ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಎಂ.ಸಿ. ನಾಣಯ್ಯ ಕೊಡವ ಅಕಾಡೆಮಿ ಸ್ಥಾಪಿಸಲು ಕಾರಣಕರ್ತರು. ಇಂದು ಸುಮಾರು 14 ಅಕಾಡೆಮಿಗಳು ಕರ್ನಾಟಕದಲ್ಲಿವೆ ಎಂದರು.

ಕೊಡವ ಸಮಾಜ ನವದೆಹಲಿ ಅಧ್ಯಕ್ಷ ಮಾಚಿಮಂಡ ಎ. ಕಾರ್ಯಪ್ಪ ಮಾತನಾಡಿ, ಭಾರತ ದೇಶವೇ ಬುಡಕಟ್ಟು ದೇಶ. ಕಾವೇರಿ ಎಂದರೆ ಕಣ್ಣಿಗೆ ಬರೋದು ಹಸಿರು, ಸಮೃದ್ಧಿ ಮತ್ತು ಸಂಸ್ಕೃತಿ. ಆಧುನಿಕ ವೇಗದಲ್ಲಿ ಕೊಚ್ಚಿ ಹೋಗುತ್ತಿರುವ ಸಂದರ್ಭದಲ್ಲಿ ನೀವೂ ನಿಮ್ಮ ಸಂಸ್ಕೃತಿ ಮತ್ತು ಸಂಪ್ರದಾಯ ಬದ್ಧವಾಗಿ ಬದುಕುತ್ತಿರುವುದೇ ನಿಮ್ಮ ಶ್ರೀಮಂತಿಕೆ. ದೂರದೃಷ್ಟಿಕೋನ ಭಾರತವನ್ನು ಒಗ್ಗೂಡಿಸುವ ಉದ್ದೇಶ ಎಂದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ, ಕೊಡವ ಸಮಾಜ ನವದೆಹಲಿಯ ಅಧ್ಯಕ್ಷರಾದ ಮಾಚಿಮಂಡ ಎ. ಕಾರ್ಯಪ್ಪ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ರೇಣುಕುಮಾರ್ ಆರ್., ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡೀನಾ ಬೋಜಣ್ಣ ವಾಯಂಡಿರ ಶಿವಾಜಿ ಅವರು ಪ್ರಾರ್ಥನಾ ಗೀತೆ ಹಾಡಿದರು.

**ಕೊಡವ ಭಾಷೆಗೂ ಮಾನ್ಯತೆ ಕೊಡಿಸಲು ರೇಣುಕುಮಾರ್ ಹೆಜ್ಜೆ ಇಡಬೇಕು**

ತನ್ನದೇ ಆದ ವೈವಿಧ್ಯಮಯ ಭಾಷೆ, ಉಡುಗೆ–ತೊಡುಗೆ ಹೊಂದಿರುವಂತಹ ಅನನ್ಯ ಸಂಸ್ಕೃತಿ ಕೊಡವರದ್ದು ಎಂದ ಅವರು ತುಳುವಿಗೆ ರಾಜ್ಯದ ಎರಡನೇ ಆಡಳಿತ ಭಾಷೆ ಘೋಷಿಸಿದ ಸಂದರ್ಭದಲ್ಲಿ ಅಭಿನಂದಿಸಿದರು. ಕೊಡವ ಭಾಷೆಗೂ ಒಂದು ಮಾನ್ಯತೆ ತಂದುಕೊಡುವಲ್ಲಿ ರೇಣುಕುಮಾರ್ ಅವರು ಒಂದು ಹೆಜ್ಜೆ ಇಡಬೇಕು ಎಂದು ಮನವಿ ಮಾಡಿದರು. ನಮ್ಮ ಯುವ ಜನಾಂಗ ವಿದೇಶದಲ್ಲಿದ್ದಾರೆ ಅವರಿಗಾಗಿ ವಿದೇಶದಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜನೆ ಮಾಡುವ ಅಭಿಲಾಷೆಯನ್ನು ಹೊಂದಿರುವ ಬಗ್ಗೆ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದಿಂದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರನ್ನು, ದೆಹಲಿ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶಿವಪ್ಪ ಎಂ. ಅವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಜಂಟಿ ಕಾರ್ಯದರ್ಶಿ ಅಶ್ವಿನಿ ಬಿ.ಎಸ್. ಅವರು ನಿರೂಪಿಸಿದರು. ತದನಂತರ ದುಡಿಕೊಟ್ಟ್ ಪಾಟ್, ಉಮ್ಮತ್ತಾಟ್, ಬೊಳಕಾಟ್, ಗೆಜ್ಜೆ ತಂಡ್, ಮತ್ತು ಕೊಡವ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕನ್ನಡಿಗರ ಮನಸೂರೆಗೊಂಡಿತು.

# ಕಸ್ತೂರಿರಂಗನ್ ವರದಿ: ಎಲ್ಲರ ಅಭಿಪ್ರಾಯ ಕೇಳುವುದು ನನ್ನ ಉದ್ದೇಶ: ಸಿಎಂ ಡಿಕೆಶಿ

**ಬೆಂಗಳೂರು, ಸೆ.21:** ರಾಜ್ಯದ ರೈತರ ಕಷ್ಟ-ನೋವುಗಳನ್ನು ಆಲಿಸಲು ಹಾಗೂ ವಿವಾದಾತ್ಮಕ ಕಸ್ತೂರಿರಂಗನ್ ವರದಿ ಮತ್ತು ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರಗಾಲದ ಪರಿಸ್ಥಿತಿಯ ಕುರಿತು ವಿಸ್ತೃತವಾಗಿ ಚರ್ಚಿಸಲು ನಮ್ಮ ಸರ್ಕಾರ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಕಸ್ತೂರಿರಂಗನ್ ವರದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ತನ್ನ ಅಂತಿಮ ಅಭಿಪ್ರಾಯವನ್ನು ಈ ತಿಂಗಳ 27 ರೊಳಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಕಸ್ತೂರಿರಂಗನ್ ವರದಿ ವಿಚಾರದಲ್ಲಿ ವೈಯಕ್ತಿಕವಾಗಿ ನಿರ್ಧಾರ ತೆಗೆದುಕೊಂಡು ಕೇಂದ್ರಕ್ಕೆ ಅಭಿಪ್ರಾಯವನ್ನು ಕಳುಹಿಸಿಕೊಡಬಹುದಿತ್ತು. ಆದರೆ, ಈ ವಿಷಯದಲ್ಲಿ ಪ್ರಜಾಪ್ರಭುತ್ವದ ಆಶಯದಂತೆ ಸಮಗ್ರ ಚರ್ಚೆಯಾಗಬೇಕು ಎಂಬುದೇ ನನ್ನ ಉದ್ದೇಶವಾಗಿದೆ. ಎಲ್ಲ ಶಾಸಕರು ಹಾಗೂ ನಾಯಕರು ಈ ವರದಿಯ ಸಾಧಕ-ಬಾಧಕಗಳ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ವಿಶೇಷ ಅಧಿವೇಶನಕ್ಕೂ ಮುನ್ನ ಬರ ಪೀಡಿತ ಅನೇಕ ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸ ನಡೆಸಿದ್ದೇನೆ. ಬೆಳಗಾವಿಗೆ ತೆರಳಿ ನಾಲ್ಕೂ ಕಂದಾಯ ವಿಭಾಗಗಳ ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ್ದೇನೆ. ತೀವ್ರ ಬರಗಾಲದಿಂದ ಕಂಗೆಟ್ಟಿರುವ ಜನರಿಗೆ ಹಾಗೂ ರೈತರಿಗೆ ನಮ್ಮ ಸರ್ಕಾರದಿಂದ ತಕ್ಷಣಕ್ಕೆ ಏನೆಲ್ಲಾ ನೆರವು ನೀಡಬೇಕು ಎಂಬ ಬಗ್ಗೆಯೂ ಈಗಾಗಲೇ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

ಮಳೆಯ ಅಭಾವ ತೀವ್ರವಾಗಿರುವುದರಿಂದ ಪರಿಸ್ಥಿತಿ ಅವಲೋಕಿಸಿ, ಹೆಚ್ಚುವರಿಯಾಗಿ ಸುಮಾರು 100 ತಾಲೂಕುಗಳನ್ನು 'ಬರಪೀಡಿತ' ಎಂದು ಘೋಷಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ತಿಳಿಸಿದರು.

# ಮುಂಗಾರು ಅಧಿವೇಶನವೇ ಮುಕ್ತಾಯಗೊಂಡಿಲ್ಲ, ವಿಶೇಷ ಅಧಿವೇಶನ ಹೇಗೆ ಕರೆಯುತ್ತೀರಿ: ಅಶೋಕ್ ಪ್ರಶ್ನೆ

## ಸಂಸದೀಯ ವ್ಯವಹಾರ ಸಚಿವ ಕೃಷ್ಣ ಬೈರೇಗೌಡ ಮನವಿ ನಂತರ ತೃಪ್ತರಾದ ಪ್ರತಿಪಕ್ಷ ಸದಸ್ಯರು

**ಬೆಂಗಳೂರು, ಸೆ.21:** ರಾಜ್ಯಪಾಲರು ಮುಂಗಾರು ಅಧಿವೇಶನವನ್ನು ಮುಕ್ತಾಯಗೊಳಿಸದಿರುವಾಗ ವಿಶೇಷ ಅಧಿವೇಶನ ಎಂದು ಹೇಗೆ ಕರೆಯುತ್ತೀರಿ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಅಶೋಕ್ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ನೀನು ಹೇಗಾದರೂ ಕರೆಯಪ್ಪಾ ಎಂದು ಪ್ರತಿಕ್ರಿಯಿಸಿದರು.

ಪ್ರತಿಪಕ್ಷಗಳ ಪ್ರತಿಭಟನೆಯ ಕಾರಣ ಮುಂಗಾರು ಅಧಿವೇಶನ ಅವಧಿಪೂರ್ವ ಮುಕ್ತಾಯವಾಗಿತ್ತು. ಇಂದು ಮತ್ತೆ ಅಧಿವೇಶನ ಆರಂಭವಾಗುತ್ತಿದ್ದಂತೆಯೇ ಮಾತನಾಡಿದ ಅಶೋಕ್, ವಿಶೇಷ ಅಧಿವೇಶನ ಎಂದು ಮುದ್ರಿಸಿರುವುದಾದರೆ, ತಪ್ಪು ಮುದ್ರಣ ಮಾಡಿಸಿದವರಿಗೆ ಛೀಮಾರಿ ಹಾಕಿ ಎಂದು ಸಿಎಂಗೆ ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಡಿ.ಕೆ. ಶಿವಕುಮಾರ್, ವಿಶೇಷ ಅಧಿವೇಶನ ಕರೆದಿರುವುದಕ್ಕೆ ಕ್ರೆಡಿಟ್ ನಮಗೆ ಬರುತ್ತದೆ ಎಂದು ಬಿಜೆಪಿಯವರಿಗೆ ತಡೆದುಕೊಳ್ಳಲು ಆಗುತ್ತಿಲ್ಲ ಎನ್ನುತ್ತಿದ್ದಂತೆ,

ಮಧ್ಯಪ್ರವೇಶಿಸಿದ ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ, ಇಲ್ಲಿ ಯಾರಿಗೂ ಪ್ರತಿಷ್ಠೆ ಬೇಡ ಎಂದರು.

ವಿಶೇಷ ಅಧಿವೇಶನವೋ ಅಥವಾ ಮುಂದುವರಿದ ಅಧಿವೇಶನವೋ ಎಂಬುದನ್ನು ಸ್ಪಷ್ಟಪಡಿಸುವಂತೆ ಸ್ಪೀಕರ್ ಅವರನ್ನು ಅಶೋಕ್ ಒತ್ತಾಯಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣ ಬೈರೇಗೌಡ, ಇದು 10ನೇ ಅಧಿವೇಶನದ ಮುಂದುವರಿದ ಉಪವೇಶನ ಎಂದು ಹೇಳಿದರು. ವಿಶೇಷ ಅಧಿವೇಶನ ಎಂದು ಮುದ್ರಿಸಿರುವುದು ತಮ್ಮದೇ ತಪ್ಪು. ಅದನ್ನು ವಿಶೇಷ ಚರ್ಚೆ ಎಂದು ತಿದ್ದಿಕೊಂಡು ಮುಂದಕ್ಕೆ ಹೋಗೋಣ ಎಂದು ಮನವಿ ಮಾಡಿದರು. ಸರ್ಕಾರದ ಉತ್ತರಕ್ಕೆ ವಿರೋಧ ಪಕ್ಷದ ಶಾಸಕರು ತೃಪ್ತಿ



ವ್ಯಕ್ತಪಡಿಸಿದರು.

ಕಸ್ತೂರಿರಂಗನ್ ವರದಿಯಿಂದ ಉಂಟಾಗಿರುವ ಸಮಸ್ಯೆಯನ್ನು ಕಣ್ಣಾರೆ ಕಂಡಿದ್ದೇನೆ. ಏನು ಮಾಡಬೇಕು ಎಂಬುದರ ಕುರಿತು ಚರ್ಚೆ ನಡೆಸಲು ವಿಪಕ್ಷಗಳಿಗೆ ಅವಕಾಶ ನೀಡಿದ್ದೇವೆ. ಎಲ್ಲಾ ಕ್ಷೇತ್ರಗಳಿಗೂ ಭೇಟಿ ನೀಡಿದ್ದೇನೆ. ಜನರ ಭಾವನೆಯೊಂದಿಗೆ ಸದನಕ್ಕೆ ಬಂದಿದ್ದೇನೆ. ಇದು ನನ್ನ ಸರ್ಕಾರವಲ್ಲ, ಎಲ್ಲರ ಸರ್ಕಾರ. ನಿಲುವಳಿ ಸೂಚನೆ ಅಗತ್ಯವಿಲ್ಲ ಎಂದೂ ಡಿ.ಕೆ. ಶಿವಕುಮಾರ್ ಹೇಳಿದರು. ವಿಶೇಷ ಅಧಿವೇಶನವನ್ನು ಯಾಕೆ ಕರೆದಿದ್ದೀರಿ, ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಿದರೆ ಏನು ತಪ್ಪು, ತಪ್ಪು ಎಂದಾದರೆ ಹಿಂಪಡೆಯುತ್ತೇನೆ, ಹಠಕ್ಕೆ ಬೀಳುವುದಿಲ್ಲ ಎಂದು ಹೇಳಿದರು.

ಇದೇ ವೇಳೆ ಶಾಸಕ ಸುನೀಲ್ ಕುಮಾರ್ ಕೂಡ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಎಚ್.ಕೆ. ಪಾಟೀಲ್ ಪತ್ರ ಬರೆದು ನಿಮಗೆ ಮಂಗಳಾರತಿ ಹಾಕಿದ್ದಾರೆ ಎಂದರು. ಸ್ಪೀಕರ್ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಸುನೀಲ್ ಕುಮಾರ್, ನೀವು ದೆಹಲಿಗೆ ಹೋಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಅವರನ್ನು ಭೇಟಿ ಮಾಡುತ್ತೀರಿ ಎಂದು ಸದನದಲ್ಲಿ ಹೇಳಿದರು. ಈ ವೇಳೆ ಆಡಳಿತ ಹಾಗೂ ವಿಪಕ್ಷಗಳ ಶಾಸಕರ ನಡುವೆ ವಿಧಾನಸಭೆಯಲ್ಲಿ ತೀವ್ರ ವಾಕ್ಸಮರ ನಡೆಯಿತು.

# ಪರಿಸರ ಉಳಿಯಬೇಕು, ಜನರ ಬದುಕು ಉಳಿಯಬೇಕು: ಅರಣ್ಯ ಸಚಿವ ರಾಮಲಿಂಗಾರೆಡ್ಡಿ

**ಬೆಂಗಳೂರು,ಸೆ.21:** ಪಶ್ಚಿಮ ಘಟ್ಟಗಳ ಪರಿಸರವನ್ನು ಸಂರಕ್ಷಿಸುವುದರ ಜೊತೆಗೆ, ಅಲ್ಲಿನ ಜನರ ಬದುಕು, ಜೀವನೋಪಾಯ ಮತ್ತು ನ್ಯಾಯಸಮ್ಮತ ಅಭಿವೃದ್ಧಿಗೆ ರಕ್ಷಣೆ ಒದಗಿಸುವುದು ನಮ್ಮ ಸರ್ಕಾರದ ಕರ್ತವ್ಯವಾಗಿದೆ ಎಂದು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ರಾಮಲಿಂಗಾರೆಡ್ಡಿ ತಿಳಿಸಿದರು.

ಸೋಮವಾರ ವಿಧಾನಸಭೆಯಲ್ಲಿ ವಿಶೇಷ ಚರ್ಚೆಯಲ್ಲಿ ಕಸ್ತೂರಿರಂಗನ್ ನೇತೃತ್ವದ ವರದಿಗೆ 2013 ರಿಂದ ಈವರೆಗೆ ಎಲ್ಲಾ ಸರ್ಕಾರಗಳು ಪ್ರತಿರೋಧ ವ್ಯಕ್ತಪಡಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಪ್ರಸ್ತುತ ಸರ್ಕಾರವು ಈ ಬಗ್ಗೆ ವರದಿಗೆ ಪ್ರತಿರೋಧ ವ್ಯಕ್ತಪಡಿಸಿ ತನ್ನ ನಿಲುವನ್ನು ವ್ಯಕ್ತಪಡಿಸಿ, ಕರಡನ್ನು ಮರುಪರಿಶೀಲಿಸಬೇಕೆಂದು ಪತ್ರ ಬರೆಯಲಾಗಿದೆ ಎಂದು ವಿಧಾನಸಭೆಯಲ್ಲಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕರ್ನಾಟಕದ ಅಮೂಲ್ಯ ನೈಸರ್ಗಿಕ ಸಂಪತ್ತು, ನಮ್ಮ ಪ್ರಮುಖ ನದಿಗಳ ಉಗಮ ಸ್ಥಾನವಾಗಿರುವ ಈ ಪ್ರದೇಶವು ಜಲಮೂಲಗಳ ಸಂರಕ್ಷಣೆ, ಕೃಷಿ, ತೋಟಗಾರಿಕೆ, ಕುಡಿಯುವ ನೀರು, ಜೀವವೈವಿಧ್ಯ ಮತ್ತು ಗ್ರಾಮೀಣ ಜೀವನೋಪಾಯಕ್ಕೆ ಅತ್ಯಂತ ಮಹತ್ವದ್ದಾಗದೆ. ಕೇಂದ್ರ ಸರ್ಕಾರದ 27-7-2026ರ 7ನೇ ಕರಡು ಅಧಿಸೂಚನೆಯು ಪಶ್ಚಿಮಘಟ್ಟಗಳ ಪರಿಸರ ಮತ್ತು ಜೀವವೈವಿಧ್ಯದ ಮಹತ್ವವನ್ನು ದಾಖಲಿಸಿದೆ.

ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಸ್ತೂರಿರಂಗನ್ ಅಧ್ಯಕ್ಷತೆಯ ಉನ್ನತ ಕಾರ್ಯಪಡೆಯನ್ನು ರಚಿಸಿತ್ತು. ಈ ಕಾರ್ಯಪಡೆಯ ವರದಿಯು ಪಶ್ಚಿಮಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸುವುದು, ಪರಿಸರದ ಮೇಲೆ ಹೆಚ್ಚಿನ ಪರಿಣಾಮ ಬೀರುವ ಚಟುವಟಿಕೆಗಳನ್ನು ನಿಯಂತ್ರಿಸುವುದು ಹಾಗೂ ಪರಿಸರ ಸ್ನೇಹಿ ಅಭಿವೃದ್ಧಿಯನ್ನು ಉತ್ತೇಜಿಸುವ ಕುರಿತು ಶಿಫಾರಸ್ಸುಗಳನ್ನು ಮಾಡಿತ್ತು. ಈ ಶಿಫಾರಸ್ಸುಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳ ಮೇಲಿನ ನಿಯಂತ್ರಣಗಳ



ಜೊತೆಗೆ ಹಸಿರು ಬೆಳವಣಿಗೆ, ಕೇಂದ್ರದ ಆರ್ಥಿಕ ನೆರವು, ಪರಿಸರ ಸೇವೆಗಳಿಗೆ ಹಣಕಾಸು ಹಾಗೂ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆ ಮುಂತಾದ ಅಂಶಗಳು ಇದ್ದವು. ಆದರೆ ನಂತರದ ಕರಡು ಅಧಿಸೂಚನೆಗಳಲ್ಲಿ ನಿಯಂತ್ರಣ ಮತ್ತು ನಿಭರ್ಂಧದ ಅಂಶಗಳಿಗೆ ಹೆಚ್ಚಿನ ಒತ್ತು ದೊರೆತಿದೆ ಎಂದು ರಾಜ್ಯದ ಹಿಂದಿನ ಆಕ್ಷೇಪಣೆಗಳಲ್ಲಿ ವ್ಯಕ್ತಪಡಿಸಲಾಗಿದೆ. ಆದಾಗ್ಯೂ ಪ್ರಸ್ತುತ ಕೇಂದ್ರ ಸರ್ಕಾರದ 7ನೇ ಕರಡು ಅಧಿಸೂಚನೆ ಹೊರಡಿಸಿದೆ ಹಾಗೂ ಈ ತಿಂಗಳ ಅಂತ್ಯದ ಗಡುವು ನೀಡಿದೆ ಎಂದು ವಿವರಿಸಿದರು.

ಪ್ರಸ್ತುತ ಕರಡು ಪ್ರಸ್ತಾವನೆಯಲ್ಲಿ ಪಶ್ಚಿಮಘಟ್ಟ ವ್ಯಾಪ್ತಿಯ ಆರು ರಾಜ್ಯಗಳಲ್ಲಿ ಒಟ್ಟು 56,825.7 ಚದರ ಕಿಲೋಮೀಟರ್ ಪ್ರದೇಶವನ್ನು ಇಖಂ ಆಗಿ ಗುರುತಿಸಲು ಪ್ರಸ್ತಾಪಿಸಲಾಗಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಸುಮಾರುಯ 20,668 ಚದರ ಕಿಲೋಮೀಟರ್ ಪ್ರದೇಶವನ್ನು ಇಖಂ ವ್ಯಾಪ್ತಿಗೆ ತರಲು ಪ್ರಸ್ತಾಪಿಸಲಾಗಿದೆ. ರಾಜ್ಯದ 10 ಜಿಲ್ಲೆಗಳ 1,449 ಗ್ರಾಮಗಳು ಈ ಪ್ರಸ್ತಾವನೆಯಲ್ಲಿ ಸೇರಿವೆ. ಕರಡು ಅಧಿಸೂಚನೆಯಲ್ಲಿನ ಪ್ರದೇಶವು ರಾಜ್ಯದ ಶಿಫಾರಸ್ಸುಗಳು, ಹಿತಾಸಕ್ತಿದಾರರ ಅಭಿಪ್ರಾಯಗಳು ಮತ್ತು ಇಖಂ ತಜ್ಞ ಸಮಿತಿಯ ಪರಿಶೀಲನೆಯ ಆಧಾರದ ಮೇಲೆ ಅಂತಿಮಗೊಳ್ಳಲಿದೆ ಎಂದು ವಿವರಿಸಿ, ಸದರಿ ಅಧಿಸೂಚನೆಯು ಕರಡು ಹಂತದಲ್ಲಿದೆ. ಇದು ಅಂತಿಮ ಅಧಿಸೂಚನೆಯಲ್ಲ. ರಾಜ್ಯಸರ್ಕಾರಕ್ಕೆ ಆಕ್ಷೇಪಣೆಗಳು, ಸಲಹೆಗಳು ಮತ್ತು ಅಗತ್ಯವಿದ್ದಲ್ಲಿ ಪರ್ಯಾಯ ಗಡಿ ಪ್ರಸ್ತಾವನೆಗಳನ್ನು ಸಲ್ಲಿಸುವ ಅವಕಾಶವಿದೆ.

ಈ ನಿಟ್ಟಿನಲ್ಲಿ ಕರ್ನಾಟಕವು ಸಹ ಎಚ್ಚೆತ್ತುಕೊಂಡು ಪಶ್ಚಿಮಘಟ್ಟಗಳ ಸಮಸ್ಯೆಗೆ ತಾರ್ಕಿಕ ಕೊಡಲು ಪ್ರಯತ್ನ ಪಡಬೇಕಿದೆ. 2014 ರಿಂದ ಕೇಂದ್ರ ಸರ್ಕಾರ ಹೊರಡಿಸಿರುವ ವಿವಿಧ ಕರಡು ಅಧಿಸೂಚನೆಗಳ ಸಂದರ್ಭದಲ್ಲಿ ರಾಜ್ಯ ಸರ್ಕಾರ ತನ್ನ ಅಭಿಪ್ರಾಯ, ಆಕ್ಷೇಪಣೆ ಮತ್ತು ಸಲಹೆಗಳನ್ನು ನಿರಂತರವಾಗಿ ಸಲ್ಲಿಸುತ್ತಾ ಬಂದಿದೆ. ಈ ಕುರಿತು ರಾಜ್ಯ ಮಟ್ಟದ ತಜ್ಞ ಸಮಿತಿ, ಜಿಲ್ಲಾ ಮಟ್ಟದ ಸಮಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಪ್ರಸ್ತುತ ಜುಲೈ 27, 2026ರ 7ನೇ ಕರಡು ಅಧಿಸೂಚನೆ ಕುರಿತು 3-9-2026ರಂದು ರಾಜ್ಯ ಸಚಿವರ ಸಂಪುಟವು ಸಭೆ ಸೇರಿ ಕರಡು ಅಧಿಸೂಚನೆಯನ್ನು ಅದರ ಪ್ರಸ್ತುತ ರೂಪದಲ್ಲಿ ತಿರಸ್ಕರಿಸಲು ನಿರ್ಧರಿಸಿ, ಈ ಕರಡು ಅಧಿಸೂಚನೆಯನ್ನು ಮರು ಪರಿಶೀಲಿಸಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಸದನದಲ್ಲಿ ವಿವರಿಸಿದರು.

ಪಶ್ಚಿಮಘಟ್ಟಗಳ ಸಂರಕ್ಷಣೆಯೂ ಆಗಬೇಕು, ಪಶ್ಚಿಮ ಘಟ್ಟಗಳ ಜನರ ಹಕ್ಕು ಮತ್ತು ಜೀವನೋಪಾಯದ ರಕ್ಷಣೆಯೂ ಆಗಬೇಕು. ಈ ಎರಡನ್ನೂ ಸಮತೋಲನದಿಂದ ಸಾಧಿಸುವುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ. ಇದು ಯಾವುದೇ ಒಂದು ಪಕ್ಷದ ಅಥವಾ ಒಂದು ಪ್ರದೇಶದ ವಿಷಯವಲ್ಲ. ನಮ್ಮ ರಾಜ್ಯದ ಲಕ್ಷಾಂತರ ಜನರ ಭವಿಷ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಆದ್ದರಿಂದ ಸದನದ ಎಲ್ಲಾ ಸದಸ್ಯರು ಸರ್ಕಾರದೊಂದಿಗೆ ಸಹಕರಿಸಿ, ಡಾ: ಕಸ್ತೂರಿರಂಗನ್ ವರದಿ ಕರಡು ಪ್ರಸ್ತಾವನೆ ಕುರಿತು ಸುದೀರ್ಘವಾಗಿ ಚರ್ಚಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಬೇಕಂದು ಎಲ್ಲಾ ಸದಸ್ಯರನ್ನೂ ಸಚಿವ ರಾಮಲಿಂಗಾರೆಡ್ಡಿ ಕೋರಿದರು.

# ಕೆಪಿಎಸ್‌ಸಿ ಪಶುವೈದ್ಯಾಧಿಕಾರಿ ನೇಮಕಾತಿ ಹಗರಣ: ಎಸ್‌ಐಟಿ ರಚನೆಗೆ ಹೈಕೋರ್ಟ್ ಆದೇಶ

**ಬೆಂಗಳೂರು, ಸೆ.21:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ತನಿಖೆಗೆ ಎಸ್‌ಐಟಿ ರಚಿಸಲು ಹೈಕೋರ್ಟ್ ಆದೇಶ ನೀಡಿದೆ. ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚನೆ ಮಾಡಲು ರಾಜ್ಯ ಸರ್ಕಾರಕ್ಕೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಏಕಸದಸ್ಯ ಪೀಠವು ನಿರ್ದೇಶನ ನೀಡಿದೆ. ತಂಡದಲ್ಲಿ ಅನುಭವಿ ಅಧಿಕಾರಿಗಳಾದ ದಿವ್ಯಾ ಗೋಪಿನಾಥ್, ಅನೂಪ್ ಶೆಟ್ಟಿ, ಕುಶಾಲ್ ಚೌಕ್ಸೆ ಮತ್ತು ಶರ್ಮಾ ಮಿಶ್ರಾ ಸದಸ್ಯರಾಗಿರಲಿದ್ದಾರೆ.

ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೂ ಸೂಕ್ತ ಸಹಕಾರ ಹಾಗೂ ಮಾಹಿತಿ ನೀಡುವಂತೆ ಎಸ್‌ಐಟಿಗೆ ಹೈಕೋರ್ಟ್ ಸೂಚಿಸಿದೆ.100 ದಿನಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚನೆ ನೀಡಿದ್ದು, 30 ದಿನಗಳಿಗೆ ಒಮ್ಮೆ ತನಿಖಾ ಪ್ರಗತಿ ವರದಿ ಸಲ್ಲಿಸಲು ಹೈಕೋರ್ಟ್ ಸೂಚನೆ ನೀಡಿದೆ. ಸಿಐಡಿ ಸಂಪೂರ್ಣ ದಾಖಲೆಗಳನ್ನು ಎಸ್‌ಐಟಿ ವಶಕ್ಕೆ ನೀಡಬೇಕು. ತನಿಖೆ ನಡೆಸುತ್ತಿರುವ ಪೊಲೀಸರು ದಾಖಲೆ ಹಸ್ತಾಂತರಿಸಬೇಕು. ಒಂದು ವಾರದಲ್ಲಿ ದಾಖಲೆಗಳನ್ನು ಹಸ್ತಾಂತರಿಸಲು ಸೂಚಿಸಿದೆ. ಇನ್ನು ರಾಜ್ಯ ಸರ್ಕಾರ ಎಸ್‌ಐಟಿಗೆ ಪೊಲೀಸ್ ಠಾಣೆಯ ಸ್ಥಾನಮಾನ ನೀಡಬೇಕು. ತನಿಖೆಗೆ ಯಾವುದೇ ಅಡ್ಡಿ ಉಂಟುಮಾಡದಂತೆ ಹೈಕೋರ್ಟ್ ಸೂಚನೆ ನೀಡಿದೆ.

# ಮಾನವೀಯ ಮೌಲ್ಯಗಳೊಂದಿಗೆ ಎಐ ಅಳವಡಿಸಿಕೊಂಡಾಗಲೇ ವಿಕಸಿತ ಭಾರತದ ಕನಸು ನನಸು: ರಾಜ್ಯಪಾಲ

**ಬೆಂಗಳೂರು, ಸೆ.21:** ಕೃತಕ ಬುದ್ಧಿಮತ್ತೆಯಲ್ಲಿ ಪ್ರಾವೀಣ್ಯತೆ ಗಳಿಸುವುದರ ಜೊತೆಗೆ ಮಾನವೀಯ ಮೌಲ್ಯಗಳು, ನೈತಿಕತೆ ಹಾಗೂ ಸಾಮಾಜಿಕ ಜವಾಬ್ದಾರಿಯನ್ನೂ ಯುವಜನರು ಅಳವಡಿಸಿಕೊಂಡಾಗಲೇ ವಿಕಸಿತ ಭಾರತ ಗುರಿ ಸಾಕಾರಗೊಳ್ಳುತ್ತದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಹೇಳಿದರು.

ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ಆಯೋಜಿಸಲಾದ ಯೂನಿವರ್ಸಿಟಿ ಆಫ್ ಲಿವರ್‌ಪೂಲ್ ಬೆಂಗಳೂರು ಸ್ಥಾಪಕ ಬ್ಯಾಚ್ ಓರಿಯೆಂಟೇಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮೊದಲ ತಂಡದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು. ಭಾರತ ಮತ್ತು ಯುನೈಟೆಡ್ ಕಿಂಗ್ಡಮ್ ನಡುವಿನ ಶಿಕ್ಷಣ, ಸಂಶೋಧನೆ, ನಾವೀನ್ಯತೆ ಮತ್ತು ಜ್ಞಾನ ಕ್ಷೇತ್ರಗಳ ಸಹಯೋಗಕ್ಕೆ ಈ ಕಾರ್ಯಕ್ರಮವು ಹೊಸ ಅಧ್ಯಾಯದ ಆರಂಭವಾಗಿದೆ ಎಂದರು. 1881ರಲ್ಲಿ ಸ್ಥಾಪನೆಯಾದ ಯೂನಿವರ್ಸಿಟಿ ಆಫ್ ಲಿವರ್‌ಪೂಲ್ ಒಂದೂವರೆ ಶತಮಾನಕ್ಕೂ ಅಧಿಕ ಶೈಕ್ಷಣಿಕ ಶ್ರೇಷ್ಠತೆಯ ಪರಂಪರೆಯನ್ನು



ಹೊಂದಿದ್ದು, ಪ್ರತಿಷ್ಠಿತ ರಸೆಲ್ ಗ್ರೂಪ್ ಸದಸ್ಯತ್ವದ ಮೂಲಕ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಹೆಗ್ಗಳಿಕೆಯನ್ನು ಗಳಿಸಿದೆ. ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ಸ್ಥಾಪನೆಯಾಗಿರುವುದು ಭಾರತ-ಬ್ರಿಟನ್ ಶೈಕ್ಷಣಿಕ ಸಹಯೋಗವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ತಿಳಿಸಿದರು. ಬೆಂಗಳೂರು ಭಾರತದ ಸಿಲಿಕಾನ್ ವ್ಯಾಲಿಯಾಗಿದ್ದು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಏರೋಸ್ಪೇಸ್, ಫಿನ್ಟೆಕ್ ಮತ್ತು ಕೃತಕ ಬುದ್ಧಿಮತ್ತೆ ಸೇರಿದಂತೆ ಅನೇಕ ಉದಯೋನ್ಮುಖ ಕ್ಷೇತ್ರಗಳಲ್ಲಿ ಜಾಗತಿಕ ಗುರುತನ್ನು ಪಡೆದಿದೆ. ಇಂತಹ ನಗರದಲ್ಲಿ ಲಿವರ್‌ಪೂಲ್ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಸ್ಥಾಪನೆಯಾಗಿರುವುದು ಜ್ಞಾನ, ಸಂಶೋಧನೆ ಮತ್ತು ನಾವೀನ್ಯತೆಗೆ ಹೊಸ ವೇಗ ನೀಡಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಯಾವುದೇ ಸಂಸ್ಥೆಯ ಮೊದಲ ಬ್ಯಾಚ್ ಅದರ ಇತಿಹಾಸದಲ್ಲಿ ವಿಶೇಷ ಸ್ಥಾನವನ್ನು ಹೊಂದಿರುತ್ತದೆ. ವಿಶ್ವವಿದ್ಯಾಲಯದ ಸಂಸ್ಕೃತಿ, ಮೌಲ್ಯಗಳು ಮತ್ತು ಭವಿಷ್ಯದ ಬೆಳವಣಿಗೆಯನ್ನು ರೂಪಿಸುವಲ್ಲಿ ನಿಮ್ಮ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಣವು ಕೇವಲ ವೃತ್ತಿ ಆಧಾರಿತವಾಗಿರದೆ, ವ್ಯಕ್ತಿತ್ವ ನಿರ್ಮಾಣ ಹಾಗೂ ರಾಷ್ಟ್ರ ನಿರ್ಮಾಣದ ಸಾಧನವಾಗಬೇಕು ಎಂದು ರಾಜ್ಯಪಾಲರು ಹೇಳಿದರು. ಸ್ವಾಮಿ ವಿವೇಕಾನಂದರ ಆತ್ಮವಿಶ್ವಾಸ, ಉತ್ತಮ ಚಾರಿತ್ರ್ಯ ಮತ್ತು ರಾಷ್ಟ್ರಸೇವೆಯ ಸಂದೇಶ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆಯ ಚಿಂತನೆಗಳನ್ನು ಸ್ಮರಿಸಿದ ಅವರು, ಸಮಾಜದ ಸಮಸ್ಯೆಗಳನ್ನು ಅರಿತು ಜ್ಞಾನವನ್ನು ರಾಷ್ಟ್ರದ ಪ್ರಗತಿಗೆ ಬಳಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೆಂಗಳೂರು ವಿಶ್ವದರ್ಜೆಯ ತಂತ್ರಜ್ಞಾನ ಸಂಸ್ಥೆಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಕೇಂದ್ರಗಳ ತಾಣವಾಗಿದ್ದು, ವಿದ್ಯಾರ್ಥಿಗಳು ಪ್ರಯೋಗಾಲಯಗಳಿಂದ ಸಮಾಜದತ್ತ ಹೆಜ್ಜೆ ಹಾಕಿ, ಸಮಸ್ಯೆಗಳಿಗೆ ನವೀನ ಪರಿಹಾರಗಳನ್ನು ರೂಪಿಸಿ, ಉದ್ಯೋಗ ಹುಡುಕುವವರಾಗುವುದಕ್ಕಿಂತ ಉದ್ಯಮಶೀಲತಾ ಅವಕಾಶಗಳನ್ನು ಸೃಷ್ಟಿಸುವವರಾಗಬೇಕು ಎಂದು ಕರೆ ನೀಡಿದರು.ಜ್ಞಾನ, ಸಂಶೋಧನೆ, ನಾವೀನ್ಯತೆ, ಉದ್ಯಮಶೀಲತೆ ಮತ್ತು ಮಾನವೀಯ ಮೌಲ್ಯಗಳ ಕ್ಷೇತ್ರದಲ್ಲಿ ಈ ವಿಶ್ವವಿದ್ಯಾಲಯವು ಜಾಗತಿಕ ಶ್ರೇಷ್ಠತಾ ಕೇಂದ್ರವಾಗಿ ಹೊರಹೊಮ್ಮಲಿದ್ದು, ರಾಷ್ಟ್ರ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುವ ಜೊತೆಗೆ ಜಾಗತಿಕ ಜ್ಞಾನ ಕೇಂದ್ರವಾಗಿ ಬೆಂಗಳೂರಿನ ಗುರುತನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಯೂನಿವರ್ಸಿಟಿ ಆಫ್ ಲಿವರ್‌ಪೂಲ್ ಬೆಂಗಳೂರಿನ ಪ್ರೊವೋಸ್ಟ್ ಪ್ರೊಫೆಸರ್ ರಿಚರ್ಡ್ ಗ್ರೋಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಎಸ್. ಕುಮಾರ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ಕ್ವಾಂಟಮ್ ಭದ್ರತಾ ಕ್ಷೇತ್ರದಲ್ಲಿ ಜಾಗತಿಕ ಸಾಮರ್ಥ್ಯ ನಿರ್ಮಾಣಕ್ಕೆ ಬೆಂಗಳೂರು ಪೂರಕ: ಪ್ರಿಯಾಂಕ್ ಖರ್ಗೆ



**ಬೆಂಗಳೂರು, ಸೆ.21:** ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ಜಾಗತಿಕ ಮಟ್ಟದ ಸಾಮರ್ಥ್ಯಗಳನ್ನು ನಿರ್ಮಿಸುವತ್ತ ಮುನ್ನಡೆಯುತ್ತಿದ್ದು, ಪ್ರತಿಭೆ, ಸಂಶೋಧನೆ, ನವೋದ್ಯಮಗಳು ಹಾಗೂ ಸುರಕ್ಷಿತ ಡಿಜಿಟಲ್ ಮೂಲಸೌಕರ್ಯ ಸೇರಿದಂತೆ ಕ್ವಾಂಟಮ್ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಬೆಂಗಳೂರು ಅತ್ಯುತ್ತಮ ಪರಿಸರ ವ್ಯವಸ್ಥೆ ಹೊಂದಿದೆ ಎಂದು ಗೃಹ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಕ್ವಾಂಟಮ್ ಭದ್ರತಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಯೂಎನ್‌ಯು ಲ್ಯಾಬ್ಸ್ ನ 10ನೇ ವಾರ್ಷಿಕೋತ್ಸವ ಹಾಗೂ ನೂತನ ಉತ್ಪನ್ನ ಕ್ಯೂಶೀಲ್ಡ್ 2.0 ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಸ್ಥೆಯ ಮುಂದಿನ ಹಂತದ ಬೆಳವಣಿಗೆ ಹಾಗೂ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಅದರ ಸಾಧನೆಯನ್ನು ಶ್ಲಾಘಿಸಿದರು. ಭಾರತದ ಮೊದಲ ಹಾಗೂ ಏಕೈಕ ಕ್ವಾಂಟಮ್ ಕ್ರಿಪ್ಟೋಗ್ರಫಿ ಮತ್ತು ಕ್ವಾಂಟಮ್-ಸೇಫ್ ಸೈಬರ್‌ಸುರಕ್ಷತಾ ಸಂಸ್ಥೆಯಾಗಿ ಕ್ಯೂಎನ್‌ಯು ಲ್ಯಾಬ್ಸ್ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಒಂದು ದಶಕದಲ್ಲಿ ಕ್ವಾಂಟಮ್ ಭದ್ರತಾ ಕ್ಷೇತ್ರದಲ್ಲಿ ಜಾಗತಿಕವಾಗಿ ಗುರುತಿಸಿಕೊಂಡಿರುವ ಸಂಸ್ಥೆಯಾಗಿ ಬೆಳೆದಿದೆ ಎಂದು ತಿಳಿಸಿದರು.


### ಕ್ಯೂಶೀಲ್ಡ್ 2.0 ಬಿಡುಗಡೆ

ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಮುಂದಿನ ತಲೆಮಾರಿನ ವೇದಿಕೆಯಾದ ಕ್ಯೂಶೀಲ್ಡ್ 2.0 ಅನ್ನು ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಕ್ವಾಂಟಮ್ ಭದ್ರತೆಯನ್ನು ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ಪದರದೊಂದಿಗೆ ಸಂಯೋಜಿಸುವ ಉದ್ದೇಶದಿಂದ ಕ್ಯೂಶೀಲ್ಡ್ 2.0 ಅನ್ನು ರೂಪಿಸಲಾಗಿದ್ದು, ಹೆಚ್ಚುತ್ತಿರುವ ಸೈಬರ್ ದಾಳಿಗಳು ಹಾಗೂ ಭವಿಷ್ಯದಲ್ಲಿ ಎದುರಾಗಬಹುದಾದ ಎನ್‌ಕ್ರಿಪ್ಶನ್ ಸವಾಲುಗಳನ್ನು ಎದುರಿಸಲು ಇದು ನೆರವಾಗುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು.

ಕ್ವಾಂಟಮ್ ತಂತ್ರಜ್ಞಾನವು ಮುಂದಿನ ದಿನಗಳಲ್ಲಿ ಸೈಬರ್ ಸುರಕ್ಷತೆ, ದತ್ತಾಂಶ ರಕ್ಷಣೆ ಹಾಗೂ ಸುರಕ್ಷಿತ ಡಿಜಿಟಲ್ ಮೂಲಸೌಕರ್ಯದ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಈ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ನವೋದ್ಯಮಗಳಿಗೆ ಮತ್ತಷ್ಟು ಉತ್ತೇಜನ ನೀಡುವ ಮೂಲಕ ಕರ್ನಾಟಕವನ್ನು ಜಾಗತಿಕ ಕ್ವಾಂಟಮ್ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಪ್ರಮುಖ ಕೇಂದ್ರವನ್ನಾಗಿ ಬೆಳೆಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಪ್ರಯತ್ನಗಳು ಮುಂದುವರಿಯಲಿವೆ ಎಂದು ಸಚಿವರು ತಿಳಿಸಿದರು.

# ಮುಖ್ಯಮಂತ್ರಿ ಚಂದ್ರು ಅಭಿನಯಕ್ಕೆ ಸುವರ್ಣ ಸಂಭ್ರಮ ಸೆ.24ರಿಂದ ಹಲವು ರಂಗ ಚಟುವಟಿಕೆಗಳ ಆಯೋಜನೆ

**ಬೆಂಗಳೂರು,ಸೆ.21:** ಕನ್ನಡ ರಂಗಭೂಮಿಯಲ್ಲಿ ನಾಲ್ಕೂವರೆ ದಶಕಗಳಿಗೂ ಹೆಚ್ಚು ಕಾಲ ಪ್ರೇಕ್ಷಕರನ್ನು ರಂಜಿಸುತ್ತ ಬಂದಿರುವ ಮುಖ್ಯಮಂತ್ರಿ ಚಂದ್ರು ಅಭಿನಯದ "ಮುಖ್ಯಮಂತ್ರಿ" ನಾಟಕ ಇದೀಗ 900ನೇ ಪ್ರದರ್ಶನದ ಸಂಭ್ರಮದಲ್ಲಿದೆ. ಸೆ.26ರಂದು ಸಂಜೆ 4.30ರಿಂದ 6.30ರವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ 900ನೇ ವಿಶೇಷ ಪ್ರದರ್ಶನವು ಈ ಐತಿಹಾಸಿಕ ರಂಗಪಯಣದ ಮಹತ್ವದ



ಮೈಲುಗಲ್ಲಾಗಲಿದೆ. ಈ ಹಿನ್ನೆಲೆಯಲ್ಲಿ ಸೆ.24 ರಿಂದ 26 ರ ವರೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮೂರು ದಿನಗಳ "ಸಂಭ್ರಮೋತ್ಸವ" ಆಯೋಜಿಸಲಾಗಿದೆ.

1980 ರ ಡಿಸೆಂಬರ್ ನಲ್ಲಿ ನಾಟಕ ಮೊದಲ ಪ್ರದರ್ಶನ ಕಂಡಿತು. 46 ವರ್ಷಗಳಿಂದ ಮುಖ್ಯಮಂತ್ರಿ ಚಂದ್ರು ಅವರು ನಾಟಕದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ಅವರದ್ದು ಅಪರೂಪದ ದಾಖಲೆಯಾಗಿದೆ. ರಂಜಿತ್ ಕಪೂರ್ ಅವರ ಹಿಂದಿಯ ಮುಖ್ಯಮಂತ್ರಿ ನಾಟಕವನ್ನು ಕನ್ನಡಕ್ಕೆ ಅಳವಡಿಸುವ ಆಲೋಚನೆ ಅಂದಿನ ಯುವ ನಿರ್ದೇಶಕರಾದ ರಾಜಾರಾಂ ಮತ್ತು ಚಂದ್ರು ಅವರಿಗೆ ಬಂತು. ಅದು ಭಾಷಾತೀತ ಮತ್ತು ಕಾಲಾತೀತ ಆದ ರಾಜಕೀಯ ವಸ್ತು ಉಳ್ಳದ್ದು. ಬಹಳ ತೀಕ್ಷ್ಣ ವಸ್ತುವನ್ನು ಒಳಗೊಂಡಿದ್ದರಿಂದ, ಕಲಾಗಂಗೋತ್ರಿಯಿಂದ ಈ ಪ್ರಯೋಗ ಮಾಡಲೇಬೇಕೆಂಬ ತುಡಿತ ಇವರಲ್ಲಿ ಉಂಟಾಯಿತು. ಪ್ರಾಧ್ಯಾಪಕರಾಗಿದ್ದ ಟಿ. ಎಸ್. ಲೋಹಿತಾಶ್ವ ಕನ್ನಡಕ್ಕೆ ನಾಟಕ ಅನುವಾದಿಸಿದರು. ಅನೇಕ ಅಡ್ಡಿ ಆತಂಕಗಳನ್ನು ಎದುರಿಸಿ, ಹಲವಾರು ಬದಲಾವಣೆಗಳ ನಂತರ ಈ ನಾಟಕ ರಂಗವೇರಿತು. ಡಾ. ಬಿ.ವಿ. ರಾಜಾರಾಂ ನಿರ್ದೇಶನ ಮಾಡಿರುವ ಮುಖ್ಯಮಂತ್ರಿ ನಾಟಕದ 900ನೇ ವಿಶೇಷ ಪ್ರದರ್ಶನ ಕಲಾಗಂಗೋತ್ರಿ ನಿರ್ಮಾಣದಲ್ಲಿ ಸೆ.26ರಂದು ಶನಿವಾರ ಸಂಜೆ 4.30ರಿಂದ 6.30ರವರೆಗೆ ಆಯೋಜಿಸಲಾಗಿದೆ.

ಸೆ.26 ರ ಮಧ್ಯಾಹ್ನ 3 ಗಂಟೆಗೆ ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಎಂ. ವೀರಪ್ಪ ಮೊಯ್ಲಿ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ವಿ. ಸೋಮಣ್ಣ, ಮಾಜಿ ಸಭಾಪತಿ ಬಿ.ಎಲ್. ಶಂಕರ್ ಸೇರಿದಂತೆ ಹಲವು ಮಾಜಿ ಮಂತ್ರಿಗಳು, ಕಲಾವಿದರು, ಗಣ್ಯರು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ನಾಟಕದ 900ನೇ ವಿಶೇಷ ಪ್ರದರ್ಶನದ ಹಿನ್ನೆಲೆಯಲ್ಲಿ ಡಾ. ಮುಖ್ಯಮಂತ್ರಿ ಚಂದ್ರು ಅವರ ದೀರ್ಘಕಾಲದ ರಂಗಸಾಧನೆ ಕುರಿತು ಚಿಂತನ, ಮಾತುಕತೆ, ಚಿತ್ರ ದರ್ಶನ, ಚಂದ್ರಯಾನ, ಅಭಿನಂದನೆ ಹೀಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

ಸೆ.26 ರಂದು ಸಂಜೆ 7 ಗಂಟೆಗೆ ಮುಖ್ಯಮಂತ್ರಿ ಚಂದ್ರು ಅವರು ಪ್ರದರ್ಶನ ಕ್ಷೇತ್ರದಲ್ಲಿ ಸಲ್ಲಿಸಿದ ಐದು ದಶಕಗಳ ಸೇವೆಯನ್ನು ಪರಿಗಣಿಸಿ ಇದೇ ವೇದಿಕೆಯಲ್ಲಿ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷೆ ಡಾ. ಜಯಮಾಲ, ನಟರಾದ ರವಿಚಂದ್ರನ್, ರಮೇಶ್ ಅರವಿಂದ್, ದೊಡ್ಡಣ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಮುಖ್ಯಮಂತ್ರಿ ನಾಟಕದ ಮೂಲಕವೇ ಜನಪ್ರಿಯರಾದ ಡಾ. ಮುಖ್ಯಮಂತ್ರಿ ಚಂದ್ರು ಈ ನಾಟಕದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ಅವರ ರಂಗಪಯಣವು ದೇಶ ವಿದೇಶಗಳಲ್ಲೂ ವಿಸ್ತರಿಸಿಕೊಂಡಿದೆ. ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದ ಅವರ ನಟನೆ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಒಂದು ಅಳಿಸಲಾಗದ ದಾಖಲೆಯಾಗಿದೆ. ಹೊನ್ನೇನಸಂದ್ರ ನರಸಿಂಹಯ್ಯ ಚಂದ್ರಶೇಖರ ಎಂಬ ಮೂಲ ಹೆಸರಿನ ಡಾ. ಮುಖ್ಯಮಂತ್ರಿ ಚಂದ್ರು ಅವರು ವಿಜ್ಞಾನದಲ್ಲಿ ಪದವೀಧರರಾಗಿದ್ದಾರೆ. ಆದರೆ ಮುಖ್ಯಮಂತ್ರಿ ನಾಟಕದ ಮೂಲಕ ಕನ್ನಡ ನಾಡಿನ ಮನೆಮಾತಾದ ಕಾರಣ ಮುಖ್ಯಮಂತ್ರಿ ಚಂದ್ರು ಎಂದೇ ಪ್ರಸಿದ್ಧರು. ವಿಧಾನಸಭೆ, ವಿಧಾನ ಪರಿಷತ್ ಸದಸ್ಯರಾಗಿ ರಾಜಕೀಯದಲ್ಲೂ ತಮ್ಮ ಛಾಪು ಮೂಡಿಸಿ ನಾಡಿನ ಶಾಶ್ವತ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಹೊಂದಿದ್ದಾರೆ. ರಂಗಭೂಮಿಯ ಜತೆಗೆ ಚಲನಚಿತ್ರ ಮತ್ತು ಕಿರುತೆರೆಯಲ್ಲಿಯೂ ತಮ್ಮದೇ ಛಾಪು ಮೂಡಿಸಿರುವ ಮುಖ್ಯಮಂತ್ರಿ ಚಂದ್ರು ಅವರು ಹಾಸ್ಯಾಭಿನಯದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾರೆ.

# ಎಸ್‌ಐಆರ್: ಮತದಾರರ ನೆರವಿಗೆ ಧಾವಿಸಲಿದ್ದಾರೆ ರಾಜಕೀಯ ಪಕ್ಷಗಳ ಕಾರ್ಯಕರ್ತರು

**ಬೆಂಗಳೂರು, ಸೆ. 21:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ನಿಮಗೆ ಏನಾದರೂ ನೋಟಿಸ್ ಬಂದಿದ್ದರೆ, ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಲು ಸಹಾಯ ಮಾಡಲು ರಾಜಕೀಯ ಪಕ್ಷಗಳ ಕಾರ್ಯಕರ್ತರು ಶೀಘ್ರದಲ್ಲೇ ನಿಮ್ಮ ಮನೆ ಬಾಗಿಲಿಗೆ ಬರುವ ಸಾಧ್ಯತೆಯಿದೆ.

ಲಕ್ಷಾಂತರ ಮತದಾರರಿಗೆ ನೋಟಿಸ್‌ಗಳು ತಲುಪುತ್ತಿರುವ ಹಿನ್ನೆಲೆಯಲ್ಲಿ, ಅಂತಿಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಉಳಿದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ದಾಖಲೆಗಳನ್ನು ಒದಗಿಸುವುದು, ವಿಚಾರಣೆಗಳಿಗೆ ಹಾಜರಾಗುವುದು ಮತ್ತು ಫಾರ್ಮ್-6 ಅರ್ಜಿಗಳನ್ನು ಸಲ್ಲಿಸುವಲ್ಲಿ ಜನರಿಗೆ ಸಹಾಯ ಮಾಡಲು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಮ್ಮ ಬೂತ್‌ಮಟ್ಟದ ಏಜೆಂಟ್‌ಗಳನ್ನು ಸಕ್ರಿಯಗೊಳಿಸಿವೆ. ಈ ಚಟುವಟಿಕೆಯು ಮತದಾರರ ಪಟ್ಟಿ ಪರಿಷ್ಕರಣಾ ಪ್ರಕ್ರಿಯೆಯನ್ನು ಕ್ಷೇತ್ರ ಮಟ್ಟದ ಕಾರ್ಯಾಚರಣೆಯನ್ನಾಗಿ ಪರಿವರ್ತಿಸಿದೆ.

ಬಿಜೆಪಿಯ ಎಸ್‌ಐಆರ್ ಕಾರ್ಯಕ್ರಮದ ಸಂಚಾಲಕ ದತ್ತಾತ್ರಿ ಎಸ್. ಮಾತನಾಡಿ, ಪಕ್ಷವು ದೈನಂದಿನ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸಿದೆ ಎಂದು ತಿಳಿಸಿದರು.ರಾಜ್ಯದಲ್ಲಿ 10 ವಿಭಾಗಗಳಿವೆ ಮತ್ತು ಪ್ರತಿಯೊಂದು ವಿಭಾಗವು ಹಲವಾರು ಜಿಲ್ಲೆಗಳನ್ನು ಒಳಗೊಂಡಿದೆ ಎಂದು ಅವರು ಹೇಳಿದರು. ಪ್ರತಿ ವಿಭಾಗಕ್ಕೂ ಒಬ್ಬ ಸಂಯೋಜಕರಿದ್ದು, ಅವರು ಎಸ್‌ಐಆರ್ ಕಾರ್ಯವನ್ನು ಮೇಲ್ವಿಚಾರಣೆ ಮಾಡುತ್ತಾರೆ. ಪ್ರತಿದಿನ ರಾತ್ರಿ 8.30ಕ್ಕೆ, ನಾವು ಅಂದು ಎದುರಾದ ಸಮಸ್ಯೆಗಳು ಮತ್ತು ಮರುದಿನದ ಗುರಿಗಳ ಬಗ್ಗೆ ಚರ್ಚಿಸುತ್ತೇವೆ ಎಂದು ಹೇಳಿದರು. ಬಿಜೆಪಿ ವ್ಯಾಪಕವಾದ ತಳಮಟ್ಟದ ಕೆಲಸವನ್ನು ಹೊಂದಿರುವ ಕಾರ್ಯಕರ್ತ ಆಧಾರಿತ ಪಕ್ಷವಾಗಿದೆ. ನಮ್ಮಲ್ಲಿ 54,000ಕ್ಕೂ ಹೆಚ್ಚು ಸಕ್ರಿಯ ಬಿಎಲ್‌ಎ-2 ಪ್ರತಿನಿಧಿಗಳಿದ್ದಾರೆ. ಎಎಸ್‌ಡಿಡಿಒ ವರ್ಗದಲ್ಲಿ ಪಟ್ಟಿಯಿಂದ ಹೊರಗುಳಿದಿರುವ ಮತದಾರರ ಪೈಕಿ ಕನಿಷ್ಠ ಶೇ. 50ರಷ್ಟು ಮಂದಿಯನ್ನು ಮರುಸೇರ್ಪಡೆಗೊಳಿಸುವ ಗುರಿ ಹೊಂದಿದ್ದೇವೆ ಎಂದು ಹೇಳಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿ, ಎಎಸ್‌ಡಿಡಿಒ ವರ್ಗದಡಿ ಕೈಬಿಡಲಾದ ಮತದಾರರು ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಅಥವಾ ದಾಖಲೆಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ಯಾವುದೇ ತೊಂದರೆಗಳನ್ನು ಎದುರಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು. ಫಾರ್ಮ್-6 ಅನ್ನು ಭರ್ತಿಮಾಡಿ ಸಲ್ಲಿಸಲು ಸಹಾಯ ಮಾಡಲು ಬಿಎಲ್‌ಎ-1 ಪ್ರತಿನಿಧಿಗಳು, ಜಿಲ್ಲಾ ಮಟ್ಟದ ಸದಸ್ಯರು ಮತ್ತು ಬ್ಲಾಕ್ ಅಧ್ಯಕ್ಷರು ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದು ಅವರು ಹೇಳಿದರು.


# ಸ್ವಂತ ಖರ್ಚಿನಲ್ಲೇ ಕಾಲುವೆ ದುರಸ್ತಿ ಕಾರ್ಯಕ್ಕೆ ಮುಂದಾದ ಶಾಸಕ ಎಚ್.ಡಿ. ರೇವಣ್ಣ



**ಹಾಸನ, ಸೆ.21:** ಹೇಮಾವತಿ ಜಲಾಶಯದಿಂದ ನೀರು ಬಿಟ್ಟರೂ ಕೆರೆಗಳಿಗೆ ನೀರು ತಲುಪದ ಹಿನ್ನೆಲೆ ಸ್ವಂತ ಖರ್ಚಿನಲ್ಲಿ ಕಾಲುವೆ ದುರಸ್ತಿ ಕಾರ್ಯಕ್ಕೆ ಶಾಸಕ ಎಚ್.ಡಿ. ರೇವಣ್ಣ ಮುಂದಾಗಿದ್ದಾರೆ.

ಡ್ಯಾಂನಿಂದ ನೀರು ಬಿಟ್ಟರೂ ಶ್ರೀರಾಮದೇವರ ಕಟ್ಟೆಯ ದಕ್ಷಿಣ ನಾಲೆಗೆ ನೀರು ಹರಿದಿಲ್ಲ. ನೀರು ಬಿಟ್ಟು ವಾರ ಕಳೆದರೂ ನಾಲೆ ಬ್ಲಾಕ್ ಆಗಿರುವ ಕಾರಣ ಮಲ್ಲಪ್ಪನಹಳ್ಳಿ, ತಿರಮಪುರ, ಹೊನ್ನಿಕೊಪ್ಪಲು, ಗೊಂದಿಮಲ್ಲೇನಹಳ್ಳಿ, ತಟ್ಟೆಕರೆ ಭಾಗದಲ್ಲಿ ಕಾಲುವೆ ದುರಸ್ತಿ ಕಾರ್ಯವನ್ನು ರೇವಣ್ಣ ಮಾಡಿಸುತ್ತಿದ್ದಾರೆ. ಆ ಮೂಲಕ ಸರ್ಕಾರದ ಅನುದಾನಕ್ಕೆ ಕಾಯದೆ ತಮ್ಮದೇ ಹಣದಲ್ಲಿ ಕಾಲುವೆ ದುರಸ್ತಿ ಮಾಡಿಸುವ ಮೂಲಕ ಸರ್ಕಾರದ ನಡೆಗೆ ಅವರು ಉತ್ತರ ಕೊಟ್ಟಿದ್ದಾರೆ.

ಇನ್ನು ಜಲಾಶಯಗಳಿಂದ ನೀರು ಬಿಟ್ಟರೂ ಕರೆಗಳಿಗೆ ನೀರು ಹರಿಯದ ಬಗ್ಗೆ ಪ್ರತಿಕ್ರಿಯಿಸಿರುವ ರೇವಣ್ಣ, ಶ್ರೀರಾಮದೇವರ ಬಳಿಕ ಡ್ಯಾಂನಿಂದ ನಾಲೆಗೆ ನೀರು ಬಿಡದಂತೆ ಸೂಚನೆ ಕೊಟ್ಟಿದಾರಂತೆ. ಎರಡು ವರ್ಷದಿಂದ ಈ ಭಾಗದ ನಾಲೆಗೆ ನೀರು ಹರಿಸಿಲ್ಲ. ಎರಡೂ ನಾಲೆಗೆ ನೀರು ಹರಿಸಿದ್ರೆ ಅರ್ಧ ಟಿಎಂಸಿ ನೀರು ಆಗಬಹುದು. ದನಕರುಗಳ ಕುಡಿಯಲಾದರೂ ನೀರು ಹರಿಸಿ. ಹೇಮಾವತಿ ಜಲಾಶಯದಲ್ಲಿ ಗರಿಷ್ಠ 37 ಟಿಎಂಸಿ ನೀರು ಸಂಗ್ರಹ ಮಾಡಬಹುದು. ಕಳೆದ ಎರಡು ತಿಂಗಳಿಂದ ಹದಿನೇಳು ಟಿಎಂಸಿ ನೀರು ಖಾಲಿಯಾಗಿದೆ. ದಿನ ನಿತ್ಯ ನಾಲ್ಕೈದು ಸಾವಿರ ಕ್ಯೂಸೆಕ್ ನೀರು ತಮಿಳುನಾಡಿಗೆ ಹೋಗ್ತಿದೆ ಎಂದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾಲಮನ್ನಾಗೆ ಕುಮಾರಸ್ವಾಮಿ, ಅವರ ಅಣ್ಣನ ಆಸ್ತಿ ಪಾಲು ಕೊಡಲಿ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ ಶಾಸಕ ಎಚ್.ಡಿ.ರೇವಣ್ಣ ತಿರುಗೇಟು ನೀಡಿದ್ದಾರೆ. ನೆಲಮಂಗಲ ಬಳಿ ನನ್ನದು, ಮಗನದ್ದು ಹತ್ತತ್ತು ಎಕರೆ ಆಸ್ತಿ ಇದೆ. ರಾಜ್ಯ ಸರ್ಕಾರ ಏನಾದ್ರೂ ದಿವಾಳಿ ಆಗಿದ್ದರೆ ರಾಜ್ಯದ ಹಿತ ದೃಷ್ಟಿಯಿಂದ ನನ್ನ ಆಸ್ತಿ ಬೇಕಾದ್ರೆ ಕೊಡುತ್ತೇನೆ. ಜನರು ಉಳಿಯಬೇಕು, 10 ಎಕರೆ ಇಟ್ಟುಕೊಂಡು ಏನ್ಮಾಡೋಣ. ರಾಜ್ಯ ಕಾಂಗ್ರೆಸ್ ಸರ್ಕಾರ ದಿವಾಳಿ ಆಗಿದೆ. ಎಚ್.ಡಿ.ರೇವಣ್ಣ ಅವರೇ 10 ಎಕರೆ ಕೊಡಿ ಅಂದರೆ ಕೊಡೋಣ ಎಂದು ರೇವಣ್ಣ ಲೇವಡಿ ಮಾಡಿದ್ದಾರೆ.



ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಸೋಮವಾರ ಪ್ರತಿಷ್ಠಾಪಿಸಲಾದ 'ಬ್ಯಾಡಗಿ ಕಾ ರಾಜಾ' ಗಣಪತಿಯ ದರ್ಶನಾಶೀರ್ವಾದವನ್ನು ಸಂಸದ ಬಸವರಾಜ ಬೊಮ್ಮಾಯಿ ಪಡೆದು ಸಮಿತಿಯ ವತಿಯಿಂದ ಸನ್ಮಾನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ಎಂ.ಎಸ್ ಪಾಟೀಲ, ವಿನಾಯಕ ಮಾಳೇನಹಳ್ಳಿ ಸೇರಿದಂತೆ ಸಮಿತಿಯ ಸದಸ್ಯರು ಹಾಜರಿದ್ದರು.

# ದಸರಾದಲ್ಲಿ ಕಂಬಳ ಕ್ರೀಡೆಗೆ ಪ್ರಾಮುಖ್ಯ ಸಿಗಲ್ಲ ಪ್ರಮೋದಾದೇವಿ ಒಡೆಯರ್ ಅಭಿಮತ



**ಮೈಸೂರು, ಸೆ.21:** ದಸರಾದಲ್ಲಿ ಇದೇ ಮೊದಲ ಬಾರಿಗೆ ಕರಾವಳಿಯ ಕ್ರೀಡೆ, ಜಾನಪದ ಕ್ರೀಡಾಕೂಟ ಕಂಬಳ ಆಯೋಜನೆ ಮಾಡಲಾಗಿದೆ. ಕಂಬಳ ಪರ ವಿರೋಧ ಚರ್ಚೆಗಳ ನಡುವೆ, ದಸರಾದಲ್ಲಿ ಕಂಬಳ ಓಡಿಸಲು ನೋಂದಣಿ ಪ್ರಕ್ರಿಯೆ ಶುರುವಾಗಿದೆ.

ದಸರಾದಲ್ಲಿ ಕಂಬಳ ಆಯೋಜನೆ ಬಗ್ಗೆ ರಾಜ ವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪ್ರತಿಕ್ರಿಯಿಸಿದ್ದು, ಕಂಬಳಕ್ಕೆ ಆ ಭಾಗದಲ್ಲಿ (ಕರಾವಳಿಯಲ್ಲಿ) ಅದರದ್ದೇ ಆದ ಪ್ರಾಮುಖ್ಯ ' ಇದೆ. ಇದು ಬೇಕಾ ಬೇಡವಾ ಎಂಬುದನ್ನು ನಾವೇ ಯೋಚನೆ ಮಾಡಬೇಕಿದೆ. ಕಂಬಳವನ್ನು ದಸರಾ ನಂತರ ಅಥವಾ ಮುಂಚೆಯೇ ಮಾಡಿದ್ದರೆ ಸರಿಹೋಗ್ತಿತ್ತು. ಕಂಬಳವನ್ನು ದಸರಾಗೆ ಸೇರಿಸಬಾರದಿತ್ತು. ದಸರಾದಲ್ಲಿ ಒಂದು ಕಾರ್ಯಕ್ರಮವಾಗಿ ಆಯೋಜಿಸುವುದರಿಂದ ಪ್ರಾಮುಖ್ಯತೆ ಸಿಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಆದರೆ, ದಸರಾದಲ್ಲಿ ಕಂಬಳ ಆಯೋಜನೆ ಮಾಡಿರೋದು ಸರಿ ತಪ್ಪು ಎಂದು ನಾನು ಹೇಳುತ್ತಿಲ್ಲ ಎಂದಿದ್ದಾರೆ. ಕಂಬಳವನ್ನು ಪ್ರತ್ಯೇಕವಾಗಿ ಆಯೋಜಿಸಿದರೆ ಹೆಚ್ಚಿನ ಮಹತ್ವ ಸಿಗುತ್ತದೆ. ದಸರಾ ಭಾಗವಾದರೆ ಕಂಬಳಕ್ಕೆ ಸಿಗಬೇಕಾದ ಪ್ರತ್ಯೇಕ ಗಮನ ಕಡಿಮೆಯಾಗಬಹುದು ಎಂದರು.

ಇದೇ ವೇಳೆ ಬರಗಾಲದಲ್ಲೂ ಅದ್ದೂರಿ ದಸರಾ ಆಚರಣೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ದಸರಾ ಎಂಬ ಶಬ್ದದಲ್ಲೇ ಅದ್ದೂರಿತನ ಅಡಗಿದೆ. ದಸರಾ ಆಚರಣೆಯನ್ನು ಸಂಪೂರ್ಣವಾಗಿ ಕಡಿಮೆ ಮಾಡಲು ಸಾಧ್ಯವಿಲ್ಲ. ಮಳೆ ಕೊರತೆ, ಬರಗಾಲ ಇದ್ದರೂ ಸಂಪ್ರದಾಯದಂತೆ ದಸರಾ ಆಚರಣೆ. ಮಳೆ–ಬೆಳೆ ಉತ್ತಮವಾಗಲಿ ಎಂಬ ಆಶಯವೂ ದಸರಾ ಆಚರಣೆಯಲ್ಲಿದೆ. ಜಂಬೂಸವಾರಿ ಬದಲಾವಣೆಗೂ ಅರಮನೆ ಪರಂಪರೆಗೂ ಸಂಬಂಧವಿಲ್ಲ ಎಂದರು.

# ಬಹಿರಂಗವಾಗಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುವಂತಿದೆ ಅಬಕಾರಿ ಸಚಿವರ ವಿವಾದಾತ್ಮಕ ಹೇಳಿಕೆ ಆರೋಪ

## ಸಾಮಾಜಿಕ ಕಾರ್ಯಕರ್ತರಿಂದ ರಾಜ್ಯಪಾಲರಿಗೆ ದೂರು



**ಹಾಸನ, ಸೆ.21:** ಸಕಲೇಶಪುರದಲ್ಲಿ ನಡೆದ ಸಭೆಯೊಂದರಲ್ಲಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ನೀಡಿದ್ದ ವಿವಾದಾತ್ಮಕ ಹೇಳಿಕೆಯ ಕಾವು ರಾಜಕೀಯ ವಲಯದಲ್ಲಿ ತಣ್ಣಗಾಗಿಲ್ಲ. ಈಗ ಈ ಪ್ರಕರಣವು ನೇರವಾಗಿ ರಾಜ್ಯಪಾಲರ ಅಂಗಳವನ್ನು ಪ್ರವೇಶಿಸಿದೆ.

ಅಧಿಕಾರಿಗಳಿಗೆ ಹಣ ನೀಡುವ ಕುರಿತು ಸಚಿವರು ಆಡಿದ್ದ ಮಾತುಗಳು ಭ್ರಷ್ಟಾಚಾರಕ್ಕೆ ಬಹಿರಂಗವಾಗಿ ಕುಮ್ಮಕ್ಕು ನೀಡುವಂತಿವೆ ಎಂದು ಗಂಭೀರ ಆರೋಪ ಕೇಳಿಬಂದಿದ್ದ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರು, ಅಬಕಾರಿ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡರ ವಿರುದ್ಧ ರಾಜ್ಯಪಾಲರಿಗೆ ಇಮೇಲ್ ಮೂಲಕ ಅಧಿಕೃತ ದೂರು ಸಲ್ಲಿಸಿದ್ದಾರೆ. ಸಂವಿಧಾನದ 14ನೇ ವಿಧಿ (ಸಮಾನತೆಯ ಹಕ್ಕು) ಹಾಗೂ 1988ರ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಈ ಕೂಡಲೇ ಸೂಕ್ತ ತನಿಖೆ ನಡೆಸಬೇಕು. ಅಲ್ಲದೆ, ಸಚಿವ ಸ್ಥಾನದಿಂದ ಶಿವಲಿಂಗೇಗೌಡರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಚಿವರ ಸ್ಪಷ್ಟನೆ

ತಮ್ಮ ಮೇಲಿನ ಆರೋಪ ಹಾಗೂ ರಾಜ್ಯಪಾಲರಿಗೆ ದೂರು ನೀಡಿರುವ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಚಿವ ಶಿವಲಿಂಗೇಗೌಡ, ತಾವೆಂದೂ ನೇರವಾಗಿ ಲಂಚ ನೀಡಿ ಎಂದು ಹೇಳಿಲ್ಲ ಎಂದಿದ್ದಾರೆ. ನಾನು ಅಧಿಕಾರಿಗಳ ಜತೆ ಸೌಜನ್ಯದಿಂದ, ಗೌರವಯುತವಾಗಿ ನಡೆದುಕೊಳ್ಳಿ ಎಂದಷ್ಟೇ ಹೇಳಿದ್ದೆ. ಯಾಕೆ ಇದನ್ನು ಸುಖಾಸುಮ್ಮನೆ ದೊಡ್ಡ ವಿಷಯ ಮಾಡುತ್ತಿದ್ದಾರೆ ರೈತರ ನಿಜವಾದ ಸಮಸ್ಯೆಗಳ ಬಗ್ಗೆ ಯಾರೂ ಧ್ವನಿ ಎತ್ತುವುದಿಲ್ಲ. ಅಂದು ಸಭೆಯ ಸ್ಥಳದಲ್ಲಿ ಅಧಿಕಾರಿಗಳು ಮತ್ತು ರೈತರ ನಡುವೆ ವಾಗ್ವಾದ ನಡೆದಿತ್ತು, ನಮ್ಮ ಮೇಲೆ ಗಲಾಟೆ ಮಾಡುತ್ತಾರೆ ಎಂದು ಅಧಿಕಾರಿಗಳು ಅಳಲು ತೋಡಿಕೊಂಡಿದ್ದರು. ಆ ಕಾರಣಕ್ಕಾಗಿಯೇ ಕೆಲಸ ಮುಗಿದ ಮೇಲೆ ಅಧಿಕಾರಿಗಳೊಂದಿಗೆ ಸರಿಯಾಗಿ ಮಾತನಾಡಿ, ಗೌರವದಿಂದ ನಡೆದುಕೊಳ್ಳಿ ಎಂದು ತಿಳಿಸಿದ್ದೆ ಅಷ್ಟೇ" ಎಂದು ಸಮರ್ಥಿಸಿಕೊಂಡಿದ್ದಾರೆ.

ಸಕಲೇಶಪುರ ತಹಸಿಲ್ದಾರ್ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದ್ದ 'ಪ್ರಜಾಸೇವೆ ಆಂದೋಲನ' ಸಭೆಯು ಈ ಎಲ್ಲ ವಿವಾದಗಳಿಗೆ ಕೇಂದ್ರಬಿಂದುವಾಗಿತ್ತು. ಸಭೆಯಲ್ಲಿ ಮಾತನಾಡಿದ್ದ ಸಚಿವರು, ಸಾರ್ವಜನಿಕರ ಕೆಲಸ ಮಾಡಿಕೊಟ್ಟ ಸರ್ಕಾರಿ ಅಧಿಕಾರಿಗಳಿಗೆ ಗೌರವಯುತವಾಗಿ ಏನಾದರೂ ನೀಡುವುದು ನಿಮ್ಮ ಧರ್ಮ, ಆದರೆ ಬಲವಂತವಾಗಿ ಹಣ ವಸೂಲಿ ಮಾಡುವುದು ಸರಿಯಲ್ಲ ಎಂಬ ಅರ್ಥದಲ್ಲಿ ಮಾತನಾಡಿದ್ದರು. ಸಚಿವರ ಈ ಹೇಳಿಕೆಗೆ ಸ್ಥಳದಲ್ಲಿದ್ದ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

# ಬ್ಯಾಡಗಿಯಲ್ಲಿ ನೂತನ ಶ್ರೀ ಸಿದ್ದೇಶ್ವರ ಕನ್ವೆನ್ಷನ್ ಸೆಂಟರ್ ಉದ್ಘಾಟನೆ

## ಬ್ಯಾಡಗಿ ಮೆಣಸಿನಕಾಯಿ ಹಾಗೂ ಜವಳಿ ಉದ್ಯಮದ ಖ್ಯಾತಿ ವಿಶ್ವವ್ಯಾಪಿ:ಬಸವರಾಜ ಬೊಮ್ಮಾಯಿ




**ಹಾವೇರಿ(ಬ್ಯಾಡಗಿ:), ಸೆ.21:** ಸ್ಥಳೀಯ ಬ್ಯಾಡಗಿ ಮೆಣಸಿನಕಾಯಿಯ ಸಂಸ್ಕೃತಿ ಮತ್ತು ಅದರ ಖ್ಯಾತಿ ಜಾಗತಿಕ ಮಟ್ಟಕ್ಕೆ ವಿಸ್ತರಿಸಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಬ್ಯಾಡಗಿ ಪಟ್ಟಣದ ಶಿಡೇನೂರ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀ ಸಿದ್ದೇಶ್ವರ ಕನ್ವೆನ್ಷನ್ ಸೆಂಟರ್ ಉದ್ಘಾಟನೆಯನ್ನು ಸೋಮವಾರ ನೆರವೇರಿಸಿ ಮಾತನಾಡಿದರು. ನಗರದಲ್ಲಿ ವ್ಯಾಪಾರಸ್ಥರ ಸಂಘ ಹಾಗೂ ವಿವಿಧ ಬಂಧುಗಳ ಸಹಯೋಗದಲ್ಲಿ ಅತ್ಯಂತ ಅವಶ್ಯಕವಾಗಿದ್ದ ನೂತನ 'ಸಿದ್ದೇಶ್ವರ ಕನ್ವೆನ್ಷನ್ ಸೆಂಟರ್' ಅನ್ನು ನಿರ್ಮಿಸಿರುವುದು ಅತ್ಯಂತ ಸ್ತುತ್ಯರ್ಹ ಹಾಗೂ ಮೆಚ್ಚುಗೆಯ ಕೆಲಸ ಇಂದಿನ ಕಾಲದಲ್ಲಿ ಮದುವೆಗಳು ಕೇವಲ ಎರಡು ಕುಟುಂಬಗಳ ನಡುವಿನ ಸಮಾರಂಭವಾಗಿರದೆ, ಸಮಾಜ ಮತ್ತು ಎಲ್ಲಾ ಜನರ ಸಮಾಗಮವಾಗುವ ಪ್ರಮುಖ ಕಾರ್ಯಗಳಾಗಿ ಬದಲಾಗಿವೆ. ಹೀಗಾಗಿ ಮದುವೆಗಳು ಉತ್ತಮ ಹಾಗೂ ದೊಡ್ಡ ಸ್ಥಳದಲ್ಲಿ ನಡೆಯಬೇಕು ಎಂಬ ಹೊಸ ಪದ್ಧತಿಗೆ ತಕ್ಕಹಾಗೆ ಬ್ಯಾಡಗಿ ನಗರದಲ್ಲಿ ಈ ಸುಸಜ್ಜಿತ ಕನ್ವೆನ್ಷನ್ ಸೆಂಟರ್ ನಿರ್ಮಾಣವಾಗಿರುವುದು ಅತ್ಯಂತ ಅವಶ್ಯವಾಗಿತ್ತು ಎಂದು ಪ್ರಶಂಸಿಸಿದರು.

ಸ್ಥಳೀಯ ಬ್ಯಾಡಗಿ ಮೆಣಸಿನಕಾಯಿಯ ಸಂಸ್ಕೃತಿ ಮತ್ತು ಅದರ ಖ್ಯಾತಿ ಜಾಗತಿಕ ಮಟ್ಟಕ್ಕೆ ವಿಸ್ತರಿಸಿದೆ. ಈ ಭಾಗದ ಮೆಣಸಿನಕಾಯಿ ಮಾರುಕಟ್ಟೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಂತಿದೆ. ತಮ್ಮ ವಿದೇಶಿ ಪ್ರವಾಸದ ಅನುಭವವನ್ನು ಹಂಚಿಕೊಂಡ ಅವರು, ಫ್ರಾನ್ಸ್ ದೇಶದ ರೆಸ್ಟೋರೆಂಟ್ ಒಂದಕ್ಕೆ ಭೇಟಿ ನೀಡಿದಾಗ ಅಲ್ಲಿನ ಮೆನು ಕಾರ್ಡ್‌ನಲ್ಲಿ ಬ್ಯಾಡಗಿ ಮೆಣಸಿನಕಾಯಿ ಬಳಸಿ ತಯಾರಿಸಿದ್ದು ಎಂದು ಮುದ್ರಿಸಿರುವುದನ್ನು ಕಂಡು ಆಶ್ಚರ್ಯವಾಯಿತು ಎಂದು ಹೇಳಿದರು. ಸ್ಥಳೀಯ ರೈತರು, ವರ್ತಕರು ಮತ್ತು ಹಿರಿಯರ ಪರಿಶ್ರಮದಿಂದಾಗಿ ಬ್ಯಾಡಗಿ ಮೆಣಸಿನಕಾಯಿ ಇಂದು ದೆಹಲಿ, ಕೇರಳ ಸೇರಿದಂತೆ ದೇಶದ ನಾನಾ ಭಾಗಗಳಿಗೆ ಹಾಗೂ ಯುರೋಪ್ ಸೇರಿದಂತೆ ವಿದೇಶಗಳಿಗೂ ವಿಶೇಷವಾಗಿ ರಫ್ತಾಗುತ್ತಿದೆ ಎಂದರು.

**ಸ್ಥಳೀಯ ಆಡಳಿತದ ಸಾಧನೆಗಳು:**

ಇದೇ ವೇಳೆ ಬ್ಯಾಡಗಿ ನಗರ ಸ್ಥಳೀಯ ಸಂಸ್ಥೆಯ ಕಾರ್ಯವೈಖರಿಯನ್ನು ಸ್ಮರಿಸಿದ ಅವರು, ತಮ್ಮ ತಂದೆಯವರು ಮಂತ್ರಿಯಾಗಿದ್ದ ಕಾಲದಲ್ಲಿ ಹಾಗೂ ಎಸ್.ಆರ್. ಪಾಟೀಲ್ ಮತ್ತು ಸುರೇಶ್ ಗೌಡರ ನೇತೃತ್ವದಲ್ಲಿ 'ಅತ್ಯುತ್ತಮ ಪುರಸಭೆ' ಪ್ರಶಸ್ತಿಯನ್ನು ಪಡೆದು 5 ಲಕ್ಷ ರೂಪಾಯಿ ಬಹುಮಾನ ಗಿಟ್ಟಿಸಿಕೊಂಡಿದ್ದನ್ನು ಸ್ಮರಿಸಿದರು. ಹಾವೇರಿ ಹಾಗೂ ಧಾರವಾಡ ಜಿಲ್ಲೆಯ ಯಾವುದೇ ಪುರಸಭೆಗೂ ಸಿಗದ ಸಿಮೆಂಟ್ ರಸ್ತೆಗಳನ್ನು ಬ್ಯಾಡಗಿಯಲ್ಲಿ ಮೊದಲು ಕಾಣುವಂತಾಯಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಸ್ಸೈಡ್ ಯೋಜನೆ ಮತ್ತು ಎಪಿಎಂಸಿ ಅಭಿವೃದ್ಧಿ ಸ್ಥಳೀಯ ಎಪಿಎಂಸಿ ಮಾರುಕಟ್ಟೆಗಳಲ್ಲಿ ಅಸ್ಸೈಡ್ ಯೋಜನೆಯಡಿ ಎಲ್ಲ ರಸ್ತೆಗಳನ್ನು ಸಂಪೂರ್ಣ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

**ವಸ್ತ್ರೋದ್ಯಮ ಹಾಗೂ ಕಲ್ಯಾಣ ಮಂಟಪ:**

ಬ್ಯಾಡಗಿಯಲ್ಲಿ ಸಾಯಿ ಗಾರ್ಮೆಂಟ್ಸ್ ಮತ್ತು ಟೆಕ್ಸ್ ಪೋರ್ಟ್ ಗಾರ್ಮೆಂಟ್ಸ್‌ನಂತಹ ದೇಶದ ನಂ. 1 ಮತ್ತು ನಂ. 2 ಗಾರ್ಮೆಂಟ್ ಫ್ಯಾಕ್ಟರಿಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಮಹಿಳೆಯರು ಕೆಲಸ ಮಾಡುತ್ತಿರುವುದು ಸಂತಸದ ವಿಚಾರವಾಗಿದೆ. ಸ್ಥಳೀಯ ವ್ಯಾಪಾರಸ್ಥರ ಒಗ್ಗಟ್ಟು ಮತ್ತು ದೊಡ್ಡ ಮನಸ್ಸಿನಿಂದಾಗಿ ಕಲ್ಯಾಣ ಮಂಟಪದಂತಹ ಉತ್ತಮ ನಿರ್ಮಾಣ ಕಾರ್ಯಗಳು ಹಾಗೂ ಸೌಲಭ್ಯಗಳು ರೂಪುಗೊಳ್ಳುತ್ತಿವೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಡಾ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ತರಳುಬಾಳು ಜಗದ್ಗುರುಗಳು ಶಾಖಾಮಠ, ಸಾಣೆಹಳ್ಳಿ, ಸದಾಶಿವ ಮಹಾಸ್ವಾಮಿಗಳು ಹುಕ್ಕೇರಿಮಠ, ಹಾವೇರಿ, ಜಗದ್ಗುರು ಡಾ. ನಿರಂಜನಾನಂದಪುರಿ ಮಹಾಸ್ವಾಮಿಗಳು ಕನಕ ಗುರುಪೀಠ, ಕಾಗಿನೆಲೆ, ಶ್ರೀಗಳವರು ಸಾನಿಧ್ಯ ವಹಿಸಿದ್ದರು. ಶಾಸಕ ಬಸವರಾಜ ಶಿವಣ್ಣನವರ, ಮಾಜಿ ಸಚಿವ ಬಿ.ಸಿ ಪಾಟೀಲ್, ವರ್ತಕರ ಸಂಘದ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಸುರೇಶಗೌಡ್ರು ಪಾಟೀಲ ಮಾಜಿ ಶಾಸಕರಾದ ಎಸ್ ಆರ್ ಪಾಟೀಲ, ಶಿವರಾಜ ಸಜ್ಜನ, ವಿರುಪಾಕ್ಷಪ್ಪ ಬಳ್ಳಾರಿ ಸೇರಿದಂತೆ ವರ್ತಕರ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಪ್ರಮುಖರು ಹಾಜರಿದ್ದರು.

# ಅ.11ರಿಂದ ದಸರಾ ಖಾಸಗಿ ದರ್ಬಾರ್, 21ರಂದು ಜಂಬೂಸವಾರಿ



**ಮೈಸೂರು, ಸೆ.21:** ನಾಡಹಬ್ಬ ಹಾಗೂ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2026ರ ಅಂಗವಾಗಿ ಮೈಸೂರು ಅರಮನೆಯಲ್ಲಿ ನಡೆಯಲಿರುವ ಸಾಂಪ್ರದಾಯಿಕ 'ಖಾಸಗಿ ದರ್ಬಾರ್' (ಖಾಸಗಿ ಧಾರ್ಮಿಕ ಕಾರ್ಯಕ್ರಮಗಳ) ವೇಳಾಪಟ್ಟಿಯನ್ನು ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಪ್ರಕಟಿಸಿದ್ದಾರೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ರಾಜಮನೆತನದ ಧಾರ್ಮಿಕ ವಿಧಿವಿಧಾನಗಳು ಹಾಗೂ ಖಾಸಗಿ ದರ್ಬಾರ್‌ಗೆ ಸಂಬಂಧಿಸಿದಂತೆ ಪ್ರಮುಖ ದಿನಾಂಕಗಳ ವಿವರ ಇಲ್ಲಿದೆ:

ಅ.5ರಂದು ಅರಮನೆಯ ಸಮ್ಮಿಶ್ರ ಸಭಾಂಗಣದಲ್ಲಿ ಭದ್ರತೆಯಲ್ಲಿರುವ ಐತಿಹಾಸಿಕ ಹಾಗೂ ಆಕರ್ಷಕ ರತ್ನಖಚಿತ ಸಿಂಹಾಸನವನ್ನು ಖಾಸಗಿ ದರ್ಬಾರ್‌ಗಾಗಿ ಜೋಡಣೆ ಮಾಡಲಾಗುತ್ತದೆ., ಅ.11ರಂದು ಖಾಸಗಿ ದರ್ಬಾರ್ ಆರಂಭ. ಅಂದು ಬೆಳಿಗ್ಗೆ 11:45ರ ಶುಭ ಮುಹೂರ್ತದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನವನ್ನೇರುವ ಮೂಲಕ ಸಾಂಪ್ರದಾಯಿಕ ಖಾಸಗಿ ದರ್ಬಾರ್‌ಗೆ ಚಾಲನೆ ದೊರೆಯಲಿದೆ. ಸರಸ್ವತಿ ಪೂಜೆ

ನವರಾತ್ರಿ ಪೂಜಾ ವಿಧಿವಿಧಾನಗಳ ಭಾಗವಾಗಿ ಅ.16ರಂದು ಆವರಣದಲ್ಲಿ ವಿಧಿವಿಧಾನಗಳೊಂದಿಗೆ ಸರಸ್ವತಿ ಪೂಜೆಯನ್ನು ನೆರವೇರಿಸಲಾಗುತ್ತದೆ. ಅ.20ರಂದು ಬೆಳಿಗ್ಗೆ 11:35ರ ಶುಭ ಲಗ್ನದಲ್ಲಿ ಅರಮನೆಯ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಹಾಗೂ ರಾಜಮನೆತನದ ಆಯುಧಗಳು ಮತ್ತು ವಾಹನಗಳಿಗೆ ಶಾಸ್ತ್ರೋಕ್ತವಾಗಿ ಆಯುಧ ಪೂಜೆ ನೆರವೇರಲಿದೆ.

ನವರಾತ್ರಿ ಕಾರ್ಯಕ್ರಮಗಳ ಸಮಾರೋಪ ಅಂಗವಾಗಿ ಅ.21ರಂದು ವಿಜಯದಶಮಿಯ ವೈಭವದ ಮೆರವಣಿಗೆ ಮತ್ತು ಜಂಬೂಸವಾರಿ ನಡೆಯಲಿದೆ. ಅರಮನೆಯಿಂದ ಶುರುವಾಗುವ ಅಂಬಾರಿ ಮೆರವಣಿಗೆಯೊಂದಿಗೆ ನವರಾತ್ರಿ ಮಹೋತ್ಸವ ಸಂಪನ್ನಗೊಳ್ಳಲಿದೆ.

# ಎಸ್ಕ್ರೋ ಖಾತೆಗೆ ಗ್ರಂಥಾಲಯ ಕರ ನೇರ ಜಮಾ: ಡಿಸಿ ಇಕ್ರಮ್ ಶರೀಫ್



ಕಲಬುರಗಿ ನಗರದ ಜಿಲ್ಲಾಧಿಕಾರಿಗಳಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ 79ನೇ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಮಾತನಾಡಿದರು.

**ಕಲಬುರಗಿ, ಸೆ.21:** ಪಾವತಿಯಾಗದೆ ಬಾಕಿಯಿರುವ ಗ್ರಂಥಾಲಯ ಕರವನ್ನು ತಕ್ಷಣ ಪಾವತಿಸುವುದು ಹಾಗೂ ಇನ್ಮುಂದೆ ಎಲ್ಲಾ ಸ್ಥಳೀಯ ಸಂಸ್ಥೆಗಳು ಜನರಲ್ ಅಕೌಂಟ್ ಬದಲಿಗೆ ಗ್ರಂಥಾಲಯ ಇಲಾಖೆಯ ಎಸ್ಕ್ರೋ ಖಾತೆಗೆ ಶೇ.6ರಷ್ಟು ಕರವನ್ನು ನೇರವಾಗಿ ಜಮಾ ಮಾಡುವಂತೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ 79ನೇಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆರಂಭದಲ್ಲಿ 78ನೇ ಸಭೆಯ ನಡಾವಳಿಯನ್ನು ಓದಿ ಅನುಮೋದಿಸಲಾಯಿತು. 2025–26ನೇ ಸಾಲಿನಲ್ಲಿ ಯಡ್ರಾಮಿ ಹೊರತುಪಡಿಸಿ ಉಳಿದೆಲ್ಲಾ ತಾಲೂಕುಗಳಿಂದ ಕರ ಪಾವತಿಯಾಗಿದ್ದು, ಬಾಕಿ ಹಣವನ್ನು ತಕ್ಷಣ ಜಮಾ ಮಾಡಲು ತಿಳಿಸಿದರು.

ಕಮಲಾಪುರ ಹಗೂಶಹಾಬಾದನಲ್ಲಿ ಒತ್ತುವರಿಯಾದ ಜಾಗವನ್ನು 15ದಿನಗಳೊಳಗಗಿ ಒತ್ತುವರಿ ತೆರವುಗೊಳಿಸಲು ಅಧಿಕಾಯಿರಿಗಳಿಗೆ ಸೂಚಿಸಲಾಯಿತು. ಯಡ್ರಾಮಿ ಯಲ್ಲಿ ಗ್ರಂಥಾಲಯ ಕಟ್ಟಡಕ್ಕಾಗಿ ತಾಲೂಕಿನ ಮಧ್ಯಭಾಗದಲ್ಲೇ ಸಿ.ಎ ನಿವೇಶನ ಒದಗಿಸಲು ನಿರ್ದೇಶಿಸಲಾಯಿತು.

ಬಿದ್ದಾಪುರ ಬಡಾವಣೆಯಲ್ಲಿ ಕೆಕೆಆರ್ ಡಿಬಿ ಹಾಗೂ ಪಿಡಬ್ಲ್ಯೂಡಿ ವತಿಯಿಂದ ರೂ. 25 ಕೋಟಿ ವೆಚ್ಚದಲ್ಲಿ ನೂತನ ಸ್ವಂತ ಕಟ್ಟಡ ನಿರ್ಮಿಸುವ ಯೋಜನೆ ಕುರಿತು ಮಾಹಿತಿ ಪಡೆಯಲು ಜಿಲ್ಲಾಧಿಕಾರಿಗಳು ತಿಳಿಸಿದರು. 2025–26 ಸಾಲಿನಲ್ಲಿ ಜಮೆಯಾದ 84 ಲಕ್ಷ ಕರದಲ್ಲಿ ಸಾಮಾನ್ಯ ವೆಚ್ಚಕ್ಕೆ 11.69 ಲಕ್ಷ ಹಾಗೂ ಪುಸ್ತಕ ಖರೀದಿಗೆ ಸಮಯ ವಿಸ್ತರಣೆಯಾದ ಹಿನ್ನೆಲೆಯಲ್ಲಿ 39 ಲಕ್ಷ ಸೇರಿ ಒಟ್ಟು 50.74 ಲಕ್ಷ ರೂ. ವಾಸ್ತವಿಕ ವೆಚ್ಚವಾಗಿದೆ ಎಂದು ಸಭೆಗೆ ವಿವರ ನೀಡಲಾಯಿತು.

ಉಳಿತಾಯ ಕರದ ಅನುದಾನದಲ್ಲಿ ಬಾಡಿಗೆ/ಉಚಿತ ಕಟ್ಟಡಗಳಲ್ಲಿರುವ ಶಾಖಾ ಹಾಗೂ ಪಟ್ಟಣ ಪಂಚಾಯತಿ ಗ್ರಂಥಾ ಲಯಗಳಿಗೆ ರೂ. 10 ರಿಂದ 15 ಲಕ್ಷ ನೀಡಿ ಅಂತರ್ಜಾಲ, ಪೀಠೋಪಕರಣ ಹಾಗೂ ದಿನಪತ್ರಿಕೆ ರ್‍ಯಾಕ್ ಒದಗಿಸಲು ತೀರ್ಮಾನಿಸಲಾಯಿತು. ಹಾಳಾದ ಪುಸ್ತಕಗಳನ್ನು ಕೆಪಿಟಿಟಿ ನಿಯಮಗಳಂತೆ ಇ–ಟೆಂಡರ್ ಮೂಲಕ ವಿಲೇವಾರಿ ಮಾಡುವುದು, ಚಿಂಚೋಳಿ ಹಾಗೂ ಇತರ ಗ್ರಂಥಾಲಯಗಳಿಗೆ ಸಾದಿಲ್ವಾರು ವೆಚ್ಚದಲ್ಲಿ ಶುಚಿಗಾರರನ್ನು ಇಟ್ಟುಕೊಳ್ಳುವುದು ಮತ್ತು ಮಕ್ಕ ಳಲ್ಲಿ ಓದಿನ ಹವ್ಯಾಸ ಬೆಳೆಸಲು ವಿಶೇಷ ವಾತಾ ವರಣ ನಿರ್ಮಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಾದ ಡಾ. ಪರಮೇಶ್ವರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮುನ್ನಾವರ ದೌಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ, ಶಹಾಬಾದ್ ನಗರಸಭೆ ಆಯುಕ್ತೆ ನೀಲ ಪ್ರಭ, ಜಿಲ್ಲೆಯ ಎಲ್ಲಾ ತಾಲೂಕಿನ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು ಹಾಗೂ ಕಚೇರಿ ಸಿಬ್ಬಂದಿಗಳಾದ ಗೌತಮ ಕಡೂನ, ಅಶ್ವಿನಿ ಮುರಾಳ, ಅನಿಲಕುಮಾರ ಬಿರಾದಾರ, ರಾಜಶ್ರೀ ಎಸ್. ಮತ್ತು ಸಂಗಪ್ಪ ಪಾಸೋಡಿ ಉಪಸ್ಥಿತರಿದ್ದರು.

# ದಸರಾ ಪ್ರಮುಖ ಆಕರ್ಷಣೆಗಳ ವೀಕ್ಷಣೆಗೆ ಆನ್‌ಲೈನ್ ಟಿಕೆಟ್ ಬುಕಿಂಗ್‌ಗೆ ಚಾಲನೆ




**ಮೈಸೂರು, ಸೆ.21:** ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2026ರ ಸಂಭ್ರಮಕ್ಕೆ ದಿನಗಣನೆ ಆರಂಭವಾಗಿದ್ದು, ಪ್ರವಾಸಿಗರು ಹಾಗೂ ಸಾರ್ವಜನಿಕರು ಕಾತರದಿಂದ ಕಾಯುತ್ತಿದ್ದ ಟಿಕೆಟ್ ಬುಕಿಂಗ್ ಪ್ರಕ್ರಿಯೆಗೆ ಅಧಿಕೃತ ಚಾಲನೆ ಸಿಕ್ಕಿದೆ.

ದಸರಾ ಉತ್ಸವದ ಪ್ರಮುಖ ಆಕರ್ಷಣೆಗಳಾದ ಗೋಲ್ಡ್ ಕಾರ್ಡ್, ಜಂಬೂ ಸವಾರಿ, ಪಂಜಿನ ಕವಾಯತು ಹಾಗೂ ಡ್ರೋನ್ ಶೋ ವೀಕ್ಷಣೆಗೆ ಸಂಬಂಧಿಸಿದಂತೆ ನಾಲ್ಕು ವಿಭಾಗಗಳ ಆನ್‌ಲೈನ್ ಟಿಕೆಟ್‌ಗಳ ಮಾರಾಟ ಸೋಮವಾರದಿಂದ ಪ್ರಾರಂಭವಾಗಿದ್ದು, ಸಾರ್ವಜನಿಕರು ಅಧಿಕೃತ ಜಾಲತಾಣದ ಮೂಲಕ ಈಗಲೇ ಟಿಕೆಟ್ ಕಾಯ್ದಿರಿಸಬಹುದಾಗಿದೆ.

**ದಸರಾ ಗೋಲ್ಡ್ ಕಾರ್ಡ್:**

ಸಕಲ ಸೌಲಭ್ಯಗಳನ್ನೊಳಗೊಂಡ ವಿಶೇಷ ಪಾಸ್ ನಾಡಹಬ್ಬದ ಎಲ್ಲಾ ಪ್ರಮುಖ ಕಾರ್ಯಕ್ರಮಗಳು ಮತ್ತು ಪ್ರವಾಸಿ ತಾಣಗಳನ್ನು ಯಾವುದೇ ಅಡೆತಡೆಯಿಲ್ಲದೆ ವೀಕ್ಷಿಸಲು ಇಚ್ಛಿಸುವವರಿಗಾಗಿ 'ದಸರಾ ಗೋಲ್ಡ್ ಕಾರ್ಡ್' ಪರಿಚಯಿಸಲಾಗಿದೆ. ಪ್ರತಿ ವ್ಯಕ್ತಿಗೆ 6,500 ರೂ. ದರ ನಿಗದಿಪಡಿಸಲಾಗಿದ್ದು, ಈ ಕಾರ್ಡ್ ಅಕ್ಟೋಬರ್ 11 ರಿಂದ ಅಕ್ಟೋಬರ್ 21 ರವರೆಗೆ ಮಾನ್ಯವಾಗಿರುತ್ತದೆ. ಗೋಲ್ಡ್ ಕಾರ್ಡ್ ಹೊಂದಿರುವವರಿಗೆ ಮೈಸೂರು ಅರಮನೆ, ಚಾಮುಂಡಿ ಬೆಟ್ಟ ಹಾಗೂ ಮೈಸೂರು ಮೃಗಾಲಯಕ್ಕೆ ತಲಾ ಒಂದು ಬಾರಿ ಉಚಿತ ಪ್ರವೇಶ ಸಿಗಲಿದೆ. ಇದರೊಂದಿಗೆ ಅಕ್ಟೋಬರ್ 21ರಂದು ನಡೆಯುವ ಜಂಬೂ ಸವಾರಿಗೆ ನಿರ್ದಿಷ್ಟ ಸಂಖ್ಯೆಯುಳ್ಳ ಆಸನ, ಸಂಜೆಯ ಪಂಜಿನ ಕವಾಯತಿಗೆ ಮೀಸಲು ಆಸನ, ಡ್ರೋನ್ ಶೋ ಪ್ರವೇಶ ಹಾಗೂ ವಿಶೇಷ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಅಕ್ಟೋಬರ್ 21ರ ಜಂಬೂ ಸವಾರಿ ಮತ್ತು ಪಂಜಿನ ಕವಾಯತು ಟಿಕೆಟ್ ದರ ವಿವರ ಅಕ್ಟೋಬರ್ 21ರ ಬುಧವಾರದಂದು ನಡೆಯಲಿರುವ ವಿಜಯದಶಮಿ ಜಂಬೂಸವಾರಿಯನ್ನು ಅರಮನೆ ಆವರಣದಿಂದ (ಆವರಣ–1) ಕಣ್ತುಂಬಿಕೊಳ್ಳಲು ಪ್ರತಿ ವ್ಯಕ್ತಿಗೆ 3,500 ರೂ. ದರ ನಿಗದಿಪಡಿಸಲಾಗಿದೆ. ಇಲ್ಲಿ ಕಾಯ್ದಿರಿಸಿದ ಆಸನ ವ್ಯವಸ್ಥೆ ಇರಲಿದ್ದು, ಭದ್ರತಾ ಕಾರಣಗಳಿಂದಾಗಿ ಬೆಳಗ್ಗೆ 10:00 ರಿಂದ ಮಧ್ಯಾಹ್ನ 12:30 ರವರೆಗೆ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ. ಅದೇ ದಿನ ಸಂಜೆ ಬನ್ನಿಮಂಟಪ ಕವಾಯತು ಮೈದಾನದಲ್ಲಿ ನಡೆಯುವ 'ಪಂಜಿನ ಕವಾಯತು' ಕಾರ್ಯಕ್ರಮಕ್ಕೆ ಪ್ರತಿ ವ್ಯಕ್ತಿಗೆ 1,500 ರೂ. ಟಿಕೆಟ್ ದರವಿದ್ದು, ಸಂಜೆ 4:30 ರಿಂದ 6:30 ರವರೆಗೆ ಪ್ರವೇಶಾವಕಾಶ ಇರುತ್ತದೆ. ಕವಾಯತಿನಲ್ಲಿ ಮಿಲಿಟರಿ ಬ್ಯಾಂಡ್, ಅಶ್ವದಳ ಕಸರತ್ತು, ಮೋಟಾರ್‌ಸೈಕಲ್ ಸಾಹಸ ಹಾಗೂ ಮನಮೋಹಕ ಸಿಡಿಮದ್ದು ಪ್ರದರ್ಶನಗಳು ಪ್ರೇಕ್ಷಕರನ್ನು ರಂಜಿಸಲಿವೆ. ಆಕರ್ಷಕ ಡ್ರೋನ್ ಶೋ ವೀಕ್ಷಣೆಗೆ ಪ್ರತ್ಯೇಕ ಟಿಕೆಟ್ ನಿಗದಿ ದಸರಾ ಮಹೋತ್ಸವದ ಮತ್ತೊಂದು ಪ್ರಮುಖ ಅತ್ಯಾಕರ್ಷಣೆಯಾದ 'ಡ್ರೋನ್ ಶೋ' ವೀಕ್ಷಣೆಗೂ ಪ್ರತ್ಯೇಕ ಟಿಕೆಟ್ ಕಾಯ್ದಿರಿಸಲು ಅವಕಾಶ ನೀಡಲಾಗಿದೆ.

ಅಕ್ಟೋಬರ್ 17 (ಶನಿವಾರ) ಮತ್ತು ಅಕ್ಟೋಬರ್ 18 (ಭಾನುವಾರ) ರಂದು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಈ ಪ್ರದರ್ಶನ ನಡೆಯಲಿದ್ದು, ಪ್ರತಿ ವ್ಯಕ್ತಿಗೆ ದಿನವೊಂದಕ್ಕೆ 1,000 ದರ ನಿಗದಿಪಡಿಸಲಾಗಿದೆ. ಪ್ರವೇಶ ಗೇಟ್‌ಗಳು ಸಂಜೆ 4:30ಕ್ಕೆ ತೆರೆಯಲಿದ್ದು, ಸೂರ್ಯಾಸ್ತದ ನಂತರ ಆಸಕ್ತಿದಾಯಕ ಡ್ರೋನ್ ಶೋ ಆರಂಭವಾಗಲಿದೆ. ವೀಕ್ಷಕರಿಗೆ ಪ್ರಮುಖ ಸೂಚನೆಗಳು ವಿಜಯದಶಮಿಯಂದು ಸಂಜೆ 4:10ಕ್ಕೆ ನಂದಿಧ್ವಜ ಪೂಜೆ ಹಾಗೂ ಪುಷ್ಪಾರ್ಚನೆ ನೆರವೇರಲಿದ್ದು, ಆವರಣ–1ರ ಎದುರಾಗಿಯೇ ಚಿನ್ನದ ಅಂಬಾರಿ ಸಾಗಲಿದೆ. ಭದ್ರತೆಯ ದೃಷ್ಟಿಯಿಂದ ಅಂದು ಬೆಳಗ್ಗೆ 11:00 ಗಂಟೆಯಿಂದಲೇ ಅರಮನೆ ಸುತ್ತಮುತ್ತಲಿನ ರಸ್ತೆಗಳನ್ನು ಬಂದ್ ಮಾಡಲಾಗುವುದರಿಂದ, ಜಂಬೂ ಸವಾರಿ ವೀಕ್ಷಕರು ಮಧ್ಯಾಹ್ನ 12:30ರ ಒಳಗೆ ತಮ್ಮ ಆಸನಗಳಲ್ಲಿ ಆಸೀನರಾಗುವುದು ಕಡ್ಡಾಯವಾಗಿದೆ. ಕಾರ್ಯಕ್ರಮ ವೀಕ್ಷಣೆಗೆ ಆಗಮಿಸುವ ಪ್ರತಿಯೊಬ್ಬರು ಟಿಕೆಟ್‌ನೊಂದಿಗೆ ತಮ್ಮ ಅಧಿಕೃತ ಫೋಟೋ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕೆಂದು ಪ್ರಕಟಣೆ ತಿಳಿಸಿದೆ.

# ಕಲಬುರಗಿಯ ಆರು ತಾಲ್ಲೂಕುಗಳು ಬರಪೀಡಿತ: ಘೋಷಣೆ

**ಕಲಬುರಗಿ, ಸೆ.21:** ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಬೇಕು ಎಂಬ ಅನ್ನದಾತರ, ಸಂಘಟನೆಗಳ ಬೇಡಿಕೆಗೆ ರಾಜ್ಯ ಸರ್ಕಾರ ಕೊನೆಗೂ ಸ್ಪಂದಿಸಿದೆ. ಮಳೆಯ ಕೊರತೆಯಿಂದ ತತ್ತರಿಸಿರುವ ಜಿಲ್ಲೆಯ ಆರು ತಾಲ್ಲೂಕುಗಳನ್ನು 'ಬರಪೀಡಿತ' ಎಂದು ಕೊನೆಗೂ ಸಕಾರ ಅಧಿಕೃತವಾಗಿ ಘೋಷಿಸಿದೆ. ಮತ್ತೊಂದೆಡೆ, ಇನ್ನುಳಿದ ಐದು ತಾಲ್ಲೂಕುಗಳನ್ನು 'ತಳಮಟ್ಟದಲ್ಲಿ ವಾಸ್ತವ ಪರಿಸ್ಥಿತಿ ಪರಿಶೀಲನೆ'ಗೆ ಆಯ್ಕೆ ಮಾಡಿದೆ.

ರಾಜ್ಯ ಸರ್ಕಾರ ಘೋಷಿಸಿದ್ದ ಬರಪೀಡಿತ ತಾಲ್ಲೂಕುಗಳ ಮೊದಲ ಪಟ್ಟಿಯಲ್ಲಿ ಜಿಲ್ಲೆಯ ಒಂದೂ ತಾಲ್ಲೂಕು ಇರಲಿಲ್ಲ. ತೀವ್ರತರ ಬರದ ಛಾಯೆ, ಕುಡಿಯುವ ನೀರಿಗೂ ತತ್ವಾರವಿದ್ದರೂ 'ಬರಪೀಡಿತ' ಎಂದು ಘೋಷಿಸಿಲ್ಲ ಎಂದು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ವಿರುದ್ಧ ರೈತರು ಸೇರಿದಂತೆ ವಿವಿಧ ಸಂಘಟನೆಗಳಿಂದ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದವು. 'ಬರಪೀಡಿತ' ಎಂದು ಘೋಷಿಸಲು ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ನಿಯಮಗಳೇ ಅಡ್ಡಿಯಾಗಿವೆ ಎಂದು ರಾಜ್ಯ ಸರ್ಕಾರ ಪ್ರತಿಪಾದಿಸಿತ್ತು.

ಈ ನಡುವೆ ಜಿಲ್ಲೆಯಲ್ಲಿ ಮಳೆ ಕೊರತೆ ಹೆಚ್ಚಾಗಿತ್ತು. ಬೆಳೆಗಳು ಒಣಗುತ್ತಿದ್ದವು. ಕೇಂದ್ರ ಕೃಷಿ ಸಚಿವಾಲಯದ 'ಬರ ನಿರ್ವಹಣಾ ಕೈಪಿಡಿ–2020'ರ ಮಾರ್ಗಸೂಚಿಯಂತೆ ಜಿಲ್ಲೆಯ ಆರು ತಾಲ್ಲೂಕುಗಳನ್ನು 'ತಳಮಟ್ಟದಲ್ಲಿ ವಾಸ್ತವ ಪರಿಸ್ಥಿತಿ ಪರಿಶೀಲನೆ'ಗೆ ಸರ್ಕಾರ ಆಯ್ಕೆ ಮಾಡಿತ್ತು. ಅಫಜಲಪುರ, ಆಳಂದ, ಚಿತ್ತಾಪುರ, ಕಲಬುರಗಿ, ಯಡ್ರಾಮಿ, ಶಹಾಬಾದ್ ತಾಲ್ಲೂಕುಗಳ ಒಟ್ಟು 56 ಗ್ರಾಮಗಳ 582 ಜಮೀನುಗಳಿಗೆ ಕೃಷಿ ಇಲಾಖೆ ಅಧಿಕಾರಿಗಳ ತಂಡಗಳು ಭೇಟಿ ನೀಡಿದ್ದವು. ಬೆಳೆಗಳ ವೈಜ್ಞಾನಿಕ ಪರಿಶೀಲನೆ, ಪಾರದರ್ಶಕ ಸಮೀಕ್ಷೆ ನಡೆಸಿ ನಿಖರ ವರದಿ ಸರ್ಕಾರಕ್ಕೆ ಸಲ್ಲಿಸಿದ್ದವು. ಆ ವರದಿ ಆಧರಿಸಿ ರಾಜ್ಯ ಸರ್ಕಾರ ಆ ಎಲ್ಲ ಆರೂ ತಾಲ್ಲೂಕುಗಳನ್ನು 'ತೀವ್ರತರ ಬರಪೀಡಿತ' ಎಂದು ಘೋಷಿಸಿದೆ.

ಅಲ್ಲದೇ, ಜೂನ್ 1ರಿಂದ ಸೆಪ್ಟೆಂಬರ್ 16ರ ವರೆಗಿನ ಮಳೆ ಪ್ರಮಾಣ, ಮಣ್ಣಿನ ತೇವಾಂಶ, ಬೆಳೆ ಸ್ಥಿತಿ ಸೇರಿದಂತೆ ವಿವಿಧ ವೈಜ್ಞಾನಿಕ ಮಾನದಂಡಗಳ ಆಧಾರದ ಮೇಲೆ ಜಿಲ್ಲೆಯ ಇನ್ನುಳಿದ ಐದು ತಾಲ್ಲೂಕುಗಳಾದ ಚಿಂಚೋಳಿ, ಜೇವರ್ಗಿ, ಸೇಡಂ, ಕಾಳಗಿ ಹಾಗೂ ಕಮಲಾಪುರ ತಾಲ್ಲೂಕುಗಳನ್ನು 'ತಳಮಟ್ಟದಲ್ಲಿ ವಾಸ್ತವ ಪರಿಸ್ಥಿತಿ ಪರಿಶೀಲನೆ'ಗೆ ರಾಜ್ಯ ಸರ್ಕಾರ ಆಯ್ಕೆ ಮಾಡಿದೆ. ಪರಿಸ್ಥಿತಿ ಅವಲೋಕಿಸಿ ವರದಿ ನೀಡಲಿದ್ದು, ಅದು ಎನ್‌ಡಿಆರ್‌ಎಫ್‌ಗಳಿಗೆ ತಕ್ಕುದಾಗಿದ್ದರೆ ಆ ತಾಲ್ಲೂಕುಗಳು 'ಬರಪೀಡಿತ' ಘೋಷಣೆ ಆಗಲಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ಪಿಯುಸಿ ಪರೀಕ್ಷಾ ಶುಲ್ಕವನ್ನು ಶೇ. 50ರಷ್ಟು ಹೆಚ್ಚಿಸಿರುವ ಸರ್ಕಾರದ ವಿದ್ಯಾರ್ಥಿ ವಿರೋಧಿ ನಿರ್ಧಾರಕ್ಕೆ ಎಐಡಿಎಸ್‌ಓ ತೀವ್ರ ಖಂಡನೆ

**ಬಳ್ಳಾರಿ ಸೆ.21:** ರಾಜ್ಯದಲ್ಲಿ ಪದವಿ ಪೂರ್ವ (ಪಿಯು) ಕೋರ್ಸ್‌ಗಳ ಪರೀಕ್ಷಾ ಶುಲ್ಕವನ್ನು ಏಕಾಏಕಿ ಶೇ. 50ರಷ್ಟು ಹೆಚ್ಚಿಸಿ, ಶಾಲಾ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿರುವುದು ಅತ್ಯಂತ ಖಂಡನೀಯ. ಈಗಾಗಲೇ ಬರಗಾಲದಿಂದ ಕಂಗಾಲಾಗಿರುವ ರಾಜ್ಯದ ರೈತರು ಮತ್ತು ಕೃಷಿ ಕೂಲಿಕಾರರ ಕುಟುಂಬಗಳ ಮೇಲೆ ರಾಜ್ಯ ಸರ್ಕಾರವು ಶುಲ್ಕ ಏರಿಕೆಯ ಬರೆ ಎಳೆದಿದೆ. ದಿನೇ ದಿನೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು, ಜನ ಸಾಮಾನ್ಯರು ಬದುಕು ಸಾಗಿಸುವುದೇ ಕಷ್ಟಕರವಾಗಿದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ, ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಶಿಕ್ಷಣದ ಕನಸಿಗೆ ತಣ್ಣೀರು ಎರಚುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ.

ಈ ದೇಶದ ಮಹಾನ್ ವ್ಯಕ್ತಿಗಳ ಆಶಯದಂತೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಉಚಿತ ಶಿಕ್ಷಣವನ್ನು ನೀಡುವುದು ಸರ್ಕಾರದ ಆದ್ಯ ಜವಾಬ್ದಾರಿಯಾಗಿದೆ. ಆದರೆ, ಶಿಕ್ಷಣವನ್ನು ಪ್ರೋತ್ಸಾಹಿಸುವ ಬದಲಿಗೆ, ಪರೀಕ್ಷಾ ನೋಂದಣಿ, ಪ್ರಾಯೋಗಿಕ ಪರೀಕ್ಷೆ, ಅಂಕಪಟ್ಟಿ, ಮರುಮೌಲ್ಯ ಮಾಪನ ಸೇರಿದಂತೆ ಎಲ್ಲಾ ಪ್ರಕಾರದ ಶುಲ್ಕಗಳನ್ನು ಗಣನೀಯವಾಗಿ ಹೆಚ್ಚಿಸಿರುವುದು ಸರ್ಕಾರದ ಶಿಕ್ಷಣ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. 202627ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಪರೀಕ್ಷಾ ಶುಲ್ಕಗಳನ್ನು ಏರಿಸಿದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು 400ರಿಂದ 600ಕ್ಕೆ ಹೆಚ್ಚಿಸಲಾಗಿದೆ. ಪ್ರತಿ ವಿಷಯದ ಪರೀಕ್ಷಾ ಶುಲ್ಕವನ್ನು 140ರಿಂದ 210ಕ್ಕೆ, ಎರಡು ವಿಷಯಗಳಿಗೆ 270ರಿಂದ 405ಕ್ಕೆ ಹಾಗೂ ಮೂರು ಮತ್ತು ಅದಕ್ಕಿಂತ ಹೆಚ್ಚಿನ ವಿಷಯಗಳಿಗೆ 400ರಿಂದ, 600ಕ್ಕೆ ಹೆಚ್ಚಿಸಲಾಗಿದೆ. ದಂಡ ಶುಲ್ಕವನ್ನು 1,320ರಿಂದ 1,980ಕ್ಕೆ ಹೆಚ್ಚಿಸಲಾಗಿದೆ. ಪ್ರಾಯೋಗಿಕ ಪರೀಕ್ಷೆಯ ಪ್ರತಿ ವಿಷಯದ ಶುಲ್ಕವನ್ನು 110ರಿಂದ 165ಕ್ಕೆ, ಅಂಕಪಟ್ಟಿ ಶುಲ್ಕವನ್ನು 50ರಿಂದ 75ಕ್ಕೆ ಹಾಗೂ ಪರೀಕ್ಷಾ ಕೇಂದ್ರ ಬದಲಾವಣೆಯ ಶುಲ್ಕವನ್ನು 2,000ರಿಂದ 3,000ಕ್ಕೆ ಹೆಚ್ಚಿಸಲಾಗಿದೆ. ಅಂಕಪಟ್ಟಿಯ ದ್ವಿತೀಯ ಪ್ರತಿಯ ಶುಲ್ಕ 1,600ರಿಂದ 2,400ಕ್ಕೆ, ತೃತೀಯ ಪ್ರತಿಯ ಶುಲ್ಕ 3,170ರಿಂದ 4,755ಕ್ಕೆ ಹಾಗೂ ತತ್ಕಾಲ್ ಅಂಕಪಟ್ಟಿ ಪಡೆಯುವ ಶುಲ್ಕ 7,920ರಿಂದ 11,880ಕ್ಕೆ ಏರಿಕೆಯಾಗಿದೆ. ದ್ವಿತೀಯ ಪಿಯುಸಿ ಅಂಕಪಟ್ಟಿ ಪರಿಶೀಲನೆಗೆ ಹೊಸದಾಗಿ 2,000 ಶುಲ್ಕ ನಿಗದಿಪಡಿಸಲಾಗಿದೆ. ಪರೀಕ್ಷಾ ಅಂಕ ಸುಧಾರಣೆಗೆ ಪಾವತಿಸಬೇಕಾದ ಶುಲ್ಕವನ್ನು 262ರಿಂದ 525ಕ್ಕೆ ಹೆಚ್ಚಿಸಲಾಗಿದೆ.

ಈ ದುಬಾರಿ ಶುಲ್ಕ ಹೆಚ್ಚಳದಿಂದಾಗಿ ಅತಿ ಹೆಚ್ಚು ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವ ಅಪಾಯವಿದೆ.

ಆದ್ದರಿಂದ, ರಾಜ್ಯ ಸರ್ಕಾರವು ಕೂಡಲೇ ತನ್ನ ಈ ವಿದ್ಯಾರ್ಥಿವಿರೋಧಿ ಆದೇಶವನ್ನು ವಾಪಸ್ ಪಡೆಯಬೇಕು ಮತ್ತು ಪರೀಕ್ಷಾ ಶುಲ್ಕ ಹೆಚ್ಚಳವನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಎಐಡಿಎಸ್‌ಓ ಬಳ್ಳಾರಿ ಜಿಲ್ಲಾ ಸಮಿತಿಯು ಆಗ್ರಹಿಸಿದೆ.

# ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಸಂಭ್ರಮ

## ಮಹಿಳಾ ಶಿಕ್ಷಣ ಮತ್ತು ಸಬಲೀಕರಣಕ್ಕೆ ಸಂಸ್ಥೆಯ ಕೊಡುಗೆ ಶ್ಲಾಘನೀಯ: ಪ್ರೊ. ವಿಜಯಾ ಕೋರಿ ಶೆಟ್ಟಿ



**ಬಳ್ಳಾರಿ, ಸೆ. 21:** ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಸುವರ್ಣ ಮಹೋತ್ಸವ ಸಂಭ್ರಮಾಚರಣೆ ವಿಜೃಂಭಣೆಯಿಂದ ನಡೆಯಿತು. ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಕತ್ಯಾಯಿನಿ ಎಂ ಮರಿದೇವಯ್ಯ ಅವರು ವೇದಿಕೆ ಮೇಲಿದ ಎಲ್ಲ ಗಣ್ಯರನ್ನು ಸ್ವಾಗತಿಸಿದರು. ಇದೇ ವೇಳೆ ಶ್ರೀಗಳಿಂದ ವೇದಿಕೆ ಮೇಲಿದ್ದ ಗಣ್ಯರಿಗೆ ಸನ್ಮಾನಿಸಿ ಆಶೀರ್ವಾದಸಿದರು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಜಯಾ ಕೋರಿ ಶೆಟ್ಟಿ ಉದ್ಘಾಟಿಸಿದರು. ಉಜ್ಜಯಿನಿ ಪೀಠದ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಸಾವಿರದ ಎಂಟು ಜಗದ್ಗುರು ಸಿದ್ದಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಹಾಗೂ ಎಮ್ಮಿಗನೂರು ಶ್ರೀಗುರು ಮಹಾಂತ ಸಂಸ್ಥಾನ ಮಠದ ಶ್ರೀಷಟಸ್ಥಲ ಬ್ರಹ್ಮ ಗುರು ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಶ್ರೀ ಜಗದ್ಗುರು ಬಸವಣ್ಣ, ಅಲ್ಲಮ್ಮ ಸುಮಂಗಲಮ್ಮ ಹಾಗೂ ದಾನಿ ತೊಗರಿ ವೀರಭದ್ರಪ್ಪ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

**ಸುವರ್ಣ ಸಿರಿ ವಿಶೇಷ ಸಂಚಿಕೆ ಬಿಡುಗಡೆ**

ಕಾಲೇಜಿನ ಐದು ದಶಕಗಳ ಶೈಕ್ಷಣಿಕ ಸೇವೆ ಮತ್ತು ಸಾಧನೆಗಳನ್ನು ದಾಖಲಿಸುವ ಸುವರ್ಣಸಿರಿ ವಿಶೇಷ ಸಂಚಿಕೆಯನ್ನು ಅಲ್ಲಂ ವೀರಭದ್ರಪ್ಪ ಅವರ ಕುಟುಂಬಸ್ಥರು ಹಾಗೂ ಗಣ್ಯರು ಬಿಡುಗಡೆ ಮಾಡಿದರು.

**ಮಹಿಳಾ ಸಬಲೀಕರಣಕ್ಕೆ ಸಂಸ್ಥೆಯ ಬದ್ಧತೆ**

ಕಾರ್ಯಕಾರಿ ಸಮಿತಿ ಸದಸ್ಯ ಚೋರನೂರು ಕೊಟ್ರಪ್ಪ ಮಾತನಾಡಿ, ಶ್ರೀಮತಿ ಅಲ್ಲಮ್ಮ ಸುಮಂಗಳಮ್ಮ ಹಾಗೂ ದಾನಿ ತೊಗರಿ ವೀರಭದ್ರಪ್ಪ ಅವರ ಶೈಕ್ಷಣಿಕ ಸೇವೆಯ ಫಲವಾಗಿ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ ಸಂಸ್ಥೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

**ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ**

ಕಾರ್ಯಕ್ರಮ ಉದ್ಘಾಟಿಸಿದ ಪ್ರೊ. ವಿಜಯಾ ಕೋರಿ ಶೆಟ್ಟಿಮಾತನಾಡಿ, ವೀರಶೈವ ವಿದ್ಯಾವರ್ಧಕ ಸಂಘವು ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಅಲ್ಲಂ ಸುಮಂಗಳಮ್ಮ ಅವರು ಶಿಕ್ಷಣ ಮತ್ತು ಮಹಿಳಾ ಸಬಲೀಕರಣಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದರು.

ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಮೊಬೈಲ್ ಮತ್ತು ಇಂಟರ್ನೆಟ್‌ನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವೈಫಲ್ಯಗಳಿಂದ ಕುಗ್ಗದೆ ಸಾಧನೆಯತ್ತ ಮುನ್ನಡೆಯಬೇಕು ಎಂದು ಕರೆ ನೀಡಿದರು. ಜ್ಞಾನ, ವ್ಯಕ್ತಿತ್ವ ನಿರ್ಮಾಣ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣ ಸಂಸ್ಥೆಯ ಮುಖ್ಯ ಉದ್ದೇಶವಾಗಬೇಕು ಎಂದು ಅವರು ತಿಳಿಸಿದರು.

**ಸರಳ ಜೀವನಕ್ಕೆ ಅಲ್ಲಂ ಸುಮಂಗಳಮ್ಮ ಮಾದರಿ**

ಅಲ್ಲಂ ವೀರಭದ್ರಪ್ಪ ಮಾತನಾಡಿ, ಶ್ರೀಮತಿ ಅಲ್ಲಮ್ಮ ಸುಮಂಗಲಮ್ಮ ಅವರು ಶ್ರೀಮಂತ ಕುಟುಂಬದಿಂದ ಬಂದಿದ್ದರೂ ಸರಳ ಜೀವನ ನಡೆಸಿದ್ದರು. ಕುಟುಂಬದ ಅಭಿವೃದ್ಧಿ ಹಾಗೂ ರಾಷ್ಟ್ರದ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿನಿಯರು ಜೀವನದಲ್ಲಿ ಉತ್ತಮ ಕಾರ್ಯಗಳನ್ನು ಮಾಡುವ ಸಂಕಲ್ಪದೊಂದಿಗೆ ಮುನ್ನಡೆಯಬೇಕು ಎಂದರು.

**ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ**

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಮಾತನಾಡಿ, ವಿದ್ಯೆ ಮತ್ತು ಧೈರ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಯಶಸ್ಸು ಸಾಧ್ಯ. ಆರೋಗ್ಯಕರ ಜೀವನಶೈಲಿಗೆ ಆದ್ಯತೆ ನೀಡಬೇಕು. ಆಹಾರದಲ್ಲಿ ಉಪ್ಪು, ಮೈದಾ ಹಾಗೂ ಅತಿಯಾದ ಕೊಬ್ಬಿನ ಅಂಶವನ್ನು ನಿಯಂತ್ರಿಸುವುದು ಅಗತ್ಯ ಎಂದು ಸಲಹೆ ನೀಡಿದರು.

# ಗಾಂಧಿಸ್ಮೃತಿ ಬೃಹತ್ ಜನಜಾಗೃತಿಗೆ ಭರದ ಸಿದ್ಧತೆ: ಕಲಬುರಗಿಯಲ್ಲಿ ಜನಜಾಗೃತಿ ವೇದಿಕೆ ಜಿಲ್ಲಾ ಪದಾಧಿಕಾರಿಗಳ ಸಭೆ ನಿರ್ಣಯ




**ಕಲಬುರಗಿ, ಸೆ. 21:** ಕಲಬುರ್ಗಿಯ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಧರ್ಮಸ್ಥಳದ ಜಿಲ್ಲಾ ಪದಾಧಿಕಾರಿಗಳ ಸಭೆಯು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ , ಜಿಲ್ಲಾ ನಿರ್ದೇಶಕರ ಕಚೇರಿಯ ಮಾತೃಶ್ರೀ ಸಭಾಂಗಣದಲ್ಲಿ ಸೋಮವಾರ ನಡೆದು ಗಾಂಧಿ ಜಯಂತಿಯ ಅಂಗವಾಗಿ ಅಕ್ಟೋಬರ್ 8 ರಂದು ಕಲಬುರಗಿಯಲ್ಲಿ "ಗಾಂಧಿ ಸ್ಮೃತಿ – ಬೃಹತ್ ಜನಜಾಗೃತಿ" ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಗಾಂಧೀಜಿ ಅವರ ಜೀವನ ಆದರ್ಶಗಳ ಪ್ರಸಾರ, ದುಶ್ಚಟ ಮುಕ್ತರಾಗಿ ನವಜೀವನ ಪ್ರಾರಂಭಿಸಿದವರ ಸಮ್ಮಿಲನ, ನಶೆಮುಕ್ತ ಭಾರತ ನಿರ್ಮಾಣ ಬೆಸನ ಮುಕ್ತ ಸಮಾಜ ನಿರ್ಮಾಣ ಮಹಿಳಾ ಜಾಗೃತಿ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳ ವಿದಾಯಕ ಕಾರ್ಯಕ್ರಮ ಗಳನ್ನು ಪ್ರತಿಬಿಂಬಿಸಲು ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಪ್ರಾದೇಶಿಕ ನಿರ್ದೇಶಕ ದಿನೇಶ್ ಪೂಜಾರಿ ಮಾತನಾಡಿ, ಗಾಂಧಿ ಜಯಂತಿ ಆಚರಣೆಯ ಮೂಲಕ ಪರಿವರ್ತನೆಯ ನವ ಸಮಾಜ ನಿರ್ಮಾಣ ಮಾಡಲು ಪ್ರೇರಣೆ ನೀಡುವಂತಾಗಲಿ ಜನಜಾಗೃತಿ ವೇದಿಕೆಯ ಕಾರ್ಯ ಯೋಜನೆಗಳು ಸಮಾಜದಲ್ಲಿ ಉತ್ತಮ ಕಾರ್ಯ ಚಟುವಟಿಕೆ ನಡೆಸುತ್ತಿದ್ದು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಗೊಂಡು ವ್ಯಸನ ಮುಕ್ತ ಸಮಾಜ ನಿರ್ಮಾಣ ವಾಗುತ್ತಿರುವುದು ಶ್ಲಾಘನೀಯ ಎಂದರು. ಕಾರ್ಯಕ್ರಮ ದಲ್ಲಿ ನವಜೀವನೋತ್ಸವ, ನವಜೀವನ ಸಮಿತಿ ಸದಸ್ಯರ ಸಭೆ, ಸ್ವಾಸ್ಯ ಸಂಕಲ್ಪ ಮದ್ಯಪಾನ ಮುಕ್ತಿ ಶಿಬಿರ ನಡೆಸುವ ಯೋಜನೆಗಳ ಕುರಿತು ರೂಪುರೇಷೆ ನಿರ್ಧರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಜನಜಾಗೃತಿ ವೇದಿಕೆ ಅಧ್ಯಕ್ಷರಾದ ಸಿಎನ್ ಬಾಬಳಗಾಂವ್ ಅಧ್ಯಕ್ಷತೆ ವಹಿಸಿ ಮಾತನಾಡಿ ಜನಜಾಗೃತಿ ವೇದಿಕೆ ಕಾರ್ಯಕ್ರಮ ಯಶಸ್ವಿ ಗೊಳಿಸಲು ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು. ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷರಾದ ಅನಿಲ್ ಕುಮಾರ್ ಡಾಂಗೆ, ಕೋಶಾಧಿ2ಕಾರಿ ಡಾ. ಸದಾನಂದ ಪೆರ್ಲ, ಚಂದ್ರಶೇಖರ ಕರ್ಜಗಿ, ಪ್ರಭಾವತಿ ಮೇತ್ರೆ, ಡಾ. ಜಯಶ್ರೀ ರೆಡ್ಡಿ ಗೀತಾ ಹತ್ತರಕಿ, ರಾಜಶೇಖರ ನೀಲಂಗಿ ಮತ್ತಿ ತರರು ಸಲಹೆ ನೀಡಿದರು ಈ ಸಂದರ್ಭದಲ್ಲಿ ಸಂಗ್ರಾಮ ಗೌಡ ಪಾಟೀಲ್,ರಾಜೇಶ್ ಅಲಮೇಲ್ಕರ್, ಚಿನ್ನುಸಾಬ್ ಗಫೂರ್ ಸಾಬ್, ಮಲ್ಲಿನಾಥ, ಅಪ್ಪಾ ಸಾಹೇಬ ತೀರ್ಥೆ, ಸೂರ್ಯಕಾಂತ್,ಸಿದ್ದು ಹಿರೇಮಠ ರೇವಣಸಿದ್ದಪ್ಪ ಪಡಶೆಟ್ಟಿ, ರಾಜಕುಮಾರ್, ಶಿವರಾಜ ತಳವಾರ, ವರದ ಸ್ವಾಮಿ ಉಪಸ್ಥಿತರಿದ್ದರು ಯೋಜನಾಧಿಕಾರಿಗಳಾದ ಸಂಗಪ್ಪ ಸಂಗಳದ, ರಾಜ ಫ್ ಅಲಿ ಮೇಲಿನ ಮನಿ ತಾಲೂಕು ವರದಿ ಮಂಡಿಸಿದರು, ಕೇಶವ ಸ್ವಾಗತಿಸಿದರು ಜಿಲ್ಲಾ ನಿರ್ದೇಶಕ ಗಣಪತಿ ಮಾಳಂಜಿ ವರದಿಯನ್ನು ಮಂಡಿಸಿದರು ರಾಜೇಶ್ ಮುಂದಿನ ಯೋಜನೆಗಳ ಬಗ್ಗೆ ತಿಳಿಸಿದರು.

# ಕೇಂದ್ರೀಯ ವಿವಿಯಲ್ಲಿ ಮಕ್ಕಳಸ್ನೇಹಿ ಗ್ರಂಥಾಲಯ ಕುರಿತು ಸರ್ಟಿಕೇಟ್ ಕೋರ್ಸ್ ಆರಂಭ

**ಕಲಬುರಗಿ, ಸೆ. 21:** ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ಕಲಿಕೆ–ಟಾಟಾ ಟ್ರಸ್ಟ್ ನಡುವಿನ ತಿಳುವಳಿಕೆ ಒಪ್ಪಂದದ ಅಡಿಯಲ್ಲಿ ರೂಪಿಸಲಾದ ಈ ಪ್ರಮಾಣಪತ್ರ ಕೋರ್ಸ್, ಕರ್ನಾಟಕದಾದ್ಯಂತ ಇರುವ ಸುಮಾರು 5623 ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಾಹಕರ ವೃತ್ತಿಪರ ಸಾಮರ್ಥ್ಯ ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು.



ಕಲಬುರಗಿಯ ಕರ್ನಾಟಕ ಕೇಂದ್ರೀಐ ವಿಶ್ವವಿದ್ಯಾಲಯದಲ್ಲಿ ಮಕ್ಕಳಸ್ನೇಹಿ ಗ್ರಂಥಾಲಯ ಕುರಿತು ಸರ್ಟಿಕೇಟ್ ಕೋರ್ಸ್‌ಗೆ ಚಾಲನೆ ನೀಡಿದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ತರಬೇತಿ ಲೈಬ್ರರಿಯನ್ನೂ ಉದ್ಘಾಟಿಸಿದರು.

ಇಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ 'ಕಲಿಕೆ–ಟಾಟಾ ಟ್ರಸ್ಟ್' ಸಹಯೋಗದೊಂದಿಗೆ ಮಕ್ಕಳ ಸ್ನೇಹಿ ಗ್ರಂಥಾಲಯಗಳ ನಿರ್ಮಾಣ ಮತ್ತು ನಿರ್ವಹಣೆ ಕುರಿತ ಹೊಸ ಪ್ರಮಾಣಪತ್ರ ಕೋರ್ಸ್ ಆರಂಭಕ್ಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ಉದ್ಘಾಟಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಮತ್ತು ತರಬೇತಿ ವಿಭಾಗದಲ್ಲಿ ಮಾದರಿ ಎಜುನೆಸ್ಟ್ ಲೈಬ್ರರಿಯನ್ನು ಉದ್ಘಾಟಿಸಿದರು.

ಈ ಪ್ರಮಾಣಪತ್ರ ಕೋರ್ಸ್‌ನಲ್ಲಿ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸು ವುದು, ಮಕ್ಕಳ ಸಾಹಿತ್ಯದ ಪರಿಚಯ, ಸೃಜನಶೀಲ ಓದುವ ಚಟುವಟಿಕೆಗಳ ಆಯೋಜನೆ, ಸಮುದಾಯದ ಓದುವ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಡಿಜಿಟಲ್ ಕಲಿಕಾ ಸಂಪನ್ಮೂಲ ಗಳನ್ನು ಪರಿಣಾಮಕಾರಿಯಾಗಿ ಬಳಸು ವುದು ಸೇರಿದಂತೆ ಹಲವು ಪ್ರಮುಖ ವಿಷಯಗಳನ್ನು ಒಳಗೊಂಡಿದೆ. ಮಕ್ಕಳು ಮತ್ತು ಯುವ ಕಲಿಯುವವರಲ್ಲಿ ಓದು ವಿಕೆ, ಸೃಜನಶೀಲತೆ, ಅನ್ವೇಷಣೆ ಹಾಗೂ ಜ್ಞಾನ ಸೃಷ್ಟಿಯನ್ನು ಉತ್ತೇಜಿಸುವ ಮಕ್ಕಳ ಸ್ನೇಹಿ ಮತ್ತು ಕಲಿಕಾ–ಆಧಾರಿತ ಸ್ಥಳವಾಗಿ 'ಎಡುನೆಸ್ಟ್ ಲೈಬ್ರರಿ'ಯನ್ನು ರೂಪಿಸಲಾಗಿದೆ. ಸಮುದಾಯ ಗ್ರಂಥಾಲ ಯಗಳನ್ನು ಚೈತನ್ಯಶೀಲ, ಆಕರ್ಷಕ ಹಾಗೂ ಕಲಿಕೆಗೆ ಪೂರಕವಾದ ಸ್ಥಳಗಳ ನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ಈ ಕ್ರಮವನ್ನು ಅವರು ಶ್ಲಾಘಿಸಿ ದರು.


ಮಗು–ಕೇಂದ್ರಿತ ಹಾಗೂ ಸಮು ದಾಯ–ಆಧಾರಿತ ಗ್ರಂಥಾಲಯ ಪದ್ಧತಿಗ ಳಿಗೆ ಒತ್ತು ನೀಡುವಂತೆ, ರಾಷ್ಟ್ರೀಯ ಶಿಕ್ಷಣ ನೀತಿ 2020 ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (ಓಖಕಿಈ)ಗೆ ಅನುಗುಣವಾಗಿ ಈ ಪ್ರಮಾಣಪತ್ರ ಕೋರ್ಸ್ ಅನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ್ ಅವರು ಮಾತನಾಡಿ, ಜೀವನದಲ್ಲಿ ಯಶಸ್ಸು ಸಾಧಿಸಲು ಪ್ರಾಮಾಣಿಕತೆ, ಶಿಸ್ತು ಹಾಗೂ ಕಠಿಣ ಪರಿಶ್ರಮದ ಮಹತ್ವವನ್ನು ಒತ್ತಿಹೇಳಿದರು. ವಿದ್ಯಾರ್ಥಿಗಳು ತಮ್ಮ ಪ್ರಯತ್ನಗಳಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಯಶಸ್ಸಿಗಾಗಿ ಅಡ್ಡದಾರಿಗಳನ್ನು ಹುಡುಕದೆ, ಪರಿಶ್ರಮ ಮತ್ತು ಶಿಸ್ತಿನೊಂದಿಗೆ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಡಾ. ಸುರೇಶ್ ಅನುಗಂಟಿ ಅವರು ರೀಲ್ಸ್ ಸ್ಕ್ರೋಲ್ ಮಾಡುವುದೋ, ಪುಸ್ತಕದ ಪುಟಗಳನ್ನು ತಿರುಗಿಸುವುದೋ: ನಾವೇನು ಕಳೆದುಕೊಳ್ಳುತ್ತಿದ್ದೇವೆ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಡಿಜಿಟಲ್ ಯುಗದಲ್ಲಿ ಮಕ್ಕಳು ಮತ್ತು ಯುವಜನರ ಬದಲಾಗುತ್ತಿರುವ ಓದುವ ಹವ್ಯಾಸಗಳು, ಸಾಮಾಜಿಕ ಜಾಲತಾಣಗಳ ಪ್ರಭಾವ ಹಾಗೂ ಅರ್ಥಪೂರ್ಣ ಓದುವಿಕೆಯನ್ನು ಉತ್ತೇಜಿಸುವ ಅಗತ್ಯದ ಕುರಿತು ಹೇಳಿದರು.

# ಬಸವಕಲ್ಯಾಣ ಅನುಭವ ಮಂಟಪ ನಿರ್ವಹಣೆ ಜಾಗತಿಕ ಲಿಂಗಾಯತ ಮಹಾಸಭೆಗೆ ವಹಿಸಲು ಆಗ್ರಹ

**ಬೆಳಗಾವಿ, ಸೆ.21:** ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ನಿರ್ಮಿಸುತ್ತಿರುವ ಅನುಭವ ಮಂಟಪ ನಿರ್ವಹಣೆ ಹೊಣೆಯನ್ನು ಜಾಗತಿಕ ಲಿಂಗಾಯತ ಮಹಾಸಭೆಗೆ ವಹಿಸಿಕೊಡಬೇಕು ಎಂಬ ನಿರ್ಣಯವನ್ನು, ಇಂದಿಲ್ಲಿ ಮುಕ್ತಾಯವಾದ ಜಾಗತಿಕ ಲಿಂಗಾಯತ ಮಹಾಸಭೆಯ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ರಾಷ್ಟ್ರೀಯ ಕಾರ್ಯಕಾರಿಣಿ ಮಂಡಳಿ ಸಭೆಯಲ್ಲಿ ಕೈಗೊಳ್ಳಲಾಯಿತು.




ಯಡಿಯೂರಪ್ಪ ನೇತೃತ್ವದ ಸರ್ಕಾರ ಯೋಜಿಸಿ ಆರಂಭಿಸಿದ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆರ್ಥಿಕ ನೆರವಿನೊಂದಿಗೆ ಆರಂಭವಾದ ಅನುಭವ ಮಂಟಪ ನಿರ್ಮಾಣ ಕಾಮಗಾರಿ ಬೇಗ ಪೂರ್ಣಗೊಳಿಸಿ, ಅದರ ನಿರ್ವಹಣೆಯ ಸಂಪೂರ್ಣ ಹೊಣೆಗಾರಿಕೆಯನ್ನು ಜಾಗತಿಕ ಲಿಂಗಾಯತ ಮಹಾಸಭೆಗೆ ನೀಡಬೇಕು. ಮಂಟಪದಲ್ಲಿ ಯಾವ್ಯಾವ ಚಟುವಟಿಕೆ ಕೈಗೊಳ್ಳಬೇಕು ಎಂಬ ನಿರ್ಧಾರ ಮಹಾಸಭೆಗೇ ಬಿಡಬೇಕು. ಈ ಕುರಿತು ಡಿಸೆಂಬರ್ ಅಂತ್ಯದೊಳಗೆ ಸರ್ಕಾರಕ್ಕೆ ಮನವಿ ಸಲ್ಲಿಸಲು ಮಹಾಸಭೆಯ ನಿರ್ಧಾರ ಪ್ರಕಟಿಸಲಾಯಿತು.

ಇದಕ್ಕೂ ಮುನ್ನ ಜಾಗತಿಕ ಲಿಂಗಾಯತ ಮಹಾಸಭೆ, ಬಸವ ಪರ ಮಠಾಧಿಪತಿಗಳ ಒಕ್ಕೂಟ ಹಾಗೂ ಬಸವ ಪರವಾಗಿರುವ ಎಲ್ಲ ಸಂಘಟನೆಗಳ ಪದಾಧಿಕಾರಿಗಳು, 'ಅನುಭವ ಮಂಟಪ ನಿರ್ಮಾಣವಾದ ನಂತರ ಮುಂದೇನು?' ಎಂಬುದರ ಕುರಿತು ಚರ್ಚೆ ನಡೆಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಿದರು.

ಮಹಾಸಭೆ ರಾಷ್ಟ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಮಾದಾರ, ಸಿಖ್ ಧರ್ಮಕ್ಷೇತ್ರವಾದ ಅಮೃತಸರ್‌ನ ಸ್ವರ್ಣ ಮಂದಿರದ ಮಾದರಿಯಲ್ಲಿ ಅನುಭವ ಮಂಟಪದಲ್ಲಿಯೂ ಚಟುವಟಿಕೆ ನಡೆಯಬೇಕು. ಅದರ ಅಧ್ಯಯನಕ್ಕೆಂದೇ ಜಾಗತಿಕ ಲಿಂಗಾಯತ ಮಹಾಸಭೆಯ ಎಲ್ಲ ಜಿಲ್ಲಾಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಸ್ವರ್ಣಮಂದಿರ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಅನುಭವ ಮಂಟಪ ನಿರ್ಮಾಣವಾಗುತ್ತಿರುವ ಸ್ಥಳಕ್ಕೆ ಭೇಟಿ ನೀಡಲಾಗುವುದು ಎಂದು ಹೇಳಿದರು.

ಎನ್.ಎಸ್.ಕೆಂಪಗೌಡರ ಅಧ್ಯಕ್ಷತೆ ವಹಿಸಿದ್ದರು. ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ರೊಟ್ಟಿ ಸ್ವಾಗತಿಸಿದರು. ಮಾಜಿ ಶಾಸಕ ಶರಣಪ್ಪನವರ, ಪರಮೇಶ್ವರಪ್ಪ ಕಾಗಿನೆಲೆ, ಎಂ.ಮಹಾದೇವಪ್ಪ, ಬಸವರಾಜ್ ಹರ್ನಾಳ್, ಎಂ.ಶಿವಕುಮಾರ್ ಉಪಸ್ಥಿತರಿದ್ದರು. ಮಹಾಸಭೆ ರಾಷ್ಟ್ರೀಯ ಘಟಕದ ಉಪಾಧ್ಯಕ್ಷ ಎಂ.ವಿ.ಗೊಂಗಡಶೆಟ್ಟಿ ನಿರ್ವಹಿಸಿದರು.

# ಹೈದರಾಬಾದ್ ವಿಮೋಚನಾ ದಿನಾಚರಣೆ: ಮೂರು ರಾಜ್ಯಗಳ ದೇಶಭಕ್ತರ ಅಪರೂಪದ ಸಮಾಗಮ

**ಬೀದರ, ಸೆ. 21 :** ಧಾರ್ಮಿಕ ಭಕ್ತಿ, ದೇಶಭಕ್ತಿ ಹಾಗೂ ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದ ಸ್ಮರಣೆಯನ್ನು ಒಂದೇ ವೇದಿಕೆಯಲ್ಲಿ ಬೆಸೆಯುವ ಮೂಲಕ ಆಳಂದ–ಉಮರ್ಗಾ ಮಧ್ಯದ ಖಜೂರಿ ಗ್ರಾಮದಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪರಮಪೂಜ್ಯ ಹವಾ ಮಲ್ಲಿನಾಥ ಮಹಾರಾಜ್ ನಿರಗುಡಿ ಸಾನಿಧ್ಯದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ವಿವಿಧ ಭಾಗಗಳಿಂದ ಸ್ವಾತಂತ್ರ್ಯ ಹೋರಾಟಗಾರ ದೇಶಭಕ್ತರು, ಸೇವಾ ಸಮಿತಿ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಆಗಮಿಸಿದ್ದರು. ಸಾವಿರಾರು ಜನರ ಉಪಸ್ಥಿತಿಯಿಂದ ಕಾರ್ಯಕ್ರಮದ ಸ್ಥಳವು ಭಕ್ತಿ ಮತ್ತು ರಾಷ್ಟ್ರಭಕ್ತಿಯ ವಾತಾವರಣದಿಂದ ಕಂಗೊಳಿಸಿತು.

ಕಾರ್ಯಕ್ರಮಕ್ಕೆ ಗಣೇಶ ಭಗವಂತನ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು. ನಂತರ ಭಾರತದ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚಿಸಲಾಯಿತು. ರಾಷ್ಟ್ರಗೀತೆ ಹಾಗೂ 'ವಂದೇ ಮಾತರಂ' ಗಾಯನದ ಮೂಲಕ ದೇಶದ ಏಕತೆ, ಸಂವಿಧಾನ ಮೌಲ್ಯಗಳು ಹಾಗೂ ರಾಷ್ಟ್ರಭಕ್ತಿಯ ಸಂದೇಶವನ್ನು ಸಾರಲಾಯಿತು. ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದ ಐತಿಹಾಸಿಕ ಹಿನ್ನೆಲೆಯನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ 'ವಿಮೋಚನೆ' ಎಂಬ ನಾಟಕವನ್ನು ಪ್ರದರ್ಶಿಸಲಾಯಿತು. ಹೋರಾಟದ ದಿನಗಳಲ್ಲಿ ಈ ಭಾಗದ ಜನರು ಅನುಭವಿಸಿದ ಸಂಕಷ್ಟಗಳು,



ಬೀದರ–ಕಲಬುರಗಿ ಹಾಗೂ ಮಹಾರಾಷ್ಟ್ರ ಗಡಿ ಗ್ರಾಮ ಖಜೂರಿಯಲ್ಲಿ ಹೈದರಾಬಾದ ಕರ್ನಾಟಕ ವಿಮೋಚನಾ ದಿನಾಚರಣೆ ಕಾಯ್ಕ್ರಮ ಶ್ರೀ ಹವಾ ಮಲ್ಲಿನಾಥ ಮಹಾರಾಜ್ ನಿರಗುಡಿ ಅವರ ನೇತೃತ್ವದಲ್ಲಿ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಮೂರು ರಾಜ್ಯಗಳ ದೇಶಭಕ್ತರೊಂದಿಗೆ ಆಚರಿಸಲಾಯಿತು.

ಹೋರಾಟಗಾರರ ತ್ಯಾಗ ಮತ್ತು ವಿಮೋಚನೆಯ ಮಹತ್ವವನ್ನು ನಾಟಕದ ಮೂಲಕ ಸ್ಮರಿಸಲಾಯಿತು.

**ಭಕ್ತಿಯ ಜೊತೆಗೆ ದೇಶಭಕ್ತಿಯ ಭಾವನೆ:** ಈ ಸಂದರ್ಭದಲ್ಲಿ ಮಾತನಾಡಿದ ಹವಾಗಿಲಿಂಗ ಶಿವಾಚಾರ್ಯ ಹಲ್ಬರ್ಗಾ ಅವರು, ಭಕ್ತಿಗಾಗಿ ಆಗಮಿಸಿದ ಅಕ್ಕ–ತಂಗಿಯರು, ಅಣ್ಣ–ತಮ್ಮಂದಿರು ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಒಂದೆಡೆ ಸೇರಿರುವುದು ಸಂತಸದ ಸಂಗತಿ ಎಂದರು.

ಸಾವಿರಾರು ಜನರು ಒಂದೆಡೆ ಸೇರಿರುವ ಈ ದೃಶ್ಯವು ಧಾರ್ಮಿಕ ಭಕ್ತಿಯೊಂದಿಗೆ ದೇಶಭಕ್ತಿಯ ಭಾವನೆಯನ್ನೂ ಪ್ರತಿಬಿಂಬಿಸುತ್ತಿದೆ. ದೇಶಕ್ಕಾಗಿ ಹೋರಾಡಿದ ಮಹನೀಯರ ತ್ಯಾಗವನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮೂಲಕ ರಾಷ್ಟ್ರದ ಬಗ್ಗೆ ಗೌರವ ಮತ್ತು ಜವಾಬ್ದಾರಿಯ ಮನೋಭಾವ ಬೆಳೆಸಬೇಕಾಗಿದೆ ಎಂದು ಅವರು ಹೇಳಿದರು.

**ತ್ಯಾಗ–ಸೇವೆಗೆ ಶ್ರೇಷ್ಠ ಭಾರತ ಪುರಸ್ಕಾರ :** ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದ ನೆನಪಿನೊಂದಿಗೆ ದೇಶಕ್ಕಾಗಿ ಸೇವೆ ಸಲ್ಲಿಸಿದವರನ್ನು ಗೌರವಿಸುವ ವಿಶೇಷ ಕಾರ್ಯಕ್ರಮವೂ ನಡೆಯಿತು.

**ಮೂರು ರಾಜ್ಯಗಳ ಭಕ್ತರ ಸಮಾಗಮ:** ಕರ್ನಾಟಕ ಮಾತ್ರವಲ್ಲದೆ ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಿಂದಲೂ ಭಕ್ತರು ಆಗಮಿಸಿದ್ದರು. ಗಡಿ ಪ್ರದೇಶಗಳ ಜನರ ನಡುವೆ ಧಾರ್ಮಿಕ ಹಾಗೂ ಸಾಮಾಜಿಕ ಬಾಂಧವ್ಯ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮವು ವೇದಿಕೆಯಾಯಿತು.

ವಿವಿಧ ಜಿಲ್ಲೆಗಳು ಮತ್ತು ತಾಲೂಕುಗಳಿಂದ ಆಗಮಿಸಿದ್ದ ಸೇವಾ ಸಮಿತಿ ಪದಾಧಿಕಾರಿಗಳು ಕಾರ್ಯಕ್ರಮದ ವ್ಯವಸ್ಥೆಯಲ್ಲಿ ಭಾಗವಹಿಸಿದ್ದರು. ಮೂರು ರಾಜ್ಯಗಳ ಭಕ್ತರು ಒಂದೇ ಸ್ಥಳದಲ್ಲಿ ಸೇರಿ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಮಹಿಳಾ ಭಕ್ತರಿಗೆ ಸೀರೆ, ಪುರುಷರಿಗೆ ಶಾಲು: ಗೌರವ: ಕಾರ್ಯಕ್ರಮಕ್ಕೆ ಆಗಮಿಸಿದ ಸಹ ಸ್ತ್ರಾರು ಮಹಿಳಾ ಭಕ್ತರಿಗೆ ಸೀರೆ ಹಾಗೂ ಪುರುಷ ಭಕ್ತರಿಗೆ ಶಾಲು ಹೊದಿಸಿ ಪೂಜ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು. ಭಕ್ತರೊಂದಿಗೆ ಆತ್ಮೀಯವಾಗಿ ಬೆರೆತು ಆಶೀರ್ವಾದ ನೀಡಿದ ಪೂಜ್ಯರ ನಡೆ ಭಕ್ತರಲ್ಲಿ ಸಂತಸ ಮೂಡಿಸಿತು.

ವಿವಿಧ ಮಠಾಧೀಶರು, ಸಾಧಕರ ಉಪಸ್ಥಿತಿ: ಕಾರ್ಯಕ್ರಮದಲ್ಲಿ ಹವಾಗಿಲಿಂಗ ಶಿವಾಚಾರ್ಯ ಹಲ್ಬರ್ಗಾ, ಗಂಗಾಧರ ಶಿವಾಚಾರ್ಯ ಬೀದರ್, ಚಾಂಬಳ ಶ್ರೀಗಳು, ಸಿಂದನಕೆರ ಶ್ರೀಗಳು, ಸದ್ರೃ ಪಾನಂದ್ ಮಲಚಾಪುರ, ಕುಮಾರ ದೇವರು ಕನ್ನೇರಿ ಸಾಧಕರು ಹಾಗೂ ಅಮೃತ್ ದೇವಿ ಮುತ್ಯಾ ಕೌಟಾ ಸೇರಿದಂತೆ ವಿವಿಧ ಮಠಾಧೀಶರು, ಸಾಧಕರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲೆ ಹಾಗೂ ವಿವಿಧ ತಾಲೂಕುಗಳ ಜೈ ಭಾರತ ಮಾತಾ ಸೇವಾ ಸಮಿತಿ ಪದಾಧಿಕಾರಿಗಳು ಸೇರಿದಂತೆ ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಸೇವಾ ಸಮಿತಿ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ವಿಮೋಚನಾ ಹೋರಾಟದ ಸ್ಮರಣೆ ಮುಂದಿನ ಪೀಳಿಗೆಗೆ ದಾರಿ :** ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವು ಕೇವಲ ಒಂದು ಆಚರಣೆಯ ದಿನವಾಗಿರದೆ, ಈ ಭಾಗದ ಜನರು ಅನುಭವಿಸಿದ ಐತಿಹಾಸಿಕ ಹೋರಾಟ ಮತ್ತು ತ್ಯಾಗವನ್ನು ಸ್ಮರಿಸುವ ದಿನವಾಗಿದೆ. ಧಾರ್ಮಿಕ ಕಾರ್ಯಕ್ರಮದೊಂದಿಗೆ ವಿಮೋಚನಾ ಹೋರಾಟದ ಇತಿಹಾಸವನ್ನು ನಾಟಕದ ಮೂಲಕ ಜನರಿಗೆ ಪರಿಚಯಿಸಿರುವುದು ಕಾರ್ಯಕ್ರಮದ ವಿಶೇಷತೆಯಾಯಿತು.

ಭಕ್ತಿ ಮತ್ತು ದೇಶಭಕ್ತಿಯನ್ನು ಒಟ್ಟಿಗೆ ಕೊಂಡೊಯ್ಯುವ ಮೂಲಕ ಸಮಾಜದಲ್ಲಿ ರಾಷ್ಟ್ರೀಯ ಏಕತೆ, ಸೇವಾ ಮನೋಭಾವ ಮತ್ತು ಪರಸ್ಪರ ಗೌರವದ ಸಂದೇಶವನ್ನು ಸಾರುವ ಪ್ರಯತ್ನ ಈ ಕಾರ್ಯಕ್ರಮದಲ್ಲಿ ಕಂಡುಬಂತು.

ಪರಮಪೂಜ್ಯ ಹವಾ ಮಲ್ಲಿನಾಥ ಮಹಾರಾಜ್ ನಿರಗುಡಿ ಅವರ ಸಾನಿಧ್ಯದಲ್ಲಿ ನಡೆದ ಈ ಸಮಾರಂಭವು ಮೂರು ರಾಜ್ಯಗಳ ಭಕ್ತರು ಹಾಗೂ ದೇಶಭಕ್ತರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ವಿಮೋಚನಾ ಹೋರಾಟದ ಸ್ಮರಣೆ–ಭಕ್ತಿ–ರಾಷ್ಟ್ರಭಕ್ತಿ–ಸೇವಾ ಮನೋಭಾವಗಳ ಸಂಗಮವಾಗಿ ಗಮನ ಸೆಳೆಯಿತು.

# ಎಸ್‌ಐಆರ್: ಸಿಎಂ, ಸೇನಾ ಮುಖ್ಯಸ್ಥರು ಸೇರಿ ಪ್ರಮುಖರಿಗೆ ನೋಟಿಸ್


## 33.13 ಲಕ್ಷ ಮತದಾರರಿಗೆ ನೋಟಿಸ್; ಹೆಸರು ಅಳಿಸುವ ಅಂತಿಮ ನಿರ್ಧಾರವಲ್ಲ

**ನವದೆಹಲಿ,ಸೆ.21:** ದೆಹಲಿಯಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಗಹನ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ, ಚುನಾವಣಾ ಆಯುಕ್ತ ಎಸ್.ಎಸ್. ಸಂಧು ಸೇರಿದಂತೆ ಹಲವು ಪ್ರಮುಖ ವ್ಯಕ್ತಿಗಳಿಗೆ ನೋಟಿಸ್ ನೀಡಲಾಗಿದೆ.

ದೆಹಲಿಯಲ್ಲಿ 97 ಲಕ್ಷಕ್ಕೂ ಹೆಚ್ಚು ಮತದಾರರನ್ನು ಒಳಗೊಂಡ ಕರಡು ಮತದಾರರ ಪಟ್ಟಿ ಪ್ರಕಟವಾಗಿದ್ದು, ಖಖಖ ವೇಳೆ ಕಂಡುಬಂದ ದಾಖಲೆಗಳ ವ್ಯತ್ಯಾಸಗಳ ಹಿನ್ನೆಲೆಯಲ್ಲಿ 33.13 ಲಕ್ಷ ನೋಟಿಸ್‌ಗಳನ್ನು ನೀಡಲಾಗಿದೆ.

ಎಸ್‌ಐಆರ್ ವೇಳೆ ಮತದಾರರು ಸಲ್ಲಿಸಿದ ನ್ಯೂಮರೇಷನ್ ಅರ್ಜಿ ಮಾಹಿತಿಯನ್ನು ಹಿಂದಿನ 2002ರ ಖಖಖ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಮಾಡಲಾಗುತ್ತಿದೆ. ಹಲವು ಪ್ರಕರಣಗಳಲ್ಲಿ ಹೆಸರು ಅಥವಾ ಕಾಗದಪತ್ರಗಳ ವಿವರಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಕೆಲವು ಮತದಾರರ ಪ್ರಸ್ತುತ ದಾಖಲೆಗಳು 2002ರ ಪಟ್ಟಿಯೊಂದಿಗೆ ಮ್ಯಾಪ್ ಆಗಿಲ್ಲ. ಇಂತಹ ಪ್ರಕರಣಗಳನ್ನು ಮ್ಯಾಪಿಂಗ್ ಎಂದು ಪರಿಗಣಿಸಿ ನೋಟಿಸ್ ನೀಡಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಚುನಾವಣಾ ಆಯುಕ್ತ ಎಸ್.ಎಸ್. ಸಂಧು ಅವರಿಗೆ ದೆಹಲಿ ಕ್ಯಾಂಟ್ ವಿಧಾನಸಭಾ ಕ್ಷೇತ್ರದಲ್ಲಿ ನೋಟಿಸ್ ನೀಡಲಾಗಿತ್ತು. ಅವರ ಹೆಸರಿನಲ್ಲಿ ಕಂಡುಬಂದ ವ್ಯತ್ಯಾಸವೇ



ನೋಟಿಸ್ಗೆ ಕಾರಣವಾಗಿದೆ. ನಂತರ ಅವರು ಸಲ್ಲಿಸಿದ ವಿವರಗಳು ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಅವರ ಮತದಾರರ ದಾಖಲೆಯನ್ನು ಮಾನ್ಯಗೊಳಿಸಲಾಗಿದೆ. ಅಂತಿಮ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರಿಸಲು ಇರಿಸಲಾಗಿದೆ. ಅಂತಿಮ ಪಟ್ಟಿ ನವೆಂಬರ್ 4ರಂದು ಪ್ರಕಟವಾಗಲಿದೆ.

**ಕೇಜ್ರಿವಾಲ್ ಕುಟುಂಬಕ್ಕೂ ನೋಟಿಸ್**

ಮಾಜಿ ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್, ಅವರ ಪತ್ನಿ ಸುನೀತಾ ಕೇಜ್ರಿವಾಲ್, ಪುತ್ರ ಪುಲ್ಕಿತ್ ಕೇಜ್ರಿವಾಲ್ ಹಾಗೂ ಅವರ ತಂದೆ-ತಾಯಿ ಗೋಬಿಂದ್ ರಾಮ್ ಕೇಜ್ರಿವಾಲ್ ಮತ್ತು ಗೀತಾ ದೇವಿ ಅವರಿಗೂ ನೋಟಿಸ್ ನೀಡಲಾಗಿದೆ. ಇವರನ್ನು ಹಿಂದಿನ ಎಸ್‌ಐಆರ್ ಪಟ್ಟಿಯೊಂದಿಗೆ ಅನ್‌ಮ್ಯಾಪ್ಡ್ ವಿಭಾಗದಲ್ಲಿ ಇರಿಸಲಾಗಿತ್ತು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಮಾಜಿ ದೆಹಲಿ ಮಾಜಿ ಡಿಸಿಎಂ ಮನೀಷ್ ಸಿಸೋಡಿಯಾ, ಮಾಜಿ ಜೆಎನ್ಯು ಕುಲಪತಿ ಎಂ. ಜಗದೀಶ್ ಕುಮಾರ್, ಮಾಜಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್, ಮಾಜಿ ನೀತಿ ಆಯೋಗ ಉಪಾಧ್ಯಕ್ಷ ಅರವಿಂದ್ ಪನಗಢಿಯಾ, ಸೆಬಿ ಅಧ್ಯಕ್ಷ ತುಹಿನ್ ಕಾಂತ ಪಾಂಡೆ, ಮಾಜಿ ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ, ಸಿಬಿಐ ನಿರ್ದೇಶಕ ಪ್ರವೀಣ್ ಸೂದ್, ವಿದೇಶಾಂಗ ಸಚಿವ ಎಸ್. ಜೈಶಂಕರ್, ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಸೇರಿದಂತೆ ಹಲವು ಗಣ್ಯರ ಹೆಸರುಗಳು ನೋಟಿಸ್ ಪಡೆದವರ ಪಟ್ಟಿಯಲ್ಲಿ ಕಾಣಿಸಿಕೊಂಡಿವೆ.

ಎಸ್‌ಐಆರ್ ನೋಟಿಸ್ ಬಂದಿರುವುದರಿಂದ ಮತದಾರರ ಪಟ್ಟಿಯಿಂದ ಹೆಸರು ಅಂತಿಮವಾಗಿ ತೆಗೆದುಹಾಕಲಾಗಿದೆ ಎಂದರ್ಥವಲ್ಲ ಎಂದು ದೆಹಲಿ ಮುಖ್ಯ ಚುನಾವಣಾಧಿಕಾರಿ ಕಚೇರಿ ಸ್ಪಷ್ಟಪಡಿಸಿದೆ. ಹೆಸರು ತೆಗೆದುಹಾಕುವ ಮೊದಲು ಸಂಬಂಧಪಟ್ಟ ಮತದಾರರಿಗೆ ತಮ್ಮ ವಾದ ಮಂಡಿಸಲು ಅವಕಾಶ ನೀಡಲಾಗುತ್ತದೆ. ಬಳಿಕ ಕಾರಣಸಹಿತ ಹಾಗೂ ಮೇಲ್ಮನವಿ ಮಾಡಬಹುದಾದ ಆದೇಶ ಹೊರಡಿಸಲಾಗುತ್ತದೆ.

**ಕರಡು ಪಟ್ಟಿಯಿಂದ 47 ಲಕ್ಷಕ್ಕೂ ಹೆಚ್ಚು ಹೆಸರುಗಳು ಹೊರಗೆ**

ಖಖಖ ಅಡಿಯಲ್ಲಿ ಪ್ರಕಟಿಸಲಾದ ಕರಡು ಮತದಾರರ ಪಟ್ಟಿಯಿಂದ 47 ಲಕ್ಷಕ್ಕೂ ಹೆಚ್ಚು ಹೆಸರುಗಳು ಹೊರಬಿದ್ದಿವೆ. ಆದರೆ ಕರಡು ಪಟ್ಟಿಯಲ್ಲಿ ಹೆಸರು ಇಲ್ಲದಿರುವುದು ಅಂತಿಮ ನಿರ್ಧಾರವಲ್ಲ. ಅರ್ಹ ಮತದಾರರು ತಮ್ಮ ಹೆಸರು ಸೇರಿಸಲು ಹಕ್ಕು ಮತ್ತು ಆಕ್ಷೇಪಣೆ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸಬಹುದು.

# ಸೋಮನಾಥ ದೇವಸ್ಥಾನ, ಬಿಜೆಪಿ ಕಚೇರಿಗೆ ಬಾಂಬ್ ಬೆದರಿಕೆ

**ಅಹಮದಾಬಾದ್,ಸೆ.21:** ಗುಜರಾತ್‌ನ ಪ್ರಮುಖ ಸ್ಥಳಗಳಾದ ಸೋಮನಾಥ ದೇವಸ್ಥಾನ ಹಾಗೂ ಬಿಜೆಪಿ ಕಚೇರಿಗಳನ್ನು ಬಾಂಬ್ ಸ್ಫೋಟಿಸಿ ಧ್ವಂಸ ಮಾಡುವುದಾಗಿ ಬೆದರಿಕೆ ಹಾಕಿದ ಇ-ಮೇಲ್ವೊಂದು ಪೊಲೀಸರಿಗೆ ಬಂದಿದ್ದು, ಭದ್ರತಾ ವ್ಯವಸ್ಥೆ ತೀವ್ರಗೊಳಿಸಲಾಗಿದೆ. ಸೋಮವಾರ ಬೆಳಗ್ಗೆ ಈ ಬೆದರಿಕೆ ಮಾಹಿತಿ ಲಭ್ಯವಾದ ಬಳಿಕ ಪೊಲೀಸ್, ಅಗ್ನಿಶಾಮಕ ದಳ ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ ಕಾರ್ಯಾಚರಣೆಗೆ ಇಳಿದರು.

ಅಹಮದಾಬಾದ್ನ ಖಾನ್ಪುರದಲ್ಲಿರುವ ಬಿಜೆಪಿ ಕಚೇರಿಗೆ ಬೆದರಿಕೆ ಇ-ಮೇಲ್ ಬಂದಿದ್ದು, ಇದೇ ಸಂದೇಶದಲ್ಲಿ ಸೋಮನಾಥ ದೇವಸ್ಥಾನ ಹಾಗೂ ಕೋಬಾ ಪ್ರದೇಶದಲ್ಲಿರುವ ಬಿಜೆಪಿ ಕಚೇರಿಯನ್ನೂ ಗುರಿಯಾಗಿಸುವುದಾಗಿ ಉಲ್ಲೇಖಿಸಲಾಗಿದೆ. ಮಾಹಿತಿ ದೊರೆತ ತಕ್ಷಣ ಖಾನ್ಪುರ ಬಿಜೆಪಿ ಕಚೇರಿಯಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಅಗ್ನಿಶಾಮಕ ಸಿಬ್ಬಂದಿ ವ್ಯಾಪಕ ತಪಾಸಣೆ ನಡೆಸಿದರು. ಸೋಮನಾಥ ದೇವಸ್ಥಾನ ಮತ್ತು ಕೋಬಾ ಬಿಜೆಪಿ ಕಚೇರಿಯಲ್ಲೂ ಭದ್ರತಾ ತಪಾಸಣೆ ಕೈಗೊಳ್ಳಲಾಯಿತು.

ಬೆದರಿಕೆ ಇ-ಮೇಲ್‌ನಲ್ಲಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಬಿಜೆಪಿ ಕಚೇರಿಗಳು, ಪೊಲೀಸ್ ಸಿಬ್ಬಂದಿ ಹಾಗೂ ರಾ ಸಂಸ್ಥೆಯನ್ನೂ ಗುರಿಯಾಗಿಸುವುದಾಗಿ ಹೇಳಲಾಗಿದೆ. ವಿವಿಧ ಸ್ಥಳಗಳಲ್ಲಿ ಬಾಂಬ್‌ಗಳನ್ನು ಇರಿಸಿರುವುದಾಗಿ ಇ-ಮೇಲ್‌ನಲ್ಲಿ



ಹೇಳಿಕೊಳ್ಳಲಾಗಿದೆ. ಇ-ಮೇಲ್ನಲ್ಲಿ ಆಕ್ಷೇಪಾರ್ಹ ಘೋಷಣೆಗಳನ್ನೂ ಬಳಸಲಾಗಿದೆ.

ಅಹಮದಾಬಾದ್ ಪೊಲೀಸ್ ಎಸಿಪಿ ಅದ್ವೈತ್ ಗಾಂಧಿ ನೀಡಿದ ಮಾಹಿತಿಯಂತೆ, ಬೆಳಗ್ಗೆ ಸುಮಾರು 9 ಗಂಟೆಗೆ ಗಾಂಧಿನಗರದ ರಾಜ್ಯ ಗುಪ್ತಚರ ದಳದಿಂದ ಖಾನ್ಪುರ ಬಿಜೆಪಿ ಕಚೇರಿಗೆ ಬಾಂಬ್ ಬೆದರಿಕೆ ಬಂದಿರುವ ಮಾಹಿತಿ ಪೊಲೀಸರಿಗೆ ಲಭಿಸಿತು. ಬಳಿಕ ಃಆಆಖ ತಂಡ ಕಚೇರಿಯ ಸಂಪೂರ್ಣ ಪರಿಶೀಲನೆ ನಡೆಸಿತು. ತಪಾಸಣೆಯಲ್ಲಿ ಯಾವುದೇ ಶಂಕಾಸ್ಪದ ವಸ್ತು ಪತ್ತೆಯಾಗಿಲ್ಲ ಹಾಗೂ ಸದ್ಯ ಪರಿಸ್ಥಿತಿ ಸಹಜವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆದರಿಕೆ ಇ-ಮೇಲ್ ಮೂಲಕ, ಅದನ್ನು ಕಳುಹಿಸಿದವರು ಯಾರು ಮತ್ತು ಬೆದರಿಕೆ ಎಷ್ಟು ವಾಸ್ತವಿಕ ಎಂಬುದರ ಕುರಿತು ಪೊಲೀಸರು ಹಾಗೂ ಭದ್ರತಾ ಸಂಸ್ಥೆಗಳು ತನಿಖೆ ಮುಂದುವರಿಸಿವೆ.

# ವಿದ್ಯಾರ್ಥಿನಿ ಮೇಲೆ ಗೂಂಡಾಗಿರಿ: ಬಿಹಾರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ಕಿಡಿ

**ನವದೆಹಲಿ, ಸೆ. 21:** ಬಿಹಾರದ ಜಮುಯಿ ಜಿಲ್ಲೆಯಲ್ಲಿ 10ನೇ ತರಗತಿಯ ಇಬ್ಬರು ಅಪ್ರಾಪ್ತ ವಿದ್ಯಾರ್ಥಿಗಳಿಗೆ ಸಾರ್ವಜನಿಕ ರಸ್ತೆಯಲ್ಲಿ ಗೂಂಡಾಗಿರಿ ನಡೆಸಿ, ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆಘಾತಕಾರಿ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಈ ಘಟನೆಯನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರವಾಗಿ ಖಂಡಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವೀಡಿಯೋದಲ್ಲಿ, ಸಂಜೆ ವೇಳೆಯಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದ 10ನೇ ತರಗತಿಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯನ್ನು ಗುಂಪೊಂದು ಬಲವಂತವಾಗಿ ತಡೆದು ನಿಲ್ಲಿಸಿದೆ. ವಿದ್ಯಾರ್ಥಿನಿಯು ಕೈಜೋಡಿಸಿ ತಮ್ಮನ್ನು ಬಿಟ್ಟುಬಿಡುವಂತೆ ಗೋಗರೆದರೂ, ಪುಂಡರ ಗುಂಪು ಆಕೆಯ ಮೇಲೆ ದೌರ್ಜನ್ಯ ಎಸಗಿ, ಎಳೆದಾಡಿ ಕಿರುಕುಳ



ನೀಡಿದೆ. ಈ ಕುರಿತು ಎಕ್ಸ್‌ನಲ್ಲಿ ಸರಣಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ಜಮುಯಿಯ ವಿಡಿಯೋ ಅತ್ಯಂತ ಕಳವಳಕಾರಿಯಾಗಿದೆ. ಬಾಲಕಿಯು ಎಷ್ಟೇ ಬೇಡಿಕೊಂಡರೂ ಆಕೆಯ ಮೇಲೆ ದೌರ್ಜನ್ಯ ಎಸಗಲಾಗಿದೆ. ಈ ರೀತಿಯಾಗಿ ವರ್ತಿಸಲು ಈ ಪುಂಡರಿಗೆ ಹಕ್ಕು ನೀಡಿದವರು ಯಾರು ಎಂದು ಪ್ರಶ್ನಿಸಿದ್ದಾರೆ. ಇದು ನಮ್ಮ ಸಂಸ್ಕೃತಿಯಲ್ಲ, ಇದು ಪಿತೃಪ್ರಭುತ್ವದ ವಿಕೃತಿ. ಮಹಿಳೆಯರ ದೇಹ, ಅವರ ಸಂಚಾರ ಮತ್ತು ನಿರ್ಧಾರಗಳನ್ನು ನಿಯಂತ್ರಿಸುವ ಹಕ್ಕು ಪುರುಷರಿಗಿದೆ ಎನ್ನುವ ಮನಸ್ಥಿತಿಯೇ ಇದಕ್ಕೆ ಕಾರಣ. ಈ ಘಟನೆ ಸೆಪ್ಟೆಂಬರ್ 19ರಂದು ನಡೆದಿದ್ದರೂ, ಆರೋಪಿಗಳು ಇನ್ನೂ ಏಕಾಗಿ ಜೈಲು ಪಾಲಾಗಿಲ್ಲ. ರಾಜ್ಯದ ರಸ್ತೆಗಳಲ್ಲಿ ಸಂಜೆ 7 ಗಂಟೆಯ ನಂತರ ಹೆಣ್ಣುಮಕ್ಕಳು ಸುರಕ್ಷಿತವಾಗಿರಲು ಸಾಧ್ಯವಿಲ್ಲವೇ ಎನ್ನುವುದಕ್ಕೆ ಬಿಹಾರ ಸರ್ಕಾರ ಉತ್ತರಿಸಬೇಕು ಎಂದು ನಿತೀಶ್ ಕುಮಾರ್ ನೇತೃತ್ವದ ಬಿಹಾರ ಸರ್ಕಾರದ ವಿರುದ್ಧ ಹರಿದಾಯ್ದಿದ್ದಾರೆ.

ವೈರಲ್ ವಿಡಿಯೋದಲ್ಲಿ ಕಂಡುಬರುವ ಪ್ರತಿಯೊಬ್ಬ ವ್ಯಕ್ತಿಯನ್ನು ತಕ್ಷಣವೇ ಗುರುತಿಸಿ, ಅವರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಕಠಿಣ ಪ್ರಕರಣ ದಾಖಲಿಸಿ ಶೀಘ್ರವೇ ಶಿಕ್ಷೆ ವಿಧಿಸಬೇಕೆಂದು ಅವರು ಆಗ್ರಹಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜಮುಯಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ವೀಡಿಯೋ ಆಧಾರದ ಮೇಲೆ ಆರೋಪಿಗಳನ್ನು ಗುರುತಿಸಲಾಗಿದ್ದು, ಈಗಾಗಲೇ ಕೆಲವರನ್ನು ಬಂಧಿಸಿ ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಬೆಲೆ ಏರಿಕೆ: ಕ್ಯಾ ಹುವಾ ತೇರಾ ವಾದಾ- ಮೋದಿಗೆ ಕಾಂಗ್ರೆಸ್ ಪ್ರಶ್ನೆ

**ನವದೆಹಲಿ, ಸೆ. 21:** ದೇಶದಲ್ಲಿ ಪ್ರಮುಖ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುತ್ತಿದೆ. ಇದನ್ನು ಖಂಡಿಸಿ ಕಾಂಗ್ರೆಸ್ ಪಕ್ಷವು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ. 1977ರ ಪ್ರಸಿದ್ಧ ಬಾಲಿವುಡ್ ಚಿತ್ರದ ಕ್ಯಾ ಹುಆ ತೇರಾ ವಾದಾ? (ಏನಾಯಿತು ನಿಮ್ಮ ಭರವಸೆ?) ಎಂಬ ಗೀತೆಯ ಸಾಲುಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ನಾಯಕರು ಮೋದಿ ಅವರ ಮೌನವನ್ನು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಈ ಬಗ್ಗೆ ಪೋಸ್ಟ್ ಮಾಡಿದ್ದಾರೆ. ದೇಶಾದ್ಯಂತ ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿರುವುದು ಮಧ್ಯಮ ಮತ್ತು ಬಡ ವರ್ಗದವರಿಗೆ ತೀವ್ರ ತೊಂದರೆ ಉಂಟು ಮಾಡಿದೆ. ದೈನಂದಿನ ಅಗತ್ಯ ವಸ್ತುಗಳ ಬೆಲೆಗಳು ಆಕಾಶಕ್ಕೆ ಮುಟ್ಟುತ್ತಿದ್ದು, ಸಾಮಾನ್ಯ ಜನರ ಜೀವನವನ್ನು ದುಸ್ತರಗೊಳಿಸಿವೆ ಎಂದು ಹೇಳಿದ್ದಾರೆ.

ಹಾಗೆಯೇ, ಕೇವಲ ಕಳೆದ ಒಂದು ತಿಂಗಳಲ್ಲೇ ಸಾಂಬಾರ ಪದಾರ್ಥಗಳ ಬೆಲೆಗಳು ಶೇ.10ರಿಂದ ಶೇ. 25ರಷ್ಟು ಏರಿಕೆಯಾಗಿವೆ. ಹಸಿ ಏಲಕ್ಕಿಯ ಬೆಲೆ ಪ್ರತಿ ಕೆಜಿಗೆ 4,000 ರಿಂದ 4,400ಕ್ಕೆ, ಕಪ್ಪು ಏಲಕ್ಕಿ 2,400ರಿಂದ 2,800ಕ್ಕೆ ಮತ್ತು ಜೀರಿಗೆಯ ಬೆಲೆ 360ರಿಂದ 400ಕ್ಕೆ ಏರಿದೆ. ಜಾಪತ್ರೆಯ ಬೆಲೆ ನೇರವಾಗಿ ಪ್ರತಿ ಕೆಜಿಗೆ 2,500ರಿಂದ 3,000ಕ್ಕೆ ಜಿಗಿದಿದೆ. ತೊಗರಿ ಬೇಳೆಯ ಬೆಲೆ ಪ್ರತಿ ಕೆಜಿಗೆ 100ರಿಂದ 130ಕ್ಕೆ, ಕಡಲೆ ಬೇಳೆ 70ರಿಂದ 100ಕ್ಕೆ ಮತ್ತು ಉದ್ದಿನ ಬೇಳೆ 120ರಿಂದ 140ಕ್ಕೆ ಏರಿಕೆಯಾಗಿದೆ. ಸಾಸಿವೆ ಎಣ್ಣೆಯ ಬೆಲೆ ಪ್ರತಿ ಲೀಟರ್‌ಗೆ 190ರಿಂದ 210ಕ್ಕೆ ಏರಿದ್ದರೆ, ಸಫೋಲಾ ಎಣ್ಣೆಯ ಬೆಲೆ 240ರಿಂದ 280ಕ್ಕೆ ತಲುಪಿದೆ ಎಂದು ಜೈರಾಮ್ ರಮೇಶ್ ತಿಳಿಸಿದ್ದಾರೆ.

ಜೂನ್ ಮತ್ತು ಸೆಪ್ಟೆಂಬರ್ ನಡುವೆ, ಈರುಳ್ಳಿಯ ಅಖಿಲ ಭಾರತ ಸರಾಸರಿ ಚಿಲ್ಲರೆ ಮಾರಾಟದ ಬೆಲೆ ಪ್ರತಿ ಕೆಜಿಗೆ 29.50ರಿಂದ 53.78ಕ್ಕೆ ಏರಿಕೆಯಾಗಿದೆ ಅಂದರೆ ಕೇವಲ ಮೂರೂವರೆ ತಿಂಗಳಲ್ಲಿ ಶೇ. 82.3 ರಷ್ಟು ಭಾರಿ ಏರಿಕೆ ಕಂಡುಬಂದಿದೆ. ಹೆಚ್ಚುತ್ತಿರುವ ಹಣದುಬ್ಬರದಿಂದಾಗಿ, ಸಮಾಜದ ಬಡ ವರ್ಗದ ಕುಟುಂಬಗಳಿಗೆ ಬೇಳೆಕಾಳುಗಳು ಮತ್ತು ಅಗತ್ಯ ಆಹಾರ ಪದಾರ್ಥಗಳನ್ನು ಖರೀದಿಸುವುದು ಕಷ್ಟಕರವಾಗುತ್ತಿದೆ. ಆದರೂ, ಪ್ರಧಾನ ಮಂತ್ರಿಯವರು ಹಣದುಬ್ಬರದ ವಿಷಯದಲ್ಲಿ ಮೌನವಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ವೇಳೆ ದೇಶ ಪ್ರಶ್ನಿಸುತ್ತಿದೆ. ಪ್ರಧಾನ ಮಂತ್ರಿಗಳೇ, ಆ ಅಚ್ಛೇ ದಿನ್ (ಒಳ್ಳೆಯ ದಿನಗಳು) ಎಲ್ಲಿಗೆ ಹೋದವು ಅವು ಈಗ ಕೇವಲ ಭಾಷಣಗಳಿಗೆ ಮಾತ್ರ ಸೀಮಿತವಾಗಿವೆಯೇ ಸರ್ಕಾರ ಮೌನವಾಗಿರುವಾಗ ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಇದೇನಾ ನವ ಭಾರತ ಕ್ಯಾ ಹುವಾ ತೇರಾ ವಾದಾ, ವೋ ಕಸಮ್ ವೋ ಇರಾದಾ (ನಿಮ್ಮ ಆ ಭರವಸೆಗೆ ಏನಾಯಿತು ಆ ಪ್ರತಿಜ್ಞೆ, ಆ ಸಂಕಲ್ಪಕ್ಕೆ ಏನಾಯಿತು) ಎಂದು ಹಾಡಿನ ಮೂಲಕ ಪ್ರಶ್ನಿಸಿದ್ದಾರೆ.

ಹಾಗೆಯೇ, ನಿಯಂತ್ರಣವಿಲ್ಲದ ಈ ಹಣದುಬ್ಬರವನ್ನು ತಡೆಗಟ್ಟಲು ಮತ್ತು ಸಾಮಾನ್ಯ ಜನರಿಗೆ ಪರಿಹಾರ ಒದಗಿಸಲು ಮೋದಿ ಸರ್ಕಾರವು ತಕ್ಷಣವೇ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ಪಾಕ್-ಅಫ್ಘಾನ್ ಗಡಿ ಸಂಘರ್ಷ ಉಲ್ಬಣ

**ನವದೆಹಲಿ, ಸೆ. 21:** ಪಾಕಿಸ್ತಾನ-ಅಫ್ಘಾನಿಸ್ತಾನ ಗಡಿ ಉದ್ವಿಗ್ನತೆ ಮತ್ತೆ ಹೆಚ್ಚಾಗಿದೆ. ಅಫ್ಘಾನಿಸ್ತಾನದ ಪೂರ್ವ ಭಾಗದಲ್ಲಿರುವ ಉಗ್ರರ ಅಡಗುತಾಣಗಳ ಮೇಲೆ ಪಾಕಿಸ್ತಾನ ಯುದ್ಧವಿಮಾನಗಳು ದಾಳಿ ನಡೆಸಿವೆ. ದಾಳಿಯಲ್ಲಿ 28 ಶಂಕಿತ ಉಗ್ರರು ಹತರಾಗಿದ್ದಾರೆ ಎಂದು ಪಾಕ್ ಅಧಿಕಾರಿಗಳು ಹೇಳಿದ್ದಾರೆ. ಆದರೆ ಕಾಬೂಲ್ ಪ್ರಕಾರ, ದಾಳಿಯಲ್ಲಿ 3 ನಾಗರಿಕರು ಮೃತಪಟ್ಟಿದ್ದು, 4 ಮಂದಿ ಗಾಯಗೊಂಡಿದ್ದಾರೆ ಎಂದಿದೆ. ಪಾಕಿಸ್ತಾನದ ಭದ್ರತಾ ಪಡೆಗಳ ಮೇಲೆ ನಡೆದ ದಾಳಿಗಳ ಬೆನ್ನಲ್ಲೇ ವಾಯುದಾಳಿ ನಡೆದಿದೆ. ಹಂಗು ಜಿಲ್ಲೆಯಲ್ಲಿ 6 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದರು. ಇದಕ್ಕೂ ಮುನ್ನ ಕೊಹಾಟ್ನಲ್ಲಿ ನಡೆದ ದಾಳಿಯಲ್ಲಿ 21 ಮಂದಿ ಮೃತಪಟ್ಟಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

ಈ ದಾಳಿಗಳ ಹಿಂದೆ ಪಾಕಿಸ್ತಾನ ತಾಲಿಬಾನ್ ಅಥವಾ ತೆಹ್ರಿಕ್-ಇ-ತಾಲಿಬಾನ್ ಪಾಕಿಸ್ತಾನ್ ಮತ್ತು ಅದರ ಸಹಚರ ಸಂಘಟನೆಗಳ ಕೈವಾಡವಿದೆ ಎಂದು ಪಾಕಿಸ್ತಾನ ಆರೋಪಿಸಿದೆ. ಅಫ್ಘಾನಿಸ್ತಾನದಲ್ಲಿರುವ ಉಗ್ರರ ಅಡಗುತಾಣಗಳು ಮತ್ತು ತರಬೇತಿ ಜಾಲಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾಬೂಲ್‌ಗೆ ಪಾಕಿಸ್ತಾನ ಒತ್ತಾಯಿಸಿದೆ.

ಅಫ್ಘಾನ್ ತಾಲಿಬಾನ್ ಸರ್ಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪಾಕಿಸ್ತಾನದ ವಾಯುದಾಳಿಯನ್ನು ಖಂಡಿಸಿ, ಇದಕ್ಕೆ ಪ್ರತಿಕ್ರಿಯೆ ನೀಡುವುದಾಗಿ ಹೇಳಿದ್ದಾರೆ. ಈ ದಾಳಿಗಳು ಎರಡು ದೇಶಗಳ ನಡುವಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿದ್ದು, ಗಡಿ ಭಾಗದಲ್ಲಿ ಮತ್ತೆ ಸಂಘರ್ಷ ಉಲ್ಬಣಿಸುವ ಆತಂಕವೂ ಎದುರಾಗಿದೆ.

ಕಳೆದ ಫೆಬ್ರವರಿಯಿಂದ ಪಾಕ್-ಅಫ್ಘಾನ್ ನಡುವೆ ಗಡಿ ಸಂಘರ್ಷ ಮತ್ತು ವಾಯುದಾಳಿ ಮುಂದುವರಿದಿವೆ. ಉದ್ವಿಗ್ನತೆ ಕಡಿಮೆ ಮಾಡಲು ಚೀನಾ ಸೇರಿದಂತೆ ಹಲವು ದೇಶಗಳು ಮಾತುಕತೆ ನಡೆಸುತ್ತಿವೆ. ಆದರೆ ಹೊಸ ದಾಳಿಯಿಂದ ಈ ರಾಜತಾಂತ್ರಿಕ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ.

# ಟಿಎಂಸಿ ಹೆಸರು, ಚಿಹ್ನೆ ಬಳಕೆಗೆ ತಡೆ: ಮಮತಾ ಅರ್ಜಿ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಅಸ್ತು

**ನವದೆಹಲಿ,ಸೆ.21:** ತೃಣಮೂಲ ಕಾಂಗ್ರೆಸ್ ಪಕ್ಷದ ಹೆಸರು ಹಾಗೂ ಚುನಾವಣಾ ಚಿಹ್ನೆ ಬಳಕೆಗೆ ತಡೆ ನೀಡಿರುವ ಚುನಾವಣಾ ಆಯೋಗದ ಮಧ್ಯಂತರ ಆದೇಶ ಪ್ರಶ್ನಿಸಿ ಪಶ್ಚಿಮ ಬಂಗಾಳದ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಸಲ್ಲಿಸಿರುವ ಅರ್ಜಿಯನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್‌ಮಾಲ್ಯ ಬಾಗ್ಚಿ ಹಾಗೂ ವಿ. ಮೊಹನಾ ಅವರನ್ನೊಳಗೊಂಡ ಪೀಠದ ಮುಂದೆ ಟಿಎಂಸಿ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಪಟ್ಟಿ ಮಾಡುವಂತೆ ಮನವಿ ಮಾಡಿದರು. ಚುನಾವಣಾ ಆಯೋಗವು ನೋಟಿಸ್ ನೀಡಿರುವ ಪ್ರಕ್ರಿಯೆ ನಡೆಯುತ್ತಿರುವಾಗಲೇ ಪಕ್ಷದ ಚುನಾವಣಾ ಚಿಹ್ನೆಯನ್ನು ತಡೆ ಮಾಡಿರುವುದನ್ನು ಅವರು ಪ್ರಶ್ನಿಸಿದರು.

ಟಿಎಂಸಿಯ ಎರಡು ಬಣಗಳು ಪಕ್ಷದ ಹೆಸರು, ಚುನಾವಣಾ ಚಿಹ್ನೆ ಹಾಗೂ ಸಂಘಟನಾ ನಿಯಂತ್ರಣದ ಮೇಲೆ ಹಕ್ಕು ಮಂಡಿಸಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಈ ವಿವಾದವನ್ನು ಪರಿಶೀಲಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಯೋಗವು ಮಧ್ಯಂತರ ಆದೇಶದ ಮೂಲಕ ಎರಡೂ ಬಣಗಳು ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಎಂಬ ಹೆಸರನ್ನು ಬಳಸುವುದನ್ನು ತಡೆದು, ಪಕ್ಷದ ಜೋಡಿ ಹುಲ್ಲು-ಹೂವು ಚಿಹ್ನೆಯನ್ನು ಅಂತಿಮ ತೀರ್ಮಾನವಾಗುವವರೆಗೆ ಫ್ರೀಜ್ ಮಾಡಿತ್ತು.

ನಂತರ ಮುಂಬರುವ ಉಪಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಎರಡೂ ಬಣಗಳಿಗೆ ಪ್ರತ್ಯೇಕ ಹೆಸರು ಹಾಗೂ ಚಿಹ್ನೆಗಳನ್ನು ಆಯೋಗ ಹಂಚಿಕೆ ಮಾಡಿದೆ. ಮಮತಾ ಬ್ಯಾನರ್ಜಿ ನೇತೃತ್ವದ ಬಣಕ್ಕೆ ಮಮತಾ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಎಂಬ ಹೆಸರು ಹಾಗೂ ಫುಟ್ಬಾಲ್ ಆಟಗಾರ ಚಿಹ್ನೆ ನೀಡಲಾಗಿದೆ. ಪ್ರತಿಸ್ಪರ್ಧಿ ಬಣಕ್ಕೆ ಡೆಮಾಕ್ರಟಿಕ್ ತೃಣಮೂಲ ಕಾಂಗ್ರೆಸ್ ಎಂಬ ಹೆಸರು ಹಾಗೂ ಲಕೋಟೆ ಚಿಹ್ನೆ ನೀಡಲಾಗಿದೆ.


ಸೆಪ್ಟೆಂಬರ್ 18ರಂದು ಮಮತಾ ಬ್ಯಾನರ್ಜಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಚುನಾವಣಾ ಆಯೋಗದ ಮಧ್ಯಂತರ ನಿರ್ಧಾರವನ್ನು ಪ್ರಶ್ನಿಸಿದ್ದಾರೆ. ಆಯೋಗದ ತೀರ್ಮಾನದಿಂದ ಟಿಎಂಸಿಯ ಮೂಲ ಹೆಸರು ಮತ್ತು ಚುನಾವಣಾ ಚಿಹ್ನೆ ಬಳಕೆಗೆ ತಡೆ ಉಂಟಾಗಿರುವುದನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಚುನಾವಣಾ ಆಯೋಗ ಹಾಗೂ ಪ್ರತಿಸ್ಪರ್ಧಿ ಬಣದ ನಾಯಕ ಋತಬ್ರತ ಬ್ಯಾನರ್ಜಿ ಅವರನ್ನು ಅರ್ಜಿಯಲ್ಲಿ ಪ್ರತಿವಾದಿಗಳಾಗಿ ಹೆಸರಿಸಲಾಗಿದೆ. ವಿಚಾರಣೆಯನ್ನು ತ್ವರಿತವಾಗಿ ನಡೆಸುವಂತೆ ಕಪಿಲ್ ಸಿಬಲ್ ಮನವಿ ಮಾಡಿದಾಗ, ಪ್ರಕರಣ ಪಟ್ಟಿ ಮಾಡಿದ ಸಂದರ್ಭದಲ್ಲಿ ಎರಡೂ ಬಣಗಳಿಗೆ ತಮ್ಮ ವಾದ ಮಂಡಿಸಲು ಅವಕಾಶವಿರಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ.

# ಏಷ್ಯನ್ ಕ್ರೀಡಾಕೂಟ: ಎರಡನೇ ದಿನ ನಾಲ್ಕು ಪದಕ ಗೆದ್ದ ಭಾರತ

**ಐಚಿ-ನಗೋಯಾ:** ಜಪಾನ್ ನ ಐಚಿ-ನಗೋಯಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನ ಎರಡನೇ ದಿನವಾದ ಸೋಮವಾರವೂ ಚಿನ್ನದ ಪದಕಕ್ಕಾಗಿ ಭಾರತದ ಬೇಟೆ ಮುಂದುವರಿದಿದೆ.. ಆದರೆ, ದಿನದ ಅಂತ್ಯಕ್ಕೆ ಪದಕಗಳ ಪಟ್ಟಿಗೆ ಇನ್ನೂ ನಾಲ್ಕು ಪದಕಗಳು ಸೇರಿದವು. ಇದರಲ್ಲಿ ಮೂರು ಪದಕಗಳು ಶೂಟಿಂಗ್‌ನಿಂದ ಬಂದವು ಮತ್ತು ಸುಚಿಕಾ ತರಿಯಾಲ್ 'ಮಿಕ್ಸ್ಡ್ ಮಾರ್ಷಲ್ ಆರ್ಟ್ಸ್' ನಲ್ಲಿ ಏಷ್ಯನ್ ಗೇಮ್ಸ್ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟುವಾಗಿ ಇತಿಹಾಸ ನಿರ್ಮಿಸಿದರು. ವೈದ್ಯಕೀಯ ಕಾರಣಗಳಿಂದಾಗಿ ಸಹ-ಸ್ಪರ್ಧಿ ವರುಣ್ ಸನ್ಯಾಲ್ ಅವರ ಒಒಂ ಅಭಿಯಾನ ಪ್ರಾರಂಭವಾಗುವ ಮುನ್ನವೇ ಕೊನೆಗೊಂಡರೂ, ಸುಚಿಕಾ ಅವರು ಭಾರತೀಯ ಒಒಂ ರಂಗವನ್ನು ಪ್ರತಿನಿಧಿಸುತ್ತಾ ಜಾಗತಿಕ ಮಟ್ಟದಲ್ಲಿ ತ್ರಿವರ್ಣ ಧ್ವಜವನ್ನು ಎತ್ತಿಹಿಡಿದರು. ಸಿಂಗಾಪುರದ ಹುಯಿ ಹೂನ್ ಟಿಯೊ ವಿರುದ್ಧ 2-0 ಅಂತರದಲ್ಲಿ ಸೋಲನುಭವಿಸಿದರೂ, ಅವರು ಅಂತಿಮವಾಗಿ ಕಂಚಿನ ಪದಕವನ್ನು ಗೆದ್ದುಕೊಂಡರು.

ಈ ಸೋಲಿನ ನಿರಾಶೆಯ ಹೊರತಾಗಿಯೂ, ಸುಚಿಕಾ ಅವರ ಕಂಚಿನ ಪದಕವು ಒಂದು ಮಹತ್ವದ ಸಾಧನೆಯಾಗಿದೆ. ಹರಿಯಾಣದ ರೋಹ್ಟಕ್ ಜಿಲ್ಲೆಯ ಕಿಲೋಯಿ ಗ್ರಾಮದವರಾದ ಇವರು, ಜಿಯು-ಜಿಟ್ಸುವಿನಲ್ಲಿ 2024ರ ವಿಶ್ವ ಚಾಂಪಿಯನ್ ಆಗಿದ್ದಾರೆ. ಅಲ್ಲದೆ, ಈ ಹಿಂದೆ 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಜೂಡೋ ಹಾಗೂ 2022ರ ಏಷ್ಯನ್ ಗೇಮ್ಸ್‌ನಲ್ಲಿ ಕುರಾಶ್ ಕ್ರೀಡೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಪಂದ್ಯದ ನಂತರ ಮಾತನಾಡಿದ ಸುಚಿಚಿದಕಾ, ಚಿನ್ನ ಗೆಲ್ಲಲು ತಮ್ಮ ಅತ್ಯುತ್ತಮ ಪ್ರಯತ್ನ ಮಾಡಿದೆ. ಆದರೆ ಕೆಲವು ಸಂದರ್ಭಗಳು ಮತ್ತು ಸಣ್ಣ ಕೊರತೆಯೊಂದು ಅದಕ್ಕೆ ಅಡ್ಡಿಯಾಯಿತು ಎಂದು ಅವರು ಅಭಿಪ್ರಾಯಪಟ್ಟರು. ಚಿನ್ನದ ಪದಕ ಗೆಲ್ಲಲು ಸಂಪೂರ್ಣ ಪ್ರಯತ್ನ ಮಾಡಿದೆ. ಆದರೆ ಕೆಲವು ಸಂದರ್ಭಗಳಿಂದಾಗಿ ಅದನ್ನು ಸಾಧಿಸಲು ಸಾಧ್ಯವಾಗಲಿಲ್ಲ, ಅಥವಾ ಬಹುಶಃ ನನ್ನ ಕಡೆಯಿಂದಲೇ








ಏನಾದರೂ ಸಣ್ಣ ಕೊರತೆಯಾಗಿರಬಹುದು ಎಂದು ಕಂಚಿನ ಪದಕ ಗೆದ್ದ ನಂತರ ಸುಚಿಕಾ ಂಖಿಋಗೆ ತಿಳಿಸಿದರು. ಎರಡು ದಿನಗಳ ಸ್ಪರ್ಧೆಯ ನಂತರ ಭಾರತವು ಈಗ ಒಟ್ಟು ಆರು ಪದಕಗಳನ್ನು ಹೊಂದಿದೆ. ಆದರೆ ಇನ್ನೂ ಚಿನ್ನದ ಪದಕ ಗೆದ್ದಿಲ್ಲ.

ಶೂಟಿಂಗ್ ವಿಭಾಗವು ಮತ್ತೊಮ್ಮೆ ಭಾರತಕ್ಕೆ ಅತಿಹೆಚ್ಚು ಪದಕಗಳನ್ನು ತಂದುಕೊಟ್ಟ ಕ್ಷೇತ್ರವಾಗಿ ಸಾಬೀತಾಯಿತು. ಪುರುಷರ 10 ಮೀಟರ್ ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲಿ ಹಿಮಾಂಶು ಧಿಲ್ಲೋನ್ ಬೆಳ್ಳಿ ಪದಕ ಮತ್ತು ರುದ್ರಾಂಕ್ಷ್ ಪಾಟೀಲ್ ಕಂಚಿನ ಪದಕ ಗೆದ್ದರು. ನಂತರ ಇವರಿಬ್ಬರೂ 18 ವರ್ಷದ ಪಾರ್ಥ್ ಮಾನೆ ಅವರೊಂದಿಗೆ ಸೇರಿ ಟೀಮ್ ಸ್ಪರ್ಧೆಯಲ್ಲಿ ಬೆಳ್ಳಿಪದಕವನ್ನು ಗೆದ್ದರು. ಈ ವಿಭಾಗದಲ್ಲಿ ಭಾರತವು ಒಟ್ಟು 1898.4 ಅಂಕಗಳನ್ನು ಗಳಿಸಿದರೆ, ಚೀನಾ 1899.0 ಅಂಕದೊಂದಿಗೆ ನೂತನ ವಿಶ್ವದಾಖಲೆಯೊಂದಿಗೆ ಮೊದಲ ಸ್ಥಾನ ಪಡೆದಿದೆ.

ಏಷ್ಯನ್ ಗೇಮ್ಸ್‌ನ ಎರಡನೇ ದಿನವಾದ ಸೋಮವಾರ ಅನೇಕ ಪಂದ್ಯಗಳಲ್ಲಿ ಭಾರತದ ಆಟಗಾರರು ಅದ್ಭುತ ಪ್ರದರ್ಶನ ನೀಡಿದರು. ಮಹಿಳೆಯರ ಹಾಕಿ ತಂಡ ಇಂಡೋನೇಷ್ಯಾ ತಂಡವನ್ನು 17-1 ಅಂತರದಿಂದ ಸೋಲಿಸಿದರೆ, ಭಾರತ ತಂಡವು ಪುರುಷರ ಕಬಡ್ಡಿಯಲ್ಲಿ ಜಪಾನ್ ತಂಡವನ್ನು 49.24 ಅಂತರದಿಂದ ಮಣಿಸಿತು. ಬ್ಯಾಡ್ಮಿಂಟನ್ ತಂಡವು ಕೂಡ ಅತ್ಯುತ್ತಮ ಆರಂಭವನ್ನು ಪಡೆಯಿತು. ಆರಂಭಿಕ ಸುತ್ತಿನಲ್ಲಿ ಭಾರತದ ಪುರುಷರ ತಂಡವು ಬಾಂಗ್ಲಾದೇಶವನ್ನು 3-0 ಅಂತರದಿಂದ ಸೋಲಿಸಿತು. ಲಕ್ಷ್ಯ ಸೇನ್, ಕೆ. ಶ್ರೀಕಾಂತ್ ಮತ್ತು ಆಯುಷ್ ಶೆಟ್ಟಿ ತಮ್ಮ ಸಿಂಗಲ್ಸ್ ಪಂದ್ಯಗಳಲ್ಲಿ ಜಯಗಳಿಸಿದ ಕಾರಣ, ಉಳಿದ ಡಬಲ್ಸ್ ಪಂದ್ಯಗಳ ಅಗತ್ಯವೇ ಇಲ್ಲದಂತಾಯಿತು.

ಭಾರತದ ಟೇಬಲ್ ಟೆನ್ನಿಸ್ ತಂಡಗಳು ಕೂಡ ಪಾಕಿಸ್ತಾನದ ವಿರುದ್ಧ 3-0 ಅಂತರದ ಭರ್ಜರಿ ಗೆಲುವು ಸಾಧಿಸಿದವು. ಮಹಿಳಾ ತಂಡವು ಸತತ ಮೂರನೇ ಗೆಲುವಿನೊಂದಿಗೆ 'ಗ್ರೂಪ್ ಎಫ್'ನಲ್ಲಿ ಅಗ್ರಸ್ಥಾನ ಕಾಯ್ದುಕೊಂಡರೆ, ಪುರುಷರ ತಂಡವು ಇರಾನ್ ವಿರುದ್ಧದ ಸೋಲಿನಿಂದ ಚೇತರಿಸಿಕೊಂಡು ಪಾಕಿಸ್ತಾನದ ವಿರುದ್ಧ ಸಂಪೂರ್ಣ ಜಯ (ಕ್ಲೀನ್ ಸ್ವೀಪ್) ದಾಖಲಿಸಿತು. ಬಾಕ್ಸಿಂಗ್‌ನಲ್ಲಿ, ಸುಮಿತ್ ಕುಂಡು ಪುರುಷರ 70 ಕೆಜಿ ವಿಭಾಗದಲ್ಲಿ ಥೈಲ್ಯಾಂಡ್‌ನ ಬುಂಜಾಂಗ್ ಸಿನ್ಸಿರಿ ಅವರನ್ನು 5-0 ಅಂತರದಿಂದ ಸೋಲಿಸುವ ಮೂಲಕ ತಮ್ಮ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿದರು.

**ಏಷ್ಯನ್ ಗೇಮ್ಸ್ 2026:** ಪುರುಷರ ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತಕ್ಕೆ ಬೆಳ್ಳಿ ಪದಕ; ಮಹಿಳೆಯರ ವಿಭಾಗದಲ್ಲಿ ಕೈತಪ್ಪಿದ ಚಿನ್ನ!

ಈಜು ಸ್ಪರ್ಧೆಯು ಭಾರತಕ್ಕೆ ಮತ್ತೊಮ್ಮೆ ಸವಾಲಿನದ್ದಾಗಿ ಪರಿಣಮಿಸಿತು. ಪುರುಷರ 50 ಮೀಟರ್ ಬ್ಯಾಕ್‌ಸ್ಟ್ರೋಕ್ ಫೈನಲ್‌ನಲ್ಲಿ ಶ್ರೀಹರಿ ನಟರಾಜ್ 10ನೇ ಸ್ಥಾನಕ್ಕೆ ತೃಪ್ತಿಪಟ್ಟರು. ಅರ್ಹತಾ ಸುತ್ತಿನಲ್ಲಿ ನಟರಾಜ್ 10ನೇ ಸ್ಥಾನ ಹಾಗೂ ರಿಷಭ್ ದಾಸ್ 11ನೇ ಸ್ಥಾನ ಪಡೆದಿದ್ದರು. ಆಕಾಶ್ ಮಣಿ ಹಾಗೂ ಹೀರ್ ಗಿತೇಶ್ ಶಾ ಪುರುಷರ 50 ಮೀ. ಫ್ರೀಸ್ಟೈಲ್ ಹೀಟ್ ನಲ್ಲಿ ಅರ್ಹತೆ ಪಡೆಯುವಲ್ಲಿ ವಿಫಲರಾದರು.

**ಸಾಫ್ಟ್ ಟೆನ್ನಿಸ್‌ನಲ್ಲೂ ಭಾರತಕ್ಕೆ ನಿರಾಶೆ** ಎದುರಾಯಿತು. ಫಿಲಿಪೈನ್ಸ್‌ನ ಕ್ರಿಸ್ಟಿ ಸನೋಸಾ ಮತ್ತು ಶೆರ್ವಿನ್ ರೇ ನುಗುಯಿಟ್ ವಿರುದ್ಧದ ತೀವ್ರ ಪೈಪೋಟಿಯ ಪಂದ್ಯದಲ್ಲಿ ಸೋಲುವ ಮೂಲಕ ಆಧ್ಯ ತಿವಾರಿ ಮತ್ತು ಜಯ್ ಮೀನಾ 'ರೌಂಡ್ ಆಫ್ 16' ಹಂತದಲ್ಲೇ ಹೊರಬಿದ್ದರು. ವುಶು ಸ್ಪರ್ಧೆಯಲ್ಲಿ ಫಲಿತಾಂಶ ಬಂದಿದ್ದು, ರೋಶಿಬಿನಾ ದೇವಿ ಹಾಗೂ ಆರ್ಯನ್ ಅವರು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು.

# ದಕ್ಷಿಣ ವಲಯ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದ ಮನೋಜ್

**ಶಿವಮೊಗ್ಗ, ಸೆ.21:** ಪುದುಚೇರಿಯಲ್ಲಿ ನಡೆದ 37ನೇ ದಕ್ಷಿಣ ವಲಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಮನೋಜ್ ಅವರು ಅಂಡರ್-20 ಬಾಯ್ಸ್ ಶಾಟ್ಪುಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.



ಪುದುಚೇರಿಯ ಇಂದಿರಾ ಗಾಂಧಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಈ ಪ್ರತಿಷ್ಠಿತ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಒಟ್ಟು 7 ರಾಜ್ಯಗಳ ಕ್ರೀಡಾಪಟುಗಳು ಭಾಗವಹಿಸಿದ್ದರು.

ರಾಷ್ಟ್ರೀಯ ಮಟ್ಟದ ಪ್ರಮುಖ ಕ್ರೀಡಾಕೂಟವಾಗಿರುವ ಈ ಸ್ಪರ್ಧೆಯಲ್ಲಿ ಕರ್ನಾಟಕದ ಪರವಾಗಿ ಕಣಕ್ಕಿಳಿದ ಮನೋಜ್ ಅವರು ಅತ್ಯುತ್ತಮ ಪ್ರದರ್ಶನ ನೀಡಿದರು.

ಅಂಡರ್-20 ಬಾಯ್ಸ್ ಶಾಟ್ಪುಟ್ ವಿಭಾಗದಲ್ಲಿ ಸ್ಪರ್ಧಿಸಿದ ಮನೋಜ್ ಅವರು 17.52 ಮೀಟರ್ ದೂರ ಎಸೆದು ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಕಠಿಣ ಸ್ಪರ್ಧೆಯ ನಡುವೆಯೂ ಉತ್ತಮ ಪ್ರದರ್ಶನ ನೀಡುವ ಮೂಲಕ ಅವರು ಈ ಸಾಧನೆ ಮಾಡಿದ್ದಾರೆ.

ಮನೋಜ್ ಅವರ ಈ ಸಾಧನೆಗೆ ಸ್ಥಳೀಯವಾಗಿ ಹಾಗೂ ಕ್ರೀಡಾಭಿಮಾನಿಗಳಿಂದ ಅಭಿನಂದನೆ ವ್ಯಕ್ತವಾಗಿದೆ. ಕರ್ನಾಟಕವನ್ನು ಪ್ರತಿನಿಧಿಸಿ ಸೌತ್ ಜೋನ್ ಮಟ್ಟದ ಪ್ರತಿಷ್ಠಿತ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿರುವುದು ರಾಜ್ಯದ ಕ್ರೀಡಾ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಿದ್ದ 37ನೇ ಸೌತ್ ಜೋನ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಸೆ.16ರಿಂದ 18 ರವರೆಗೆ ಪುದುಚೇರಿಯಲ್ಲಿ ನಡೆದಿದ್ದು, ಅಂಡರ್-14, ಅಂಡರ್-16, ಅಂಡರ್-18 ಹಾಗೂ ಅಂಡರ್-20 ವಿಭಾಗಗಳಲ್ಲಿ ವಿವಿಧ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆದಿವೆ.